ಕರ್ನಾಟಕ ಸರ್ಕಾರ

# ತಿಳಿ ಕನ್ನಡ

## ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ

(ಪರಿಷ್ಕೃತ)

**೧೦**

## ಹತ್ತನೆಯ ತರಗತಿ

©KTBS
Not to be republished

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
ನಂ.೪, ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ,
ಮೂರನೆಯ ಹಂತ, ಬೆಂಗಳೂರು – ೫೬೦ ೦೮೫

# ಪಠ್ಯಪುಸ್ತಕ ರಚನಾಸಮಿತಿ

**ಅಧ್ಯಕ್ಷರು :**

**ಪ್ರೊ. ಸಿ. ಉಪೇಂದ್ರ ಸೋಮಯಾಜಿ**

ನಿವೃತ್ತ ಪ್ರಾಧ್ಯಾಪಕರು, ಚಿತ್ರಪಾಡಿ–ಸಾಲಿಗ್ರಾಮ, ಉಡುಪಿ ಜಿಲ್ಲೆ – ೫೭೬೨೨೫

**ಸದಸ್ಯರು :**

ಶ್ರೀ ವಿ. ಪಿ. **ದಾರುಕಾರಾಧ್ಯ,** ರಾಜ್ಯ ಕನ್ನಡ ಸಂಪನ್ಮೂಲವ್ಯಕ್ತಿ, ೧೨೬೯, 'ಬೆನಕ', ೭ನೆಯ ಮುಖ್ಯರಸ್ತೆ, ಎ ಬ್ಲಾಕ್, ೨ನೆಯ ಹಂತ, ರಾಜಾಜಿನಗರ, ಬೆಂಗಳೂರು–೧೦

**ಶ್ರೀಮತಿ ವಿಜಯಲಕ್ಷ್ಮಿ,** ಮುಖ್ಯ ಶಿಕ್ಷಕಿ, ಎ.ಇ.ಎಸ್. ಪ್ರೌಢಶಾಲೆ, ೪ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–೧೧

**ಡಾ. ಬಿ. ಪ್ರಕಾಶ,** ಕನ್ನಡ ಅಧ್ಯಾಪಕರು, ಎನ್.ಐ.ಟಿ.ಕೆ. ಪ್ರೌಢಶಾಲೆ, ಶ್ರೀನಿವಾಸನಗರ, ಸುರತ್ಕಲ್.

**ಶ್ರೀ ಎ. ಭುಜಂಗಾಚಾರ್,** ಕನ್ನಡ ಭಾಷಾ ಶಿಕ್ಷಕರು, ಶ್ರೀ ಜ್ವಾಲಾಮಾಲಿನಿ ಪ್ರೌಢಶಾಲೆ, ಎನ್.ಆರ್.ಪುರ, ಚಿಕ್ಕಮಗಳೂರು .

**ಶ್ರೀ ಶಿವಯೋಗಿ ಮ. ಬಿದರಿ,** ನಿವೃತ್ತ ಉಪನ್ಯಾಸಕರು, 'ಸುಮ್ಮನೆ' ಬಸವ ನಗರ, ಗೋಕಾಕ್.

**ಶ್ರೀ ಸುಂದರ ತೋಡಾರ್**, ಚಿತ್ರಕಲಾ ಶಿಕ್ಷಕರು, ಸರಕಾರಿ ಪ್ರೌಢಶಾಲೆ, ಗೋಳಮಜಲು, ಬಂಟ್ವಾಳ, ದ.ಕ ಜಿಲ್ಲೆ.

**ಪರಿಶೀಲಕರು :**

**ಡಾ. ಹೆಚ್. ಎಂ. ಮಹೇಶ್ವರಯ್ಯ**

ಕನ್ನಡ ಪ್ರಾಧ್ಯಾಪಕರು ಮತ್ತು ಡೀನ್, ಕಲಾ ನಿಕಾಯ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

**ಸಂಪಾದಕ ಮಂಡಳಿ ಸದಸ್ಯರು :**

೧. **ಪ್ರೊ. ಚಂದ್ರಶೇಖರ ಪಾಟೀಲ್,** ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ. ನಗರ, ಬೆಂಗಳೂರು–೭೮

೨. **ಡಾ. ಕೆ. ಮರುಳಸಿದ್ಧಪ್ಪ,** ಸಾಹಿತಿಗಳು, ನಂ.೧೩೭, ೧೨ ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು–೭೮

೩. **ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

೪. **ಪ್ರೊ. ಅ.ರಾ. ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೫. **ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು :**

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**

ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

೧. **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

೨. **ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

©KTBS Not to be republished

# ಮುನ್ನುಡಿ

೨೦೦೫ ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**೨೦೦೫ ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜಿಸುವುದು.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು

©KTBS Not to be republished

ನೀಡಲಾಗಿದೆ. ಈ ಕೌಶಲ್ಯಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ. ಹತ್ತನೇ ತರಗತಿಯ ಪಠ್ಯಪುಸ್ತಕಗಳು ಒಂದು ದೃಷ್ಟಿಯಲ್ಲಿ ವೈಶಿಷ್ಟ್ಯಪೂರ್ಣವಾಗಿವೆ. ಇತರ ಪಠ್ಯಪುಸ್ತಕಗಳಂತೆಯೇ ಈ ಪಠ್ಯಪುಸ್ತಕಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ಬೆಳಸಿಕೊಳ್ಳಲು ಸಹಾಯ ಮಾಡುತ್ತವೆ. ಇದರೊಂದಿಗೆ ೧೦ನೇ ತರಗತಿ ಶಿಕ್ಷಣದ ಒಂದು ಹಂತದ ಅಂತ್ಯದಾಣವಾಗಿರುವುದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಬ್ಲಿಕ್ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

©KTBS Not to be republished

# ನಿಮ್ಮೊಂದಿಗೆ....

ಆಗಾಗ ಪಠ್ಯಪುಸ್ತಕಗಳು ಬದಲಾಗುತ್ತಲೇ ಇರಬೇಕು. ಶಿಕ್ಷಕರ ಬೌದ್ಧಿಕ ಬೆಳವಣಿಗೆಯ ದೃಷ್ಟಿಯಿಂದ ಮಾತ್ರವಲ್ಲ, ಬದಲಾಗುತ್ತಿರುವ ಸಾಮಾಜಿಕ ಸ್ಥಿತ್ಯಂತರಕ್ಕೆ ತಕ್ಕಂತೆಯೂ ಪುನಾರಚನೆಯ ಅಗತ್ಯ ಇದೆ. ವಿಜ್ಞಾನಕ್ಷೇತ್ರದಲ್ಲಿ ಹೊಸಹೊಸ ಆವಿಷ್ಕಾರಗಳಾಗುತ್ತಿರುತ್ತವೆ. ಹೊಸ ಸಿದ್ಧಾಂತಗಳು ಜನರ ಮನೋಭಾವನೆಯನ್ನು ಬದಲಿಸುತ್ತಿರುತ್ತವೆ; ಅನೇಕ ಮೌಲ್ಯಗಳ ಅರ್ಥಗ್ರಹಣದಲ್ಲಿ, ಅವುಗಳಿಗೆ ವ್ಯಾಖ್ಯಾನ ನೀಡುವಲ್ಲಿ ಹಳೆಯ ಅರ್ಥವ್ಯಾಪ್ತಿಯನ್ನು ಅಲ್ಲಗಳೆಯುತ್ತಿದ್ದೇವೆ; ಹೊಸ ಆಲೋಚನೆಗಳನ್ನು ತುಂಬಿಕೊಳ್ಳುತ್ತಿರುತ್ತೇವೆ; ಹಿರಿಯರ ಕಿರಿಯರ ನಡುವಣ ಹೊಂದಾಣಿಕೆ ಶಿಥಿಲಗೊಳ್ಳುತ್ತಿರುತ್ತವೆ. ಈ ಎಲ್ಲದರ ಮರುಸ್ಥಾಪನೆಯ ಕಾರ್ಯದಲ್ಲಿ ಹೊಸ ಪಠ್ಯಪುಸ್ತಕಗಳು ನೆರವಾಗಬೇಕು.

ಕನ್ನಡವನ್ನು ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡುವವರಿಗೆ ಅದು ಕಷ್ಟವಾಗಿರದೆ, ಖುಷಿಕೊಡುವ ವಿಷಯವೂ ಆಗಿರಬೇಕು; ಮನೆಯ ಹಿರಿಯರೂ ಪಾಠಗಳನ್ನು ಅರ್ಥಮಾಡಿಕೊಂಡು ಮಕ್ಕಳಿಗೆ ಮಾರ್ಗದರ್ಶನ ಮಾಡುವಂತಾಗಬೇಕು; ಪಾಠದ ಕೊನೆಯಲ್ಲಿ ಕೊಟ್ಟಿರುವ ಚಟುವಟಿಕೆಗಳು ಮಕ್ಕಳ ಜ್ಞಾನವಿಸ್ತಾರವನ್ನು ಹೆಚ್ಚಿಸಬೇಕು; ಪಾಠದೊಳಗಣ ಜೀವನಮೌಲ್ಯಗಳನ್ನು ಅರಿತು ಆ ಬಗ್ಗೆ ಪ್ರಜ್ಞಾವಂತರಾಗಬೇಕು ಎಂಬ ದೂರಗಾಮಿ ಗುರಿಯೊಂದಿಗೆ ಈ ಪಠ್ಯಪುಸ್ತಕದಲ್ಲಿ ಪಾಠಗಳನ್ನು ಕಟ್ಟಿಕೊಟ್ಟಿದ್ದೇವೆ. ಸತ್ವವನ್ನೇ ಅರಸುವ ಸಹೃದಯರಿಗೆ ಈ ಪುಸ್ತಕವು ನಿಶ್ಚಯವಾಗಿಯೂ ರುಚಿಸುತ್ತದೆ ಎಂದು ಭಾವಿಸಿದ್ದೇವೆ.

ಶಿಕ್ಷಕರಲ್ಲಿ ಒಂದು ಕೋರಿಕೆ. ಪ್ರತಿ ಪಾಠದ ಕೊನೆಯಲ್ಲಿರುವ ಚಟುವಟಿಕೆಗಳನ್ನು ಶಿಸ್ತುಬದ್ಧವಾಗಿ ಮುಗಿಸುವ ಹೊಣೆಗಾರಿಕೆಯು ನಿಮ್ಮಮೇಲಿದೆ. ಅದಕ್ಕಾಗಿ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡಿ. ಅವಕಾಶಗಳನ್ನು ಕಲ್ಪಿಸಿಕೊಡಿ. ಮಾಡಲೇಬೇಕಾದ ಅನಿವಾರ್ಯತೆಯ ಬಗ್ಗೆ ಮಕ್ಕಳನ್ನು ಪ್ರೇರೇಪಿಸಿ. ಇದರಿಂದ ಅವರ ವೈಯಕ್ತಿಕ ಬೆಳವಣಿಗೆ ಸಾಧ್ಯವಾಗುತ್ತದೆ. ಅವರು ಭವಿಷ್ಯದಲ್ಲಿ ನಾಯಕರಾಗಿಯೊ, ಸಹಾಯಕರಾಗಿಯೊ ಕಾರ್ಯಗಳನ್ನು ಯೋಜಿಸಲು, ಸ್ವತಂತ್ರವಾದ ನಿರ್ಣಯವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ಚಟುವಟಿಕೆಗಳಿಂದ ಬೋಧನೆ ಮತ್ತು ಕಲಿಕೆಯಲ್ಲಿಯ ಯಾಂತ್ರಿಕತೆ ದೂರವಾಗುತ್ತದೆ. ಅವು ಮಕ್ಕಳಲ್ಲಿ ಪರಸ್ಪರ ಸಹಕರಿಸುವ ಮನೋಭಾವವನ್ನು ಬೆಳೆಸುತ್ತವೆ. ಆರೋಗ್ಯಕರ ಸ್ಪರ್ಧೆಯಿಂದ ಕಲಿಕೆಯಲ್ಲಿ ವೇಗಸಂವರ್ಧನೆ ಆಗುತ್ತದೆ. ಗೆಲುವಿಗಾಗಿ ಹಾತೊರೆಯುವ ಹಾಗೆಯೇ ಸೋಲು ಬಂದಾಗ ಅದನ್ನು ಸ್ವೀಕರಿಸುವ ಮನೋಭಾವನೆಯೂ ಬೆಳೆಯುತ್ತದೆ. 'ಹೆಚ್ಚಿನ ಓದಿನ ಭಾಗ'ವನ್ನು ಮಕ್ಕಳಲ್ಲಿ ಸ್ವತಂತ್ರವಾಗಿ ಓದಿ ಅರ್ಥ ಮಾಡಿಕೊಳ್ಳುವಂತೆ ನೀಡಲಾಗಿದೆ. ಇದು ಪರೀಕ್ಷೆಗಾಗಿ ಅಲ್ಲ.

ವ್ಯಾಕರಣದ ವಿಷಯದಲ್ಲಿ ನಾವು ಸೂತ್ರಕ್ಕೆ, ನಿಯಮಕ್ಕೆ ಹೆಚ್ಚು ಬದ್ಧರಾಗಿರದೆ, ಎಷ್ಟುಬೇಕು, ಏಕೆ ಬೇಕು, ಹೇಗಿರಬೇಕು, ಔಚಿತ್ಯ, ಅಗತ್ಯ ಇವುಗಳಿಗಷ್ಟೇ ಮಹತ್ವವನ್ನು ಕೊಟ್ಟಿದ್ದೇವೆ. ಪಠ್ಯಾಧಾರಿತ ಪ್ರಶ್ನೆಗಳನ್ನಷ್ಟೇ ಅಲ್ಲ, ಮಕ್ಕಳು ಯೋಚಿಸುವ, ತರ್ಕಿಸುವ, ನಿರ್ಣಯಿಸುವ, ಒಳ್ಳೆಯದನ್ನು ಗುರುತಿಸುವಂತಹ ಪ್ರಶ್ನೆಗಳನ್ನೂ ನೀಡಿದ್ದೇವೆ. ದ್ವಿತೀಯ ಭಾಷೆಯನ್ನಾಗಿ ಕನ್ನಡವನ್ನು ಕಲಿಯುವ ಮಕ್ಕಳು ಇಂತಹ ಸಾಮರ್ಥ್ಯದಲ್ಲೂ ಪರಿಣಿತರಾಗಬೇಕು.

ಇಂತಹದೊಂದು ಪುಸ್ತಕವನ್ನು ರಚಿಸಲು ತಜ್ಞರ ಸಮಿತಿಯೊಂದನ್ನು ರಚಿಸಿದ ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.) ಇವರು ಅಭಿನಂದನಾರ್ಹರು. ಅಲ್ಲಲ್ಲಿ ಹೊಸತನದ ಹೊಳಹು ಕಾಣಿಸಿದರೆ ಅದಕ್ಕೆ ಸಂಯೋಜಕರಾಗಿರುವ ಪ್ರೊ.ಜಿ.ಎಸ್. ಮುಡಂಬಡಿತ್ತಾಯರ ಪ್ರೇರಣೆ, ಮಾರ್ಗದರ್ಶನ ಕಾರಣ. ಈ ಪಠ್ಯಪುಸ್ತಕವನ್ನು ಅರ್ಥಪೂರ್ಣವಾಗುವಂತೆ ಸಂಪಾದಿಸಲು ಕಾರಣರಾದವರು ನಮ್ಮ ಸಮಿತಿಯ ಸದಸ್ಯರು. ಅನುಮಾನ ಮೂಡಿದಾಗಲೆಲ್ಲ ಚರ್ಚಿಸಿ ಸೂಕ್ತವಾದುದನ್ನು ಅಳವಡಿಸುವಲ್ಲಿ ಅವರ ಸಹಕಾರ ಉಲ್ಲೇಖನೀಯ. ಈ ಪುಸ್ತಕದ ಪರಿಶೀಲಕರಾಗಿರುವ ಡಾ॥ ಎಚ್.ಎಂ. ಮಹೇಶ್ವರಯ್ಯ ಅವರ ಸಹಕಾರ – ಸಲಹೆಗಳು ಇದನ್ನು ಸರ್ವಾಂಗಸುಂದರವಾಗಿಸಿದೆ. ಕಾರ್ಯಕ್ರಮ ಸಂಯೋಜಕರಾಗಿರುವ ಶ್ರೀ ಪಾಂಡುರಂಗ ಅವರ ಸಹಕಾರ ಮರೆಯಲಾರದುದು. ಸಮಷ್ಟಿ ಹೊಣೆಗಾರಿಕೆಯಿಂದ ರಚನೆಗೊಂಡ ಈ ಪಠ್ಯಪುಸ್ತಕವು ಇದೀಗ ನಿಮ್ಮ ಕೈಯಲ್ಲಿದೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಇಲ್ಲಿಯ ಪಾಠ, ಅಭ್ಯಾಸ, ಚಟುವಟಿಕೆಗಳೆಲ್ಲವೂ ತೋರುಬೆರಳು ಮಾತ್ರ. ನಮ್ಮ ಕೆಲಸ ಇಲ್ಲಿಗೆ ಮುಗಿಯಿತು. ಇನ್ನುಳಿದ ಹೊಣೆಗಾರಿಕೆ ನಿಮ್ಮದು.

**ಪ್ರೊ. ಸಿ. ಉಪೇಂದ್ರ ಸೋಮಯಾಜಿ**
**ಅಧ್ಯಕ್ಷರು**
**ಪಠ್ಯಪುಸ್ತಕ ರಚನಾ ಸಮಿತಿ**

©KTBS Not to be republished

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ**

ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

**ಅಧ್ಯಕ್ಷರು**

**ಡಾ. ಕೆಂಪೇಗೌಡ**

ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬

**ಸದಸ್ಯರು**

**ಡಾ. ಗಣೇಶ್ ಜಿ. ಎಂ.**
ಸಹಾಯಕ ಪ್ರಾಧ್ಯಾಪಕರು, ಎಂ.ಎಲ್.ಎಂ.ಎನ್.
ಶಿಕ್ಷಣ ಮಹಾವಿದ್ಯಾಲಯ, ಜ್ಯೋತಿನಗರ, ಚಿಕ್ಕಮಗಳೂರು.

**ಡಾ. ಕೆ. ಷರೀಫಾ**
ಲೇಖಕಿ, ನಂ.೫/ಎ ೧ನೇ ಮಹಡಿ, ೧ನೇ ಬ್ಲಾಕ್,
೨ನೇ ಕ್ರಾಸ್, ಆರ್.ಟಿ. ನಗರ, ಬೆಂಗಳೂರು.

**ಶ್ರೀ ನಾಗರಾಜಾಚಾರಿ**
ಕನ್ನಡ ಶಿಕ್ಷಕರು, ಸರ್ಕಾರಿ ಉರ್ದು ಪ್ರೌಢಶಾಲೆ,
ಡಾ.ಟಿ.ಸಿ.ಎಂ. ರಾಯನ್ ರಸ್ತೆ, ಬೆಂಗಳೂರು.

**ಡಾ. ಬಂಗಾರಿಮಠ ಎಸ್. ವಿ.**
ಮುಖ್ಯಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಮುಡಕಲಕಟ್ಟಿ, ಧಾರವಾಡ ಜಿಲ್ಲೆ.

**ಶ್ರೀ ಪ್ರಕಾಶ್ ಎಸ್.**
ಸಿ.ಆರ್.ಪಿ. ಕ್ಷೇತ್ರ ಸಂಪನ್ಮೂಲ ಕೇಂದ್ರ, ಮದ್ದೂರು.
ಮಂಡ್ಯ ಜಿಲ್ಲೆ.

**ಶ್ರೀ ವೆಂಕಟೇಶ್ ಡಿ. ಎನ್.**
ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ವಲಯ.

## ಉನ್ನತ ಪರಿಶೀಲನಾ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್**
ನಿವೃತ್ತ ಪ್ರಾಧ್ಯಾಪಕರು, #೭, ೧೫ನೇ ಕ್ರಾಸ್, ೫ನೇ ಫೇಸ್,
ಜೆ.ಪಿ.ನಗರ, ಬೆಂಗಳೂರು-೭೮

**ಡಾ. ಜಿ.ಆರ್. ತಿಪ್ಪೇಸ್ವಾಮಿ**
ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು-೬

**ಡಾ. ಸೈಯದ್ ಜಮೀರ್ ಉಲ್ಲಾಷರೀಫ್**
ನಿವೃತ್ತ ಪ್ರಾಂಶುಪಾಲರು, ಭಟ್ಕಳ,
ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ**
ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು,
ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ**
ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು,
ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್**
ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾ ವಸಂತ**
ಸಹಪ್ರಾಧ್ಯಾಪಕರು ಕನ್ನಡವಿಭಾಗ, ತುಮಕೂರು
ವಿಶ್ವವಿದ್ಯಾಲಯ, ತುಮಕೂರು.

**ಡಾ. ಸತ್ಯನಾರಾಯಣ ಎಚ್.ಎಸ್.**
ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು,
ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ**

**ಶ್ರೀ ಗೋಪಾಲಕೃಷ್ಣ ಎಚ್.ಎನ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

**ಶ್ರೀ ಕೆ.ಜಿ.ರಂಗಯ್ಯ** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

**ಕಾರ್ಯಕ್ರಮ ಸಂಯೋಜಕರು**

**ಶ್ರೀ ಎ. ಚಂದ್ರಶೇಖರ್‌ಬಾಬು** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

©KTBS Not to be republished

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ಧರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪. ೧೧. ೨೦೧೪ ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆ ಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿ ದೋಷ, ಆಶಯ ದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

©KTBS Not to be republished

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನುಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**(ಗೋಪಾಲಕೃಷ್ಣ ಎಚ್.ಎನ್)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–೮೫

©KTBS Not to be republished

# ಪರಿವಿಡಿ


| ಕ್ರ. ಸಂ. | ಪಾಠದ ಹೆಸರು | ಕೃತಿಕಾರರು | ಪು. ಸಂ. |
|---|---|---|---|
| | **ಗದ್ಯಭಾಗ** | | |
| ೧. | ಒಣ ಮರದ ಗಿಳಿ | ಅ.ರಾ. ಮಿತ್ರ | ೦೧ – ೦೭ |
| ೨. | ಅಸಿ–ಮಸಿ–ಕೃಷಿ | ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ | ೦೮ – ೧೫ |
| ೩. | ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ | ರಮೇಶಗೌಡ ಎಂ.ಕೆ. | ೧೬ – ೨೬ |
| ೪. | ಹಕ್ಕಿಗೂಡುಗಳ ನಿಗೂಢ ಜಗತ್ತು | ಕೆ. ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ | ೨೭ – ೩೬ |
| ೫. | ಕಾಫೀ–ಕಪ್ಪು | ಗುರುರಾಜ ಕರ್ಜಗಿ | ೩೭ – ೪೪ |
| ೬. | ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ | ಬಸವಪ್ರಭು ಪಾಟೀಲ<br>ಕೆ. ಸಿದ್ಧಯ್ಯಸ್ವಾಮಿ | ೪೫ – ೫೩ |
| ೭. | ನನ್ನ ಗೋಪಾಲ | ಕುವೆಂಪು | ೫೪ – ೬೨ |
| | **ಪದ್ಯಭಾಗ** | | |
| ೧. | ಏಣಿ | ಸುಕನ್ಯಾ ಮಾರುತಿ | ೬೩ – ೬೬ |
| ೨. | ಬೋಧಿವೃಕ್ಷದ ಹಾಡು | ಬಸವರಾಜ ಸಬರದ | ೬೭ – ೭೦ |
| ೩. | ಸವಿಚೈತ್ರ | ಬಸವರಾಜ ಸಾದರ | ೭೧ – ೭೪ |
| ೪. | ಸದ್ದು ಮಾಡದಿರು | ಸಿ.ಪಿ. ಕೃಷ್ಣಕುಮಾರ್ | ೭೫ – ೭೮ |
| ೫. | ಗುರಿ | ಎಂ. ಗೋಪಾಲಕೃಷ್ಣ ಅಡಿಗ | ೭೯ – ೮೨ |
| ೬. | ಮೂಡಲ್ ಕುಣಿಗಲ್ ಕೆರೆ | ಜನಪದ | ೮೩ – ೮೭ |
| ೭. | ವಚನಗಳು | ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ | ೮೮ – ೯೨ |
| ೮. | ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ | ಕುಮಾರವ್ಯಾಸ (ಗದುಗಿನ ನಾರಣಪ್ಪ) | ೯೩ – ೯೮ |


©KTBS Not to be republished

| ಸೈದ್ಧಾಂತಿಕ ವ್ಯಾಕರಣ, ಛಂದಸ್ಸು ಮತ್ತು ಅಲಂಕಾರ. | | |
|---|---|---|
| ೧. | ಕನ್ನಡ ವರ್ಣಮಾಲೆ – ಕನ್ನಡ ಸಂಧಿಗಳು | ೦೫ – ೦೭ |
| ೨ | ಸಂಸ್ಕೃತ ಸಂಧಿಗಳು | ೧೩ – ೧೫ |
| ೩ | ನಾಮಪದ – ನಾಮಪದದ ವಿಧಗಳು | ೨೩ – ೨೬ |
| ೪ | ಕಾಲಗಳು – ವಿಭಕ್ತಿ ಪ್ರತ್ಯಯಗಳು | ೩೩ – ೩೬ |
| ೫ | ಸಮಾಸಗಳು | ೪೧ – ೪೪ |
| ೬ | ಅವ್ಯಯಗಳು, ದ್ವಿರುಕ್ತಿ–ಜೋಡುನುಡಿ–ನುಡಿಗಟ್ಟು, ತತ್ಸಮ–ತದ್ಭವ | ೫೧ – ೫೩ |
| ೭ | ಕ್ರಿಯಾಪದ | ೬೧ – ೬೨ |
| ೮ | ಛಂದಸ್ಸು | ೯೯ – ೧೦೨ |
| ೯ | ಅಲಂಕಾರಗಳು | ೧೦೨ – ೧೦೩ |


## ರಚನೆ


| | | |
|---|---|---|
| ೧ | ಪತ್ರಲೇಖನ | ೧೦೪ – ೧೦೬ |
| ೨. | ಪ್ರಬಂಧ ರಚನೆ | ೧೦೭ |
| ೩. | ಗಾದೆಗಳ ವಿಸ್ತರಣೆ | ೧೦೮ |


## ಪೂರಕ ಓದು


| | | |
|---|---|---|
| ೧ | ಕಳ್ಳರ ಗುರು – ಬೆಟಗೇರಿ ಕೃಷ್ಣಶರ್ಮ | ೧೦೯ – ೧೧೫ |
| ೨. | ಹೊಂಗೆ ಬೇವುಗಳ ಹಾಡು – ಡಾ. ಎಚ್.ಎಲ್. ಪುಷ್ಪ | ೧೧೬ – ೧೧೮ |


©KTBS Not to be republished

**ಗದ್ಯ ಭಾಗ**

# ೧. ಒಣ ಮರದ ಗಿಳಿ

– ಅ. ರಾ. ಮಿತ್ರ

**ಪಾಠ ಪ್ರವೇಶ :** ನೆಮ್ಮದಿಯ ನಾಳೆಗಾಗಿ ಇಂದೇ ನಾವು ಒಳಿತಿನ ಹಲವನ್ನು ಕಲಿಯಬೇಕು. ಈ ಕಲಿಕೆಯು ಓದಿನಿಂದ, ಕೇಳುವಿಕೆಯಿಂದ, ಸಮಾಜದಿಂದ, ಪ್ರಕೃತಿಯಿಂದ, ಪ್ರಾಣಿ–ಪಕ್ಷಿಗಳಿಂದ ಲಭ್ಯವಾಗುತ್ತದೆ. ಹಾಗಾಗಬೇಕಾದರೆ ಸಕಾರಾತ್ಮಕವಾಗಿ ಚಿಂತಿಸುವ ಒಳಗಣ್ಣು ಬೇಕು. ಹಾಗೆ ಕಲಿತುದನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಪಡೆದ ಶಿಕ್ಷಣಕ್ಕೆ ಸಾರ್ಥಕತೆ ಸಿಕ್ಕಂತಾಗುತ್ತದೆ. ಪ್ರಕೃತ ಪಾಠದಲ್ಲಿ ಗಿಳಿಯೊಂದರ ಕೃತಜ್ಞತಾ ಭಾವವು ಸುಂದರವಾಗಿ ಚಿತ್ರಿತವಾಗಿದೆ. ಪ್ರಕೃತಿಯನ್ನು ಪ್ರೀತಿಸಬೇಕು; ಪ್ರೀತಿಸುತ್ತಿರುವುದರ ಸಂಕೇತವಾಗಿ ನಮ್ಮ ಪರಿಸರವನ್ನು ಸದಾ ಸಸ್ಯ ಸಮೃದ್ಧವಾಗಿರುವಂತೆ ಇರಿಸಿಕೊಳ್ಳಬೇಕು; ನಮ್ಮ ಸರ್ವಾಂಗೀಣ ಬೆಳವಣಿಗೆಗೆ ಕಾರಣಕರ್ತರಾದ ಎಲ್ಲರನ್ನೂ, ಎಲ್ಲವನ್ನೂ ಕೃತಜ್ಞತೆಯಿಂದ ಗೌರವಿಸಬೇಕು ಎಂಬ ಸಂದೇಶ ಇಲ್ಲಿದೆ.

ಕಾಶಿಯಲ್ಲಿ ಒಬ್ಬ ಬೇಡನಿದ್ದ. ಅವನು ಎಂದಿನಂತೆ ಬೇಟೆಯಾಡಲು ಹೊರಟ. ಪ್ರಾಣಿಗಳನ್ನು ಕೊಲ್ಲಲು ಅವನು ವಿಷ ಸವರಿದ ಬಾಣಗಳನ್ನು ಸಿದ್ಧಮಾಡಿಕೊಂಡಿರುತ್ತಿದ್ದ. ಈ ಬಾಣ ತಗುಲಿದ ಕೂಡಲೇ ಪ್ರಾಣಿಗಳು ನಂಜಾಗಿ ಸಾಯುತ್ತಿದ್ದವು. ಬೇಟೆಗಾರನು ಕಣ್ಣಿಗೆ ಬಿದ್ದ ಒಂದು ಜಿಂಕೆಯನ್ನು ಬೆನ್ನಟ್ಟಿದ್ದ. ಅದು ಬಾಣಕ್ಕೆ ಗುರಿಯಾಗುವಷ್ಟು ದೂರಕ್ಕೆ ಬಂದಾಗ ವಿಷಯುಕ್ತ ಬಾಣವನ್ನು ಎಳೆದು ಬಿಟ್ಟ. ಆದರೆ ಜಿಂಕೆ ಹಾರಿ ತಪ್ಪಿಸಿಕೊಂಡಿತು. ಆ ಬಾಣವು ಒಂದು ಮರಕ್ಕೆ ತಾಕಿತು. ವಿಷದ ಪ್ರಭಾವದಿಂದ ಆ ಮರ ಒಣಗಿ ನಿಂತಿತು. ಅದರ ಪುಷ್ಪಸಮೃದ್ಧಿ, ಫಲಸಮೃದ್ಧಿ, ಹಸಿರಿನ ಸಿರಿ ಎಲ್ಲವೂ ಮಾಯವಾದವು. ಅಲ್ಲಿ ಬಹುಕಾಲದಿಂದ ಒಂದು ಗಿಳಿ ವಾಸ ಮಾಡುತ್ತಿತ್ತು. ಮರ ಒಣಗಿ ನಿಂತರೂ ಗಿಳಿ ಆ ಮರದ ಪೊಟರೆಯನ್ನು ಬಿಟ್ಟು ಹೋಗಲಿಲ್ಲ. ಅಲ್ಲಿ ಸಂಚರಿಸುತ್ತಿದ್ದ ಇಂದ್ರ ಇದನ್ನು ನೋಡಿದ. ಅವನಿಗೆ ಆಶ್ಚರ್ಯವಾಯಿತು. ಗಿಳಿಯನ್ನು ಕರೆದು ಇಂತಹ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ? ಎಂದು ಕೇಳಿದ. ಆ ಮಾತಿಗೆ ಗಿಳಿ ಹೀಗೆ ಹೇಳಿತು:



"ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ, ತನ್ನ ಹಸಿರು ಬಣ್ಣದಿಂದ ನನ್ನ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ, ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ

©KTBS Not to be republished

ಸ್ಥಿತಿಯಲ್ಲಿ ನಾನು ಅದನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಆ ಮರಕ್ಕೆ ಕೃತಘ್ನನಾಗಲೆ? ನಾನು ಎಲ್ಲೋ ಹೋಗಿ ಆಹಾರವನ್ನು ಸಂಪಾದಿಸಿಕೊಂಡು ಬರುತ್ತೇನೆ. ಆದರೆ ವಾಸ ಮಾತ್ರ ಇಲ್ಲೆ. ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ದುರ್ಭರ ಗಳಿಗೆಯಲ್ಲಿ ಕೂಡ ಅವರ ಜೊತೆಗೇ ಇದ್ದು ಉಪಕಾರಸ್ಮರಣೆ ಮಾಡಬೇಕು. ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು."

ಇಂದ್ರನಿಗೆ ತುಂಬ ಸಂತೋಷವಾಯಿತು. ಗಿಳಿಯ ನಡತೆ ಕೂಡ ಸಾಮಾನ್ಯವಾದ ಲೋಕವರ್ತನೆಗೆ ವಿರುದ್ಧವಾಗಿದೆ ಎಂದುಕೊಂಡ. ಆ ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿಕೊಂಡ. ಮನುಷ್ಯನ ಆದರ್ಶ ಬದುಕಿಗೆ ಈ ಸೂತ್ರ  ಮಾದರಿಯಾಗಬಲ್ಲದು ಎಂದುಕೊಂಡ. ಹೀಗೆ ಪರಹಿತಾಕಾಂಕ್ಷಿಯಾಗಿರುವ ಗಿಳಿರಾಯನಿಗೆ ಏನಾದರೂ ವರವನ್ನು ಕೊಡಬೇಕು ಎಂದು ತೀರ್ಮಾನಿಸಿದ. ಅದರ ಶ್ರದ್ಧೆಯನ್ನು ಮೆಚ್ಚಿ "ಏನಾದರೂ ವರವನ್ನು ಕೇಳು. ಕೊಡುತ್ತೇನೆ" ಎಂದ. ಅದು ಎಂಥ ಜನ್ಮ ಬಯಸಿದ್ದರೂ, ಎಂಥ ಭೋಗವನ್ನು ಬಯಸಿದ್ದರೂ ಕೊಡಲು ಅವನು ಸಿದ್ಧನಾಗಿದ್ದ. ಆದರೆ ಆ ಗಿಳಿ ಕೇಳಿದ್ದು ಏನು ಗೊತ್ತೆ?

"ದೇವರಾಜ, ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸಿರಿನಿಂದ ನಳನಳಿಸುವ, ಫಲಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸು! ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."

* * * *

## ಕೃತಿಕಾರರ ಪರಿಚಯ :



**ಅ. ರಾ. ಮಿತ್ರ** ಅವರು ೧೯೩೫ ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಎಂಬಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ. ಖ್ಯಾತ ವಾಗ್ಮಿಗಳಾದ ಇವರು ಕನ್ನಡದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಪಡೆದು ಉಪನ್ಯಾಸಕರಾಗಿ, ಬಳಿಕ ರೀಡರ್, ಪ್ರೊಫೆಸರ್, ಪ್ರಿನ್ಸಿಪಾಲರಾಗಿ ವಿವಿಧ ಕಡೆಗಳಲ್ಲಿ ಸೇವೆಸಲ್ಲಿಸಿದರು.

ಸಾಹಿತ್ಯ ಕ್ಷೇತ್ರದಲ್ಲೂ ಇವರ ಸಾಧನೆ ಅಸಾಮಾನ್ಯ. 'ಆರತಕ್ಷತೆ ಮತ್ತು ಇತರ ಪ್ರಬಂಧಗಳು', 'ನಾನೇಕೆ ಕೊರೆಯುತ್ತೇನೆ ಮತ್ತು ಇತರ ಪ್ರಬಂಧಗಳು' 'ಛಂದೋಮಿತ್ರ', 'ಕನ್ನಡ ಮೇಘದೂತ', 'ಮಹಾಭಾರತ ಪಾತ್ರ-ಸಂಗತಿಗಳು', 'ವಚನಕಾರರು ಮತ್ತು ಶಬ್ದಕಲ್ಪ', 'ಒಳನೋಟಗಳು', 'ಕವಿಗಳ ಬೆನ್ನೇರಿ', 'ಕೈಲಾಸಂ ಬದುಕು-ಬರಹ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, ಗೊರೂರು ಸಾಹಿತ್ಯ ಪ್ರಶಸ್ತಿ ಹಾಗೂ ಧರ್ಮಶ್ರೀ ನಗೆರಾಜ ಪ್ರಶಸ್ತಿಗಳು ಸಂದಿವೆ. ಪ್ರಕೃತ ಪಾಠವನ್ನು ಇವರ **'ಮಹಾಭಾರತ (ವ್ಯಾಸ) ಪಾತ್ರ-ಸಂಗತಿಗಳು'** ಪುಸ್ತಕದಿಂದ ಆರಿಸಲಾಗಿದೆ.

©KTBS Not to be republished

# ಅಭ್ಯಾಸ

## I. ಪದಗಳ ಅರ್ಥ :

**ಆಶ್ಚರ್ಯ**(ತ್ಸ) – ಅಚ್ಚರಿ(ದ್ಭ); ಬೆರಗು.

**ಕಳಕಳಿಸು** – ಮನೋಹರ; ಪ್ರಕಾಶಿಸು; ಹೊಳೆ.

**ಗಳಿಗೆ**(ದ್ಭ)–ಘಟಿಕಾ(ಸಂ); ೨೪ ನಿಮಿಷಗಳ ಕಾಲ.

**ದುರ್ಭರ** – ಧರಿಸಲಾಗದುದು; ಹೊರಲಾಗದುದು.

**ನಂಜು** – ವಿಷ

**ಪೊಟರೆ** – ಮರದೊಳಗಣ ಟೊಳ್ಳಾದ ಭಾಗ.

**ಭೋಗ** – ಸುಖದ ಅನುಭವ

**ಲೋಕವರ್ತನೆ** – ಲೋಕದ ಜನರ ನಡವಳಿಕೆ.

**ಸಂತೋಷ (ಸಂ)** – ಸಂತಸ(ದ್ಭ)

ಸಿರಿ (ದ್ಭ) – ಶ್ರೀ(ತ್ಸ); ಸಂಪತ್ತು.

**ಆಶ್ರಯ**(ತ್ಸ) – ಆಸರೆ(ದ್ಭ); ಅವಲಂಬನೆ.

**ಕೃತಘ್ನ** – ಉಪಕಾರ ಸ್ಮರಣೆ ಇಲ್ಲದವನು.

**ತತ್ವನಿಷ್ಠೆ** – ನಂಬಿದ ವಿಚಾರಗಳಿಗೆ ಬದ್ಧನಾಗಿರುವುದು; ಶ್ರದ್ಧೆ ತೋರುವುದು.

**ದುರದೃಷ್ಟ** – ಕೆಟ್ಟ; ಅದೃಷ್ಟ.

**ಪರಹಿತಾಕಾಂಕ್ಷೆ** –ಇನ್ನೊಬ್ಬರ ಒಳಿತನ್ನು ಬಯಸು.

**ಬೀಗು** – ಉಬ್ಬು; ಹಿಗ್ಗು; ಸಂತೋಷಪಡು.

**ಮುದ** – ಹಿಗ್ಗು; ಆನಂದ.

**ವರ** – ಕೊಡುಗೆ

**ಸಮೃದ್ಧಿ** – ಸಂಪತ್ತು; ಏಳಿಗೆ.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?

೨. ವಿಷದ ಬಾಣವು ಮರಕ್ಕೆ ಏಕೆ ತಗುಲಿತು?

೩. ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು?

೪. ಇಂದ್ರನಿಗೆ ಗಿಳಿಯನ್ನು ಕಂಡು ಆಶ್ಚರ್ಯವಾದದ್ದು ಏಕೆ?

೫. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?

೬. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?

೨. ಸಾಮಾನ್ಯವಾದ ಲೋಕವರ್ತನೆ ಯಾವುದು?

೩. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?

©KTBS Not to be republished

ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಗಿಳಿಯು ಪರಹಿತಾಕಾಂಕ್ಷಿ ಎನಿಸಿಕೊಂಡದ್ದು ಹೇಗೆ?

೨. ಗಿಳಿಯ ವರ್ತನೆಯಿಂದ ಮಾನವರಾದ ನಾವು ಕಲಿಯಬೇಕಾದ ಗುಣಗಳೇನು?

ಈ) ಸಂದರ್ಭದೊಂದಿಗೆ ವಿವರಿಸಿರಿ.

೧. "ಇಂಥ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ?."

೨. "ಏನಾದರೂ ವರವನ್ನು ಕೇಳು ಕೊಡುತ್ತೇನೆ."

೩. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."

## III. ಭಾಷಾಭ್ಯಾಸ :

ಅ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಆಶ್ರಯ : ಆಸರೆ :: ವರ್ಣ : ____________

೨. ಉಪಕಾರ : ಅಪಕಾರ :: ಅದೃಷ್ಟ : ____________

೩. ಗುರಿಯಾಗು : ಆಗಮ ಸಂಧಿ :: ಪರಹಿತಾಕಾಂಕ್ಷಿ : ____________

೪. ಜಿಂಕೆ : ರೂಢನಾಮ :: ಇಂದ್ರ : ____________

೫. ಕೃತಜ್ಞತೆ : ಉಪಕಾರ ಸ್ಮರಣೆ :: ಕೃತಘ್ನತೆ : ____________

ಆ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.

ಬೆನ್ನಟ್ಟು, ಬಾಣವನ್ನು, ಕಾಶಿಯಲ್ಲಿ.

ಇ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ರಾಯ, ಸಿರಿ, ವರ್ಷ, ಜನ್ಮ, ಆಶ್ಚರ್ಯ.

ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.

ರೋಗ, ಬಡತನ, ಕೃತಘ್ನ, ಫಲ, ಪರಹಿತ.

ಉ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ ಬರೆಯಿರಿ.

ಉಪಕಾರ ಸ್ಮರಣೆ, ಪರಹಿತ, ಕೃತಜ್ಞ, ಸಮೃದ್ಧಿ, ಆಶ್ಚರ್ಯ, ಸಂಪಾದಿಸು.

ಊ) ಮಾದರಿಯಂತೆ 'ಗಾರ' 'ತನ' ಪ್ರತ್ಯಯಗಳಿರುವ ಐದೈದು ಪದಗಳನ್ನು ಬರೆಯಿರಿ.

ಮಾದರಿ : ಬೇಟೆಗಾರ, ಬಡತನ.





©KTBS Not to be republished

# IV. ಸೈದ್ಧಾಂತಿಕ ವ್ಯಾಕರಣ :

ಈಗಾಗಲೇ ಎಂಟು ಮತ್ತು ಒಂಬತ್ತನೆಯ ತರಗತಿಗಳಲ್ಲಿ ಕನ್ನಡ ಭಾಷೆಯ ರಚನೆಗೆ ಸಂಬಂಧಿಸಿದ ವ್ಯಾಕರಣವನ್ನು ತಕ್ಕಮಟ್ಟಿಗೆ ಕಲಿತಿದ್ದೀರಿ. ಅವುಗಳನ್ನು ಮತ್ತೊಮ್ಮೆ ಅವಲೋಕಿಸುವುದರೊಂದಿಗೆ ಇನ್ನುಳಿದ ಅಂಶಗಳನ್ನು ಹತ್ತನೇ ತರಗತಿಯಲ್ಲಿ ತಿಳಿದುಕೊಳ್ಳುವುದು.

**ಕನ್ನಡ ವರ್ಣಮಾಲೆ :**




**ಗುಣಿತಾಕ್ಷರಗಳು :** ವ್ಯಂಜನಗಳಿಗೆ ಸ್ವರಾಕ್ಷರಗಳು ಸೇರಿ ಆಗುವ ಅಕ್ಷರಗಳನ್ನು ಗುಣಿತಾಕ್ಷರಗಳು ಎನ್ನುತ್ತೇವೆ.

| | | | | | |
|---|---|---|---|---|---|
| **ಉದಾ :** | **ವ್ಯಂಜನ** | + | **ಸ್ವರ** | = | **ಗುಣಿತಾಕ್ಷರ** |
| | ಕ್ | + | ಅ | = | ಕ |
| | ಚ್ | + | ಆ | = | ಚಾ |
| | ಟ್ | + | ಇ | = | ಟಿ |
| | ತ್ | + | ಈ | = | ತೀ |

ಈ ರೀತಿ ಎಲ್ಲಾ ವ್ಯಂಜನಗಳಿಗೂ ಸ್ವರಗಳನ್ನು ಸೇರಿಸಿ ಗುಣಿತಾಕ್ಷರಗಳನ್ನು ಮಾಡಬಹುದು.

©KTBS Not to be republished



ಒಳ್ಳೆಯ ಮಾತನ್ನು ಯಾರೇ ಆಡಲಿ, ಅದಕ್ಕೆ ಮನ್ನಣೆ ನೀಡು – ಗಯಟೆ

**ಸಂಯುಕ್ತಾಕ್ಷರಗಳು :**

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ಸಜಾತಿಯ ಸಂಯುಕ್ತಾಕ್ಷರ ಹಾಗೂ ವಿಜಾತಿಯ ಸಂಯುಕ್ತಾಕ್ಷರಗಳೆಂದು ಎರಡು ವಿಧಗಳಿವೆ.

೧. **ಸಜಾತಿಯ ಸಂಯುಕ್ತಾಕ್ಷರ :** ಒಂದೇ ಜಾತಿಯ (ಮೂಲದ) ಎರಡು ವ್ಯಂಜನಗಳೊಂದಿಗೆ ಒಂದು ಸ್ವರ ಸೇರಿದಾಗ ಸಜಾತಿಯ ಸಂಯುಕ್ತಾಕ್ಷರ ಉಂಟಾಗುತ್ತದೆ.

**ಉದಾ :** ಅಮ್ಮ, ಅಣ್ಣ, ಕಲ್ಲು, ಮಣ್ಣು, ಕನ್ನಡ, ಸದ್ದು.

೨. **ವಿಜಾತಿಯ ಸಂಯುಕ್ತಾಕ್ಷರ :** ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳ ಜತೆಯಲ್ಲಿ ಒಂದು ಸ್ವರ ಸೇರಿದಾಗ ವಿಜಾತಿಯ ಸಂಯುಕ್ತಾಕ್ಷರ ಉಂಟಾಗುತ್ತದೆ.

**ಉದಾ :** ಶಾಸ್ತ್ರ, ಸ್ತ್ರೀ, ಅಕ್ಷರ, ವಿದ್ಯೆ, ಕಷ್ಟ, ತ್ರಿಶೂಲ.

## ಸಂಧಿಗಳು :

ಎರಡು ಪದಗಳ ನಡುವಿನ ಎರಡು ಅಕ್ಷರಗಳು ಪರಸ್ಪರ ಕಾಲ ವಿಳಂಬವಾಗದಂತೆ ಅರ್ಥಕ್ಕೆ ಅನುಸಾರವಾಗಿ ಸೇರುವುದನ್ನು 'ಸಂಧಿ' ಎಂದು ಕರೆಯಲಾಗುತ್ತದೆ.

**ಕನ್ನಡ ಸಂಧಿಗಳು :**

ಸಂಧಿ ಆಗುವ ಎರಡು ಪದಗಳು ಕನ್ನಡ, ಇಲ್ಲವೇ ಒಂದು ಕನ್ನಡ ಮತ್ತೊಂದು ಸಂಸ್ಕೃತವಾಗಿದ್ದರೆ ಅದನ್ನು **'ಕನ್ನಡ ಸಂಧಿ'** ಎಂದು ಕರೆಯಲಾಗುತ್ತದೆ. ಕನ್ನಡ ಸಂಧಿಯಲ್ಲಿ ಮೂರು ವಿಧಗಳಿವೆ.

೧. **ಲೋಪ ಸಂಧಿ :** ಎರಡು ಸ್ವರಾಕ್ಷರಗಳ ನಡುವೆ ಸಂಧಿ ಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ ಸ್ವರವು ಅರ್ಥ ಕೆಡದಿರುವ ಸಂದರ್ಭದಲ್ಲಿ ಇಲ್ಲವಾಗುವುದನ್ನು 'ಲೋಪಸಂಧಿ' ಎಂದು ಕರೆಯಲಾಗುತ್ತದೆ.

| **ಉದಾ :** | **ಪೂರ್ವಪದ** | + | **ಉತ್ತರಪದ** | = | **ಸಂಧಿಪದ** |
|---|---|---|---|---|---|
| | ಮಾತು | + | ಇಲ್ಲ | = | ಮಾತಿಲ್ಲ |
| | ಬೇರೆ | + | ಒಬ್ಬ | = | ಬೇರೊಬ್ಬ |
| | ನಿನಗೆ | + | ಅಲ್ಲದೆ | = | ನಿನಗಲ್ಲದೆ |

©KTBS Not to be republished

೨. **ಆಗಮ ಸಂಧಿ :** ಲೋಪ ಸಂಧಿ ಮಾಡಿದರೆ ಅರ್ಥ ಕೆಡುವಂತಿದ್ದರೆ, ಆ ಎರಡು ಸ್ವರಗಳ ನಡುವೆ 'ಯ್' ಇಲ್ಲವೆ 'ವ್' ಅಕ್ಷರವನ್ನು ಹೊಸದಾಗಿ ಸೇರಿಸಿ ಸಂಧಿ ಮಾಡಿದರೆ ಅದನ್ನು 'ಆಗಮ ಸಂಧಿ' ಎಂದು ಕರೆಯುತ್ತಾರೆ. 'ಯ್' ಅಕ್ಷರ ಬಂದಲ್ಲಿ ಯಕಾರಾಗಮ ಸಂಧಿ ಎಂತಲೂ, 'ವ್' ಅಕ್ಷರ ಬಂದಲ್ಲಿ ವಕಾರಾಗಮ ಸಂಧಿ ಎಂತಲೂ ಎರಡು ವಿಧಗಳನ್ನು ಗುರುತಿಸಲಾಗುತ್ತದೆ.

| **ಉದಾ :** | **ಪೂರ್ವಪದ** | + | **ಉತ್ತರಪದ** | = | **ಸಂಧಿಪದ** |
|---|---|---|---|---|---|
| | ಗುರು | + | ಅನ್ನು | = | ಗುರುವನ್ನು |
| | ಪಿತೃ | + | ಅನ್ನು | = | ಪಿತೃವನ್ನು |
| | ಕೈ | + | ಅಲ್ಲಿ | = | ಕೈಯಲ್ಲಿ |
| | ಶಾಲೆ | + | ಇಂದ | = | ಶಾಲೆಯಿಂದ |

೩. **ಆದೇಶ ಸಂಧಿ :** ಎರಡು ಅಕ್ಷರಗಳ ನಡುವೆ ಸಂಧಿಕಾರ್ಯ ನಡೆಯುವಾಗ ಉತ್ತರ ಪದದ ಆದಿಯಲ್ಲಿರುವ 'ಕ್' 'ತ್' 'ಪ್' ವ್ಯಂಜನಗಳಿಗೆ ಕ್ರಮವಾಗಿ 'ಗ್' 'ದ್' 'ಬ್' ವ್ಯಂಜನಗಳು ಬದಲಿಯಾಗಿ ಬರುವುದನ್ನು 'ಆದೇಶ ಸಂಧಿ' ಎಂದು ಕರೆಯಲಾಗುತ್ತದೆ.

| **ಉದಾ :** | **ಪೂರ್ವಪದ** | + | **ಉತ್ತರಪದ** | = | **ಸಂಧಿಪದ** |
|---|---|---|---|---|---|
| | ಮಳೆ | + | ಕಾಲ | = | ಮಳೆಗಾಲ |
| | ಬೆಟ್ಟ | + | ತಾವರೆ | = | ಬೆಟ್ಟದಾವರೆ |
| | ಹೂ | + | ಪುಟ್ಟಿ | = | ಹೂಬುಟ್ಟಿ |

## V. ಚಟುವಟಿಕೆಗಳು :

೧ ಸಜ್ಜನನಲ್ಲಿ ಇರಬೇಕಾದ ಮೌಲ್ಯಗಳಾವುವು? ಗೆಳೆಯರೊಂದಿಗೆ ಚರ್ಚಿಸಿ. ಪ್ರತಿಯೊಂದು ಮೌಲ್ಯಕ್ಕೂ ಹೆಸರಾದ ಪುರಾಣ ಹಾಗೂ ಇತಿಹಾಸದಲ್ಲಿ ಪ್ರಸಿದ್ಧರಾದ ವ್ಯಕ್ತಿಗಳನ್ನು ಹೆಸರಿಸಿ. ಲೇಖನವೊಂದನ್ನು ಸಿದ್ಧಗೊಳಿಸಿ, ಶಾಲಾ ಕೈಬರೆಹದ ಪತ್ರಿಕೆಯಲ್ಲಿ ಪ್ರಕಟಿಸಿ.

೨. ಗಿಳಿಯು ಮಾತನಾಡುವುದಾಗಲೀ, ಇಂದ್ರನು ವರವನ್ನು ನೀಡುವುದಾಗಲೀ ವರ್ತಮಾನದಲ್ಲಿ ಆಗದ ಮಾತು, ಆದರೆ ಈ ಕತೆಯಲ್ಲಿ ಅದು ನಡೆದಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು? ಗೆಳೆಯರೊಂದಿಗೆ ಮುಕ್ತವಾಗಿ ಚರ್ಚಿಸಿ, ಪುಟ್ಟ ಲೇಖನವನ್ನು ಬರೆದು ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಿ.

೩. ವೃಕ್ಷಸಂಹಾರ ಹಾಗೂ ವೃದ್ಧರ ಅನಾದರ ಈ ಎರಡನ್ನೂ ಸಮನ್ವಯಗೊಳಿಸಿ ಒಂದು ಪ್ರಬಂಧವನ್ನು ಬರೆಯಿರಿ.

©KTBS Not to be republished

# ೨. ಅಸಿ–ಮಸಿ–ಕೃಷಿ

– ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

**ಪಾಠ ಪ್ರವೇಶ :** ಭಾರತ ಕೃಷಿ ಪ್ರಧಾನ ರಾಷ್ಟ್ರ. ರೈತ ದೇಶದ ಬೆನ್ನೆಲುಬು. 'ಹಳ್ಳಿಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ' ಎಂದು ಮಹಾತ್ಮಾ ಗಾಂಧೀಜಿ ಹೇಳುತ್ತಿದ್ದರು. ಆದರೆ ಇಂದು ರೈತರ ಬದುಕು ಸಂಕಷ್ಟದ ಸ್ಥಿತಿಯಲ್ಲಿದೆ. ಕನಿಷ್ಠ ಸುಖದ ಬದುಕು ಸಿಗದೆ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಅವನ ಗೋಳನ್ನು ಕೇಳುವವರಿಲ್ಲ. ಭಾರತದ ಅಭಿವೃದ್ಧಿಯ ಮೂಲ ಕೃಷಿ ಎಂಬುದನ್ನು ಮರೆಯಬಾರದು. ಭಾರತದಲ್ಲಿ ಕೃಷಿ ಚಟುವಟಿಕೆಗಳು ಕುಂಠಿತಗೊಂಡರೆ ಕೃಷಿಯನ್ನು ಅವಲಂಬಿಸಿದ ಕೈಗಾರಿಕೆಗಳೂ ಸೊರಗಿ ಹೋಗುತ್ತವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ದೇಶದ ಸಂರಕ್ಷಣೆಯಲ್ಲಿ ಸೈನಿಕರ ಪಾತ್ರ ಹಿರಿದಾಗಿದೆ. ವೈರಿಗಳ ದಾಳಿಗೆ ಧೃತಿಗೆಡದೆ ಹಗಲುರಾತ್ರಿ ಗಡಿಕಾಯುವ ಯೋಧನ ಬಗ್ಗೆ ಅಪಾರ ಅಭಿಮಾನವಿರಬೇಕು. ರಕ್ಷಣೆ ಹಾಗೂ ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸದೆ, ದೇಶದ ಮುನ್ನಡೆ ಸಾಧ್ಯವಿಲ್ಲ. ಹೀಗಾಗಿ ಅನ್ನ ಹಾಕುವ ರೈತ ಹಾಗೂ ಯೋಧನ ಬದುಕು ಹಸನುಗೊಳ್ಳಲು ಸರ್ಕಾರಗಳು ಹಾಗೂ ಬುದ್ಧಿಜೀವಿಗಳು ಶ್ರಮಿಸಬೇಕು. ಸಾಹಿತಿಗಳು ಸಾಹಿತ್ಯ ರಚನೆಯ ಮೂಲಕ ಯೋಧ ಹಾಗೂ ರೈತನಿಗೆ ಆತ್ಮ ಬಲವನ್ನು ತುಂಬಬೇಕು. ದೇಶದ ಸಂರಕ್ಷಣೆ ಹಾಗೂ ಅಭಿವೃದ್ಧಿಯು ಯೋಧ–ರೈತ–ಸಾಹಿತಿ ಈ ಮೂವರಲ್ಲಿದೆ ಎಂಬುದು ಈ ಲೇಖನದಲ್ಲಿ ಬಿಂಬಿತವಾಗಿದೆ.

©KTBS Not to be republished

ದೇಶದ ಪ್ರಗತಿ, ಜನರ ಉದ್ಧಾರ ಯಾವುದನ್ನು ಅವಲಂಬಿಸಿದೆ ಎನ್ನುವ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ರೀತಿಯ ಉತ್ತರ ನೀಡಬಹುದು. ವೈಜ್ಞಾನಿಕ ಬೆಳವಣಿಗೆಯೇ ನಿಜವಾದ ಪ್ರಗತಿ, ದೊಡ್ಡದೊಡ್ಡ ಅಣೆಕಟ್ಟುಗಳ ನಿರ್ಮಾಣವೇ ಜನರ ಉದ್ಧಾರದ ದಾರಿ, ವಿದ್ಯುತ್ ಉತ್ಪಾದನೆಯೇ ಇವೆಲ್ಲಕ್ಕೂ ಮೂಲ ಪ್ರೇರಣೆ ಎಂದೆಲ್ಲ ಹೇಳಬಹುದು. ಆದರೆ ನಮ್ಮ ಹಿರಿಯರು ಹೇಳುತ್ತಿದ್ದ ಮಾತುಗಳತ್ತಲೂ ಸ್ವಲ್ಪ ಗಮನ ಹರಿಸಬೇಕು. ದೇಶದ ಪ್ರಗತಿ, ಜನರ ಉದ್ಧಾರ ಅಸಿ, ಮಸಿ, ಕೃಷಿಯನ್ನು ಅವಲಂಬಿಸಿದೆ ಎನ್ನುತ್ತಿದ್ದರು. ಹೀಗೆಂದರೆ ಏನು? ಅಸಿ ಎಂದರೆ ಯುದ್ಧ, ಯುದ್ಧ ಎಂದರೆ ಸೈನಿಕರು. ಸೈನಿಕಬಲ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧ ಸಾರಿ ನಮ್ಮನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಆದುದರಿಂದ ಈ ದೇಶದ ರಕ್ಷಣೆ ಮಾಡುವವರು ಸೈನಿಕರು. ಅವರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನೂ ಹೊಡೆದುಹಾಕಿ ತನ್ನ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾಪಡೆ ತುಂಬಾ ಪ್ರಬಲವಾಗಿರಬೇಕು. ಅದಕ್ಕಾಗಿ ಎಷ್ಟೇ ಖರ್ಚಾದರೂ ಚಿಂತೆ ಇಲ್ಲ ಎನ್ನುವರು. ಅದು ಕಾರಣವೋ ಏನೋ ನಮ್ಮ ದೇಶದ ಬಜೆಟ್‌ನಲ್ಲಿ ಹೆಚ್ಚಿನ ಭಾಗ ರಕ್ಷಣಾ ಇಲಾಖೆಗೆ ಮೀಸಲಾಗಿರುವುದನ್ನು ನೋಡಬಹುದು.

ರಕ್ಷಣೆಗಿಂತ ಮುಖ್ಯವಾದುದು ಮಸಿ. ಶಿಕ್ಷಣ ಎಂದರೆ ಸಾಹಿತ್ಯ ರಚನೆ. 'ಪೆನ್ನು ಖಡ್ಗಕ್ಕಿಂತ ಹರಿತ' ಎನ್ನುವ ಗಾದೆ ಮಾತೇ ಇದೆ. ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರೆವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕತೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲುದು. ಒಂದು ಸರ್ಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಹುದು. ಈ ನಿಟ್ಟಿನಲ್ಲಿ ಬರೆವಣಿಗೆ ಹೆಚ್ಚು ಶಕ್ತಿಶಾಲಿಯಾದುದು. ಇವತ್ತು ಸಾಹಿತಿಗಳಿಗೆ ನಾಡಿನಲ್ಲಿ ಅಪಾರ ಗೌರವ ಇರುವುದು ಆ ಸಾಹಿತ್ಯದ ಸತ್ವದಿಂದಾಗಿ. ಅಂಥ ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜ ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ. ಬಸವಾದಿ ಶಿವಶರಣರ ವಚನಗಳು, ದಾಸರ ಕೀರ್ತನೆಗಳು, ಕುವೆಂಪು, ಬೇಂದ್ರೆಯಂಥವರ ಕಾವ್ಯ ಇವತ್ತಿಗೂ ಜನರ ಮೇಲೆ ಸತ್ಪರಿಣಾಮ ಬೀರಲು ಅಲ್ಲಿರುವ ಸತ್ವವೇ ಕಾರಣ. ಇದನ್ನು ಗಮನಿಸಿ ಹಿರಿಯರು ದೇಶದ ಸಮೃದ್ಧಿ, ಪ್ರಗತಿ ಮಸಿಯನ್ನೂ ಅವಲಂಬಿಸಿದೆ ಎಂದು ಹೇಳಿದ್ದರೆ ಅದರಲ್ಲಿ ಅಂಥ ಉತ್ಪ್ರೇಕ್ಷೆ ಇದೆ ಎಂದೆನಿಸದು.

ಅಸಿ, ಮಸಿಗಿಂತ ಮಹತ್ವದ್ದು ಕೃಷಿ. ಕೃಷಿಕ ನಮ್ಮ ನಾಡಿನ ಬೆನ್ನೆಲುಬು. 'ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು' ಎನ್ನುವ ಮಾತಿದೆ. ಅಂದರೆ ಕೃಷಿಕರೇನಾದರೂ ಸತ್ಯಾಗ್ರಹ ಮಾಡಿ ಒಂದು ವರ್ಷ ನಾವು ಭೂಮಿಯನ್ನು ಉಳುವುದಿಲ್ಲ, ಯಾವ ಬೆಳೆಯನ್ನೂ ತೆಗೆಯುವುದಿಲ್ಲ ಎನ್ನುವ ತೀರ್ಮಾನ ಮಾಡಿದರೆ ಗತಿ ಏನು? ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವೇ? ನಾವು ಯಾವ ಕಾರ್ಖಾನೆಯಿಂದಲೂ ಟೊಮೆಟೊ ತಯಾರಿಸಲು, ಅಕ್ಕಿ ಪಡೆಯಲು, ರಾಗಿ ಬೆಳೆಯಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕು. ಹಾಗಾಗಿ ಸರ್ವಜ್ಞ 'ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕೆಡಗುಂ' ಎಂದಿರುವುದು ಗಮನಾರ್ಹ. ಹೌದು, ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು. ಆ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಆದರೆ ಇಂದು ಇಂಥ ಕೃಷಿಕರ ಗತಿ ಏನಾಗಿದೆ? ಅವನು ಒಂದೆಡೆ ನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮತ್ತೊಂದೆಡೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಹೋರಾಟ ನಡೆಸಬೇಕಾಗಿದೆ.



©KTBS Not to be republished

ನಮ್ಮ ದೇಶದ ರಾಜಕಾರಣಿಗಳು, ಅಧಿಕಾರಿಗಳು, ಬಂಡವಾಳಶಾಹಿಗಳು, ವ್ಯಾಪಾರಸ್ಥರು, ಸಾಹಿತಿಗಳು, ಸಂಶೋಧಕರು, ವಿಜ್ಞಾನಿಗಳು ಹೀಗೆ ಪ್ರತಿಯೊಬ್ಬರೂ ಬದುಕುತ್ತಿರುವುದು ಕೃಷಿಕರನ್ನು ಅವಲಂಬಿಸಿಯೇ. ಆದರೆ ಅವರೆಲ್ಲರೂ ಕೃಷಿಕರನ್ನು ಉಪೇಕ್ಷೆ ಮಾಡುತ್ತಲೇ ಬಂದಿದ್ದಾರೆ. ಮೇಲಾಗಿ ಇವರಲ್ಲಿ ಬಹುತೇಕ ಜನರು ಬಂದಿರುವುದು ಕೃಷಿಕರ ಕುಟುಂಬಗಳಿಂದಲೇ. ನಿಜಸಂಗತಿ ಹೇಳಬೇಕೆಂದರೆ ರೈತರಷ್ಟು ಕಷ್ಟಪಡುವವರು ಮತ್ತೊಬ್ಬರಿಲ್ಲ. ಅವರಂತೆ ತೊಂದರೆ ಅನುಭವಿಸುವವರೂ ಬೇರೊಬ್ಬರಿಲ್ಲ. ಇವತ್ತಂತೂ ರೈತರು ಸಾಕಷ್ಟು ಬವಣೆಗಳನ್ನು ಎದುರಿಸುತ್ತಿದ್ದಾರೆ. ಮಳೆಯ ಅಭಾವ, ಇಲ್ಲವೆ ಅತಿವೃಷ್ಟಿ, ಭೂಮಿ ಬರಡಾಗುತ್ತಿರುವುದು, ಕಳಪೆ ಬೀಜಗಳು ಇತ್ಯಾದಿ. ಹೀಗಾಗಿ ಈ ಬದುಕೇ ನಶ್ವರ ಎನ್ನುವ ಭಾವನೆ ರೈತರಲ್ಲಿ ಬಂದಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಆದರೂ ರೈತರೂ ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ. ಹಾಸಿಗೆ ಇದ್ದಷ್ಟು ಕಾಲು ಚಾಚುತ್ತಿದ್ದಾರೆ.

ರೈತರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ. ಬದಲಾಗಿ ಎಲ್ಲರಿಂದಲೂ ಮೋಸ, ವಂಚನೆಗೆ ಒಳಗಾಗುತ್ತಿದ್ದಾರೆ. ಇಂಥ ಕೃಷಿಕರಿಗೆ ಬೇಕಾದ ಸತ್ವವನ್ನು ಸಾಹಿತ್ಯದ ಮೂಲಕವಾದರೂ ತುಂಬುವ ಕಾರ್ಯವನ್ನು ನಮ್ಮ ಸಾಹಿತಿಗಳು ಮಾಡದಿದ್ದರೆ ಅವರು ಕೃತಘ್ನರಾಗುವರು.

* * * *

## ಕೃತಿಕಾರರ ಪರಿಚಯ :



**ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು** ೧೯೫೧ ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಹೆಡಿಯಾಲ ಗ್ರಾಮದಲ್ಲಿ ಜನಿಸಿದರು. ಇವರು ಸಾಣೇಹಳ್ಳಿಯಲ್ಲಿ ರಂಗಶಾಲೆಯನ್ನು ಸ್ಥಾಪಿಸಿ, ಪ್ರತಿವರ್ಷ 'ರಾಷ್ಟ್ರೀಯ ನಾಟಕೋತ್ಸವ', 'ಶಿವಸಂಚಾರ', 'ವಿಚಾರ ಸಂಕಿರಣ', 'ವರ್ಷದ ಹರ್ಷ', 'ಶ್ರಾವಣ ಸಂಜೆ' ಇತ್ಯಾದಿ ಕಾರ್ಯಕ್ರಮಗಳನ್ನು ಸಂಘಟಿಸುತ್ತಾ ಬಂದಿದ್ದಾರೆ. ಇವರು ೬೦ ಕ್ಕೂ ಹೆಚ್ಚು ವೈಚಾರಿಕ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ – 'ಜೀವನ ದರ್ಶನ', 'ಕೈದೀವಿಗೆ', 'ಹುಟ್ಟು ಸಾವುಗಳ ಮಧ್ಯೆ', 'ಸಮಾಧಿಯ ಮೇಲೆ', 'ಕಾಯಕ ದಾಸೋಹ', 'ಪ್ರಳಯ! ಮುಂದೇನು?', 'ಸುಖ ಎಲ್ಲಿದೆ?', 'ಅರಿವಿನ ಅಂತರಾಳ', 'ಬಸವ ಧರ್ಮ' ಇತ್ಯಾದಿ ಪ್ರಬಂಧ ಸಂಕಲನಗಳು. 'ಅಂತರಂಗ ಬಹಿರಂಗ', 'ಸ್ವಾಮಿ ವಿವೇಕಾನಂದ', 'ಜಂಗಮದೆಡೆಗೆ', 'ಅಂಕುಶ' – ಇವು ನಾಟಕಗಳು. 'ಶಿವಾನುಭವ' ಪ್ರವಾಸ ಕಥನವಾಗಿದೆ. ಜೊತೆಗೆ ನೂರಾರು ವಚನಗಳನ್ನು ರಚಿಸಿದ್ದಾರೆ.

ಇವರ ರಂಗ ಸಾಧನೆಗೆ ಕರ್ನಾಟಕ ನಾಟಕ ಅಕಾಡೆಮಿಯ 'ಗೌರವ ಫೆಲೋಷಿಪ್', ಕರ್ನಾಟಕ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ', ಕುವೆಂಪು ವಿಶ್ವವಿದ್ಯಾನಿಲಯ 'ಗೌರವ ಡಾಕ್ಟರೇಟ್' ಹಾಗೂ ಅಂತಾರರಾಷ್ಟ್ರೀಯ ರೋಟರಿ ಸಂಸ್ಥೆಯು 'ಪಾಲ್ ಹ್ಯಾರಿಸ್' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರು 'ರಂಗ ಜಂಗಮ' ಎಂದು ಖ್ಯಾತರಾಗಿದ್ದಾರೆ. ಪ್ರಸ್ತುತ 'ಅಸಿ–ಮಸಿ–ಕೃಷಿ' ಲೇಖನವನ್ನು ಅವರ **'ವ್ಯಕ್ತಿತ್ವ'** ಎಂಬ ಪ್ರಬಂಧ ಸಂಕಲನದಿಂದ ಆರಿಸಲಾಗಿದೆ.

©KTBS Not to be republished

## ಅಭ್ಯಾಸ

## I. ಪದಗಳ ಅರ್ಥ :

**ಅಣೆಕಟ್ಟು** – ನದಿಗೆ ಅಡ್ಡ ಕಟ್ಟಿರುವ ಡ್ಯಾಂ, ಜಲಾಶಯ, ತಡೆಗೋಡೆ.
**ಅಸಿ** – ಖಡ್ಗ; ಯುದ್ಧ.
**ಉಪೇಕ್ಷೆ** – ತಿರಸ್ಕಾರ; ಅಲಕ್ಷ್ಯ, ನಿರಂಕುಶ ಪ್ರಭುತ್ವ
**ಕೃತಘ್ನ** – ಉಪಕಾರ ಸ್ಮರಣೆ ಇಲ್ಲದಿರುವವನು.
**ದುರಾಕ್ರಮಣ** – ಮೋಸದ ಧಾಳಿ
**ನಿರಾಶವಾದಿ** – ಜೀವನದಲ್ಲಿ ಆಸೆ ಕಳೆದುಕೊಂಡವ.
**ಬವಣೆ** – ತೊಂದರೆ; ಕಷ್ಟ.
**ಮಸಿ** – ಶಾಯಿ; ಸಾಹಿತ್ಯ ರಚನೆ.
**ಮೇಟಿಗಂಬ**–ಒಕ್ಕಲು ಕಣದ ಮಧ್ಯದಲ್ಲಿರುವ ಕಂಬ
**ಸತ್ಪರಿಣಾಮ** – ಒಳ್ಳೆಯ ಪರಿಣಾಮ
**ಹರಿತ** – ಚೂಪಾದ
**ಅತಿವೃಷ್ಟಿ** – ಅಗತ್ಯಕ್ಕಿಂತ ಹೆಚ್ಚುಮಳೆ ಬೀಳುವುದು.
**ಉತ್ಪ್ರೇಕ್ಷೆ** – ಅಧಿಕವಾಗಿ ವರ್ಣಿಸುವುದು.
**ಒಕ್ಕಲಿಗ** – ಕೃಷಿಕ; ರೈತ.
**ಗುಲಾಮ** – ಅಡಿಯಾಳು
**ನಶ್ವರ** – ನಶಿಸು; ಇಲ್ಲವಾಗು.
**ಬಜೆಟ್** –ಆಯವ್ಯಯದ ಸಮತೋಲನ ಪಟ್ಟಿ.
**ಬಿಕ್ಕು** – ಅಳು
**ಮೇಟಿ** – ವ್ಯವಸಾಯ
**ರಾಟೆ** – ಚಕ್ರ
**ಸರ್ವಾಧಿಕಾರಿ** – ಅಧಿಕಾರ ಒಬ್ಬನಲ್ಲಿರುವುದು

## II. ಪ್ರಶ್ನೆಗಳು :

**ಅ) ಕೆಳಗೆ ನೀಡಲಾಗಿರುವ ಗಾದೆ ಮಾತುಗಳನ್ನು ಪೂರ್ಣಗೊಳಿಸಿರಿ.**

೧. ಪೆನ್ನು ಖಡ್ಗಕ್ಕಿಂತ ___________
೨. ಒಕ್ಕಲಿಗ ಒಕ್ಕದಿರೆ ___________
೩. ಕೋಟಿ ವಿದ್ಯೆಗಳಲಿ ___________
೪. ಹಾಸಿಗೆ ಇದ್ದಷ್ಟು ___________

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?
೨. ಅಸಿ–ಮಸಿ ಎಂದರೇನು?
೩. ಈ ನಾಡಿನ ಬೆನ್ನೆಲುಬು ಯಾರು?
೪. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?
೫. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ?

©KTBS Not to be republished



ಒಂದು ಹೃದಯವನ್ನು ಅರ್ಥಮಾಡಿಕೊಳ್ಳಲು ಇನ್ನೊಂದು ಹೃದಯದಿಂದ ಮಾತ್ರ ಸಾಧ್ಯ – ಗೌತಮ ಬುದ್ಧ

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ದೇಶದ ಅಭಿವೃದ್ಧಿ ಕುರಿತು ಜನರಾಡುವ ಮಾತುಗಳಾವುವು?

೨. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು?

೩. ಪೆನ್ನು ಖಡ್ಗಕ್ಕಿಂತ ಹರಿತವಾದುದು ಏಕೆ?

೪. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?

೫. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?

೬. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ದೇಶದ ಬಜೆಟ್‌ನಲ್ಲಿ ರಕ್ಷಣಾ ಇಲಾಖೆಗೆ ಹೆಚ್ಚಿನ ಹಣವನ್ನು ಏಕೆ ಮೀಸಲಾಗಿಡುತ್ತದೆ?

೨. ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು?

೩. 'ಕೃಷಿಕ ನಾಡಿನ ಬೆನ್ನೆಲುಬು' ಈ ಮಾತನ್ನು ಸಮರ್ಥಿಸಿರಿ.

**ಉ) ಸಂದರ್ಭದೊಡನೆ ವಿವರಿಸಿರಿ.**

೧. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.

೨. ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ.

೩. ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ.

೪. ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.**

ಒಬ್ಬೊಬ್ಬರು, ಸರ್ವಾಧಿಕಾರಿ, ಬೆನ್ನೆಲುಬು, ಸತ್ಯಾಗ್ರಹ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಪ್ರಗತಿ, ಅವಲಂಬನೆ, ಪ್ರಬಲ, ಸತ್ಪರಿಣಾಮ, ಆಶಾವಾದಿ, ಅತಿವೃಷ್ಟಿ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಉತ್ಪ್ರೇಕ್ಷೆ, ಸತ್ಪರಿಣಾಮ, ಸಮೃದ್ಧಿ, ಸತ್ಯಾಗ್ರಹ, ಸೆಣಸು, ಉಪೇಕ್ಷೆ.



ನಮ್ಮ ಉತ್ತಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವವರು ನಾವೇ ಎಂಬುದು ಖಂಡಿತ – ಗಯಟೆ

© KTBS Not to be republished

**ಈ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪ ಬರೆಯಿರಿ.**

ವರ್ಷ, ಭೂಮಿ, ಕತೆ, ಬೇಸಾಯ, ಕಾರ್ಯ, ಕಾವ್ಯ.

**ಉ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ, ಮೂರನೇ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

೧. ಅಸಿ : ಯುದ್ಧ :: ಮಸಿ : ________

೨. ಕ್ರಿಮಿಕೀಟ : ಜೋಡುನುಡಿ :: ದೊಡ್ಡ ದೊಡ್ಡ : ________

೩. ಯುದ್ಧ : ಜುದ್ದ :: ಶ್ರೀ : ________

೪. ಯೋಧ : ರಕ್ಷಣೆ :: ರೈತ : ________

## IV. ಸೈದ್ಧಾಂತಿಕ ವ್ಯಾಕರಣ :

### ಸಂಸ್ಕೃತ ಸಂಧಿಗಳು :

ಸಂಧಿ ಆಗುವ ಎರಡು ಪದಗಳು ಸಂಸ್ಕೃತವಾಗಿದ್ದರೆ ಅದನ್ನು **'ಸಂಸ್ಕೃತ ಸಂಧಿ'** ಎಂದು ಕರೆಯಲಾಗುತ್ತದೆ. ಇದರಲ್ಲಿ ಸಂಸ್ಕೃತ ಸ್ವರಸಂಧಿಗಳು ಹಾಗೂ ಸಂಸ್ಕೃತ ವ್ಯಂಜನ ಸಂಧಿಗಳು ಎಂದು ಎರಡು ವಿಭಾಗಗಳಿವೆ. ಮೊದಲಿಗೆ ಸಂಸ್ಕೃತ ಸ್ವರ ಸಂಧಿಗಳನ್ನು ತಿಳಿಯೋಣ.

### ಸಂಸ್ಕೃತ ಸ್ವರ ಸಂಧಿಗಳು :

**೧. ಸವರ್ಣದೀರ್ಘ ಸಂಧಿ :** ಎರಡು ಸವರ್ಣ ಸ್ವರಗಳ (ಅ+ಆ, ಇ+ಈ, ಉ+ಊ, ಎ+ಏ, ಒ+ಓ) ನಡುವೆ ಸಂಧಿ ಕಾರ್ಯ ನಡೆದಾಗ ಅವೆರಡರ ಸ್ಥಾನದಲ್ಲಿ ಅದೇ ವರ್ಣದ ದೀರ್ಘಸ್ವರವು ಆದೇಶವಾಗಿ ಬರುವುದನ್ನು 'ಸವರ್ಣದೀರ್ಘ ಸಂಧಿ' ಎಂದು ಕರೆಯಲಾಗುತ್ತದೆ.

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ದೇವ | + | ಆಲಯ | = ದೇವಾಲಯ |
| | ಮಹಾ | + | ಅನುಭಾವ | = ಮಹಾನುಭಾವ |
| | ಗಿರಿ | + | ಇಂದ್ರ | = ಗಿರೀಂದ್ರ |

**೨. ಗುಣ ಸಂಧಿ :** ಪೂರ್ವಪದದ ಅಂತ್ಯದಲ್ಲಿ 'ಅ' ಅಥವಾ 'ಆ' ಸ್ವರಗಳಿದ್ದು, ಅವುಗಳಿಗೆ 'ಇ' ಅಥವಾ 'ಈ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಸ್ವರವು, 'ಉ' ಅಥವಾ 'ಊ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಸ್ವರವು, ಅದೇ ರೀತಿ 'ಋ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಆದೇಶವಾಗಿ ಬರುವುದನ್ನು 'ಗುಣ ಸಂಧಿ' ಎಂದು ಕರೆಯಲಾಗುತ್ತದೆ.



**ದೇಶದಲ್ಲಿರುವವರೆಲ್ಲರೂ ದೇಶಪ್ರೇಮಿಗಳಾದರೆ ಪರಕೀಯರ ಧಾಳಿ ಅಸಾಧ್ಯ - ಸುಭಾಷ್ ಚಂದ್ರ ಬೋಸ್**

© KTBS Not to be republished

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ವೀರ | + | ಈಶ | = ವೀರೇಶ |
| | ಮಹಾ | + | ಉತ್ಸವ | = ಮಹೋತ್ಸವ |
| | ರಾಜ | + | ಋಷಿ | = ರಾಜರ್ಷಿ |

೩. **ವೃದ್ಧಿ ಸಂಧಿ :** ಪೂರ್ವಪದದ ಅಂತ್ಯದಲ್ಲಿ 'ಅ' ಅಥವಾ 'ಆ' ಸ್ವರಗಳಿದ್ದು, ಅವುಗಳಿಗೆ 'ಏ' ಅಥವಾ 'ಐ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಸ್ವರವು, ಅದೇರೀತಿ 'ಓ' ಅಥವಾ 'ಔ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಸ್ವರವು ಆದೇಶವಾಗಿ ಬರುತ್ತದೆ. ಇದನ್ನೇ 'ವೃದ್ಧಿ ಸಂಧಿ' ಎಂದು ಕರೆಯಲಾಗುತ್ತದೆ.

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಏಕ | + | ಏಕ | = ಏಕೈಕ |
| | ಭಾವ | + | ಐಕ್ಯ | = ಭಾವೈಕ್ಯ |
| | ಜಲ | + | ಓಘ | = ಜಲೌಘ |
| | ದಿವ್ಯ | + | ಔಷಧಿ | = ದಿವ್ಯೌಷಧಿ |

೪. **ಯಣ್ ಸಂಧಿ :** ಪೂರ್ವಪದದ ಅಂತ್ಯದಲ್ಲಿನ ಇ,ಈ,ಉ,ಊ,ಋ ಸ್ವರಗಳಿಗೆ ಅನ್ಯಸ್ವರಗಳು ಪರವಾದಾಗ 'ಇ','ಈ' ಸ್ವರಗಳಿಗೆ 'ಯ್' ಕಾರವೂ, 'ಉ', 'ಊ' ಸ್ವರಗಳಿಗೆ 'ವ್' ಕಾರವೂ, 'ಋ' ಸ್ವರಕ್ಕೆ 'ರ್' ಕಾರವು ಆದೇಶವಾಗಿ ಬರುವುದು. ಇದನ್ನು 'ಯಣ್‌ಸಂಧಿ' ಎಂದು ಕರೆಯಲಾಗುತ್ತದೆ.

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಅತಿ | + | ಉಕ್ತಿ | = ಅತ್ಯುಕ್ತಿ |
| | ಮನು | + | ಅಂತರ | = ಮನ್ವಂತರ |
| | ಪಿತೃ | + | ಆರ್ಜಿತ | = ಪಿತ್ರಾರ್ಜಿತ |

## ಸಂಸ್ಕೃತ ವ್ಯಂಜನ ಸಂಧಿಗಳು :

೧. **ಜಸ್ತ್ವ ಸಂಧಿ :** ಪೂರ್ವಪದದ ಕೊನೆಯಲ್ಲಿರುವ ಕ್,ಚ್,ಟ್,ತ್,ಪ್, ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳು (ಗ್,ಜ್,ಡ್,ದ್,ಬ್,) ಆದೇಶವಾಗಿ ಬರುತ್ತವೆ. ಇದನ್ನು 'ಜಸ್ತ್ವ ಸಂಧಿ' ಎನ್ನುತ್ತಾರೆ.



©KTBS Not to be republished

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ವಾಕ್ | + | ದೇವಿ | = ವಾಗ್ದೇವಿ |
| | ಅಚ್ | + | ಅಂತ | = ಅಜಂತ |
| | ಷಟ್ | + | ಆನನ | = ಷಡಾನನ |

**೨. ಶ್ಚುತ್ವ ಸಂಧಿ :** ಪೂರ್ವಪದದ ಕೊನೆಯಲ್ಲಿ ಸಕಾರ ಇಲ್ಲವೇ ತವರ್ಗಾಕ್ಷರಗಳಿಗೆ ಶಕಾರ ಇಲ್ಲವೇ ಚವರ್ಗಾಕ್ಷರಗಳು ಪರವಾದಾಗ ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶಗಳಾಗಿ ಬರುತ್ತವೆ. ಇದನ್ನು 'ಶ್ಚುತ್ವ ಸಂಧಿ' ಎನ್ನುತ್ತಾರೆ.

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಮನಸ್ | + | ಶುದ್ಧಿ | = ಮನಶ್ಶುದ್ಧಿ |
| | ಸತ್ | + | ಚಿತ್ರ | = ಸಚ್ಚಿತ್ರ |
| | ಜಗತ್ | + | ಜ್ಯೋತಿ | = ಜಗಜ್ಜ್ಯೋತಿ |

**೩. ಅನುನಾಸಿಕ ಸಂಧಿ :** ವರ್ಗ ಪ್ರಥಮ ಅಕ್ಷರಗಳಿಗೆ ಯಾವ ಅನುನಾಸಿಕ ಅಕ್ಷರ ಪರವಾದರೂ ಅವುಗಳಿಗೆ ಅಂದರೆ ಕ್, ಚ್,ಟ್,ತ್,ಪ್, ವ್ಯಂಜನಗಳಿಗೆ ಕ್ರಮವಾಗಿ ಅದೇ ವರ್ಗದ ಙ್, ಞ್, ಣ್, ನ್, ಮ್, ವ್ಯಂಜನಗಳು ಆದೇಶಗಳಾಗಿ ಬರುತ್ತವೆ.

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ದಿಕ್ | + | ನಾಗ | = ದಿಙ್ನಾಗ |
| | ಷಟ್ | + | ಮಾಸ | = ಷಣ್ಮಾಸ |
| | ಚಿತ್ | + | ಮೂಲ | = ಚಿನ್ಮೂಲ |

## V. ಚಟುವಟಿಕೆಗಳು :

೧. ಪ್ರಸ್ತುತ ಗದ್ಯ ಭಾಗದಲ್ಲಿ ಬಳಕೆಯಾಗಿರುವ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.
೨. ಕುವೆಂಪು ಅವರ ರೈತಗೀತೆಯ ಅರ್ಥ ತಿಳಿದು ಹಾಡಿರಿ.
೩. ರೈತರ ಮನೆಗಳಿಗೆ ಭೇಟಿ ನೀಡಿ, ಅವರ ಸಂಕಷ್ಟಗಳನ್ನು ತಿಳಿದುಕೊಳ್ಳಿರಿ.
೪. ರೈತರ ಬದುಕು ಹಸನಾಗಲು ನೀವು ಯಾವ ಸಲಹೆಗಳನ್ನು ಸೂಚಿಸುತ್ತೀರಿ?

©KTBS Not to be republished

# ೩. ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ

– ರಮೇಶಗೌಡ ಎಂ.ಕೆ.

**ಪಾಠ ಪ್ರವೇಶ :** ಉನ್ನತವಾದ ಗುರಿಯನ್ನು ಸಾಧಿಸಲು ಯಾವುದೇ ರೀತಿಯ ದೈಹಿಕ ನ್ಯೂನತೆಗಳು ಎಂದೂ ಅಡ್ಡಿಯಾಗಲಾರವು. ಅಸಾಧ್ಯವಾದುದನ್ನು ಸಾಧಿಸಬೇಕೆಂಬ ಛಲವಿದ್ದರೆ ಗುರಿ ಸಾಧನೆ ಸುಲಭವಾಗುತ್ತದೆ. ಅದಕ್ಕೆ ವಿಶೇಷ ಚೇತನರ ಒಲಂಪಿಕ್ಸ್ ಉತ್ತಮ ಉದಾಹರಣೆ. ವಿಕಲಚೇತನರಾಗಿದ್ದರೂ ಕ್ರೀಡಾಕ್ಷೇತ್ರದಲ್ಲಿ ಮಾಲತಿ ಹೊಳ್ಳ, ಭರತನಾಟ್ಯದಲ್ಲಿ ಸುಧಾಚಂದ್ರನ್, ವೈಜ್ಞಾನಿಕ ರಂಗದಲ್ಲಿ ಸ್ಟೀಫನ್ ಹಾಕಿಂಗ್ಸ್– ಅಂತಹವರ ಹೆಸರು ಹಲವು. ಈ ಹಲವರಲ್ಲಿ ಪುಟ್ಟರಾಜ ಗವಾಯಿಗಳೂ ಒಬ್ಬರು. ಅಂಧರಾಗಿದ್ದರೂ ಹಲವಾರು ರಂಗದಲ್ಲಿ ಅದ್ವಿತೀಯರು. ಇಂತಹ ಪ್ರಸಿದ್ಧರೆಲ್ಲರ ಸಾಧನೆಯು ನಮಗೆ ಆದರ್ಶವಾಗಬೇಕು; ಅದು ನಮ್ಮ ಒಳಗಣ್ಣನ್ನು ತೆರೆಸಬೇಕು.

©KTBS Not to be republished

ಜಗತ್ತಿನ ಅನೇಕ ಸಾಧಕರ ಜೀವನವನ್ನು ಸಿಂಹಾವಲೋಕನ ಮಾಡಿದಾಗ, ಅವರು ತಮಗಿಷ್ಟವಾದ ಕ್ಷೇತ್ರದಲ್ಲಿ ಹಿಮಾಲಯದೆತ್ತರಕ್ಕೆ ಸಾಧನೆ ಮಾಡಿ, ಜಗತ್ತೇ ನಿಬ್ಬೆರಗಾಗಿ ತಮ್ಮತ್ತ ಹೊರಳುವಂತೆ ಮಾಡಿದ್ದಾರೆ. ಚರಿತ್ರೆಯ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ದಾಖಲಾಗಿದ್ದಾರೆ. ಅವರ ಸಾಧನೆ ಕಂಡು ಅನೇಕರು ಪ್ರೇರಿತರಾಗಿದ್ದಾರೆ. 'ಸಾಧಿಸಿದರೆ ಅವರಂತೆ ಸಾಧಿಸಬೇಕು' ಎಂದು ನಿರ್ಧರಿಸಿ, ತಮ್ಮ ಬದುಕಿನ ದಿಕ್ಸೂಚಿಯನ್ನು ಬದಲಿಸಿಕೊಂಡವರಿದ್ದಾರೆ. ಅಂಥವರಲ್ಲಿ ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಗವಾಯಿಗಳು ಓರ್ವರು.

ಪುಟ್ಟರಾಜರು ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಸಮಾಜದ ಜೊತೆ ಬೆರೆತು, ವಿಶ್ವದ ಕಣ್ಮಣಿಯಾಗಿದ್ದಾರೆ. ಪುಟ್ಟರಾಜರು ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನ ದೇವರ ಹೊಸಪೇಟೆಯ ವೆಂಕಟಾಪುರ ಮಠದ ಜಂಗಮ ದಂಪತಿಗಳಾದ ರೇವಣ್ಣಯ್ಯ ಮತ್ತು ಸಿದ್ಧಮ್ಮ ಅವರ ಮಗನಾಗಿ ೧೯೧೪ ರ ಮಾರ್ಚ್ ೩ ರಂದು ಜನಿಸಿದರು. ಬಾಲ್ಯದಲ್ಲಿಯೆ ಕಣ್ಣು ಕಳೆದುಕೊಂಡ ಅವರು "ನಾನು ಹುಟ್ಟಿದ ಆರು ತಿಂಗಳಿಗೆ ದೃಷ್ಟಿ ಹೋಗ್ಯಾವ, ಕಣ್ಣು ಬೇನೆ ಬಂದು ಕಣ್ಣಿಗೆ 'ಪರಿ' ಅಂತ ಬರತೈತಲ್ಲ, ಅದ್ಕ 'ಅರೀ' ಅಂತಾರ. ಆವಾಗ ಬರೀ ನಾಟೀ ವೈದ್ಯ ಇತ್ತು. ಅವರು ಕಣ್ಣುಗುಡ್ಡಿಗೆ ತೊನಸಿಯನ್ನು (ನಾಯಿಯ ಮೈಯಲ್ಲಿರುವ ಹುಳು) ಮುಟ್ಟಿಸಬೇಕು ಅಂತ ಹೇಳಿದ್ದರು. ಆಗ ಮುಟ್ಟಿಸುವಾಗ ತೊನಸಿ ಕೈಜಾರಿ ಕಣ್ಣು ಒಳಗ ಬಿದ್ದುಬಿಟ್ಟವು. ಆವಾಗ ಅದು ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿ ಬಿಟ್ಟವು." ಹೀಗೆ ಹೇಳುವಾಗ ಗವಾಯಿಗಳಲ್ಲಿ ಯಾವ ವೇದನೆಯೂ ಇರುತ್ತಿರಲಿಲ್ಲ.

ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಮ್ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ.



ಹಾರ್ಮೋನಿಯಮ್‌ನಿಂದ ಹೊರಟ ನಾದ ಮನೆಯನ್ನು ತುಂಬಿ, ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಮನೆಯ ಹೊರಗೆ, ಒಳಗೆ ಜನರ ಗುಂಪು ಕಂಡು ಆಶ್ಚರ್ಯಚಕಿತರಾದರು. ಮನೆಯ ಒಳಗೆ ಹಾರ್ಮೋನಿಯಮ್ ನುಡಿಸುತ್ತಿರುವವರು ಯೋಗಿಗಳೇ ಇರಬಹುದೆಂದು ಭಾವಿಸಿ, ಒಳ ಬಂದರು. ತಲ್ಲೀನನಾಗಿ ಹಾರ್ಮೋನಿಯಮ್ ನುಡಿಸುತ್ತಿದ್ದ ಪುಟ್ಟ ಬಾಲಕನನ್ನು ಕಂಡು ನಿಬ್ಬೆರಗಾದರು. ಮಾವನ ಪಾದ ಸಪ್ಪಳದಿಂದ ವಿಚಲಿತನಾದ ಬಾಲಕ ಒಮ್ಮೆಲೇ ಹಾರ್ಮೋನಿಯಮ್ ನುಡಿಸುವುದನ್ನು ನಿಲ್ಲಿಸಿ, "ಮಾವ ತಪ್ಪಾತು... ಕ್ಷಮಿಸು, ನೀನು ಮುಟ್ಟು ಎಂದರೂ ನಾನು ಇನ್ನೆಂದೂ ನಿನ್ನ ಹಾರ್ಮೋನಿಯಮ್ ಮುಟ್ಟುವುದಿಲ್ಲ..." ಎನ್ನುತ್ತ ಮಾವನ ಪಾದಗಳಿಗೆ ತಡವಡಿಸಿದನು. ಆಗತಾನೆ ಹಾಡಲು ಕಲಿತ ಮರಿ ಕೋಗಿಲೆಯಂತೆ, ಕೆನ್ನೆಯ ಮೇಲೆ ಕಣ್ಣೀರು ಸುರಿಸುತ್ತಿದ್ದ ಬಾಲಕನನ್ನು ಮಾವ ಬಿಗಿಯಾಗಿ ಅಪ್ಪಿಕೊಂಡು ಮುದ್ದುಗರೆಯುತ್ತ, ಆನಂದಬಾಷ್ಪ ಸುರಿಸಿದರು. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ, ನಿನ್ನದು... ನಿನ್ನದೇ, ಅದು ನಿನ್ನ ಆಸ್ತಿ..." ಎಂದರು. ಹೀಗೆ ಮೈಮರೆತು ಹಾರ್ಮೋನಿಯಂ ನುಡಿಸುತ್ತಿದ್ದ ಆ ಬಾಲಕನೆ ಸಂಗೀತಲೋಕದಲ್ಲಿ ಧ್ರುವತಾರೆಯಂತೆ ಸದಾಕಾಲ ಬೆಳಗುತ್ತಿರುವ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು. ಚಂದ್ರಶೇಖರಯ್ಯನವರೇ ಅವರ ಸೋದರ ಮಾವ!.

**ಪಂಚಾಕ್ಷರ ಗವಾಯಿಗಳಲ್ಲಿ ಶಿಷ್ಯತ್ವ**

ಸಂಗೀತ ಲೋಕದ ಜಗದ್ಗುರು ಪಂಡಿತ ಪಂಚಾಕ್ಷರ ಗವಾಯಿಗಳ 'ಸಂಚಾರಿ ಸಂಗೀತ ಪಾಠಶಾಲೆ' ಒಮ್ಮೆ ಗವಿಮಠದಲ್ಲಿ ಕ್ಯಾಂಪ್ (ವಾಸ) ಮಾಡಿತ್ತು. ಅಲ್ಲಿಗೆ ಮಾವನವರೊಂದಿಗೆ ಪುಟ್ಟಯ್ಯನು ಬಂದು ಗುರುಗಳಾದ ಪಂಚಾಕ್ಷರ ಗವಾಯಿಗಳ ಶಿಷ್ಯತ್ವ ಸ್ವೀಕರಿಸಿ, ಪ್ರೀತಿಯ ಶಿಷ್ಯರೆಲ್ಲರಲ್ಲಿ ಈತನೂ ಒಬ್ಬನಾದನು. ಪುಟ್ಟಯ್ಯನು "ನಾನೊಬ್ಬ ಅಂಧ ಬಾಲಕ, ನನ್ನಿಂದೇನಾಗಲು ಸಾಧ್ಯ? ಜಗತ್ತನ್ನು ನೋಡದ ನನಗೆ ಜಗತ್ತಿಗೆ ಏನು ಕೊಡಲು ಸಾಧ್ಯ? ಇದ್ದಷ್ಟು ದಿನ ಗುರುಸೇವೆ ಮಾಡುತ್ತ ಊಟ ಸಿಕ್ಕಲ್ಲಿ ಹೊಟ್ಟೆಹೊರೆದು, ನೆಲ ಸಿಕ್ಕಲ್ಲಿ ಶಯನಗೈದು ಈ ಬದುಕನ್ನು ಮುಗಿಸಿದರಾಯಿತು" ಎಂಬ ವಿಷಣ್ಣ ಭಾವದಲ್ಲಿ ಇರುತ್ತಿರಲಿಲ್ಲ.

©KTBS Not to be republished

"ಪಂಚಾಕ್ಷರ ಗುರುಗಳನ್ನು ಅನುಸರಿಸಬೇಕು. ಅವರ ನುಡಿಯೇ ನನಗೆ ಮಂತ್ರ. ಅವರ ನಡೆಯೇ ನನಗೆ ಆಚಾರವಾಗಬೇಕು" ಎಂದು ನಿರ್ಧರಿಸಿದ ಎಂಟು ವರ್ಷದ ಬಾಲಕ ಪುಟ್ಟಯ್ಯ, ತನ್ನ ಎಲ್ಲ ಸಹಪಾಠಿಗಳಿಗಿಂತ ಬಲುಬೇಗ ಗುರುಗಳು ಹೇಳಿದ್ದನ್ನು ಗ್ರಹಿಸಿ, ಕಲಿತುಕೊಂಡರು. ಗುರು-ಶಿಷ್ಯರೀರ್ವರೂ ಅಂಧರು. ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು.

"ಶ್ರೇಷ್ಠ ಗುರು ಮಾತ್ರ ಶಿಷ್ಯರ ಮನಸ್ಸನ್ನು ಓದಬಲ್ಲನು, ಅವರ ಅಭಿಲಾಷೆಗೆ ತಕ್ಕಂಥ ಜ್ಞಾನಕೊಡುವ ಶಕ್ತಿ ಶ್ರೇಷ್ಠ ಗುರುವಿಗೆ ಮಾತ್ರ ಸಿದ್ಧಿಸಿರುತ್ತದೆ." ಪಂಚಾಕ್ಷರ ಗವಾಯಿಗಳು ಇಂಥ ಶ್ರೇಷ್ಠ ಗುರುವಾಗಿದ್ದರು. ಪುಟ್ಟಯ್ಯನ ಸಂಗೀತ ಜ್ಞಾನದೊಂದಿಗೆ, ಸಾಹಿತ್ಯ ಜ್ಞಾನವು ಬೆರೆತರೆ, ಗಂಗೆ-ಯಮುನೆಯರು ಒಂದಾದಂತೆ ಎಂದು ನಿರ್ಧರಿಸಿ, ಪುಟ್ಟಯ್ಯನು ವಿವಿಧ ಶಾಸ್ತ್ರಗ್ರಂಥಗಳನ್ನು ಕಲಿಯಲು ಬೇಕಾದ ಎಲ್ಲ ವ್ಯವಸ್ಥೆಯನ್ನು ಮಾಡಿಕೊಟ್ಟರು. ಅದರ ಪ್ರತಿಫಲವಾಗಿ ಪುಟ್ಟಯ್ಯ ಪಾಣಿನಿಯ 'ಅಷ್ಟಾಧ್ಯಾಯಿ', ಶರ್ವವರ್ಮನ 'ಕಾತಂತ್ರ', ಕೇಶಿರಾಜನ 'ಶಬ್ದಮಣಿ ದರ್ಪಣ', ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ಧಾನುಶಾಸ್ತ್ರ, ಛಂದಶ್ಶಾಸ್ತ್ರ ಹಾಗೂ ಕನ್ನಡ ವ್ಯಾಕರಣವನ್ನು ಶಾಸ್ತ್ರಬದ್ಧವಾಗಿ ಕಲಿತರು. ಕೇವಲ ಕಲಿಯಲಿಲ್ಲ. ಅವುಗಳಲ್ಲಿ ನಿಷ್ಣಾತರಾದರು.

ಕಣ್ಣುಕಾಣದ ಪುಟ್ಟರಾಜರು ಸದಾಕಾಲ ಬೇರೆಯವರ ಸಹಾಯ ಪಡೆದೇ ಓದಿಸುವ ಹಾಗೂ ಬರೆಸುವ ಕೆಲಸಮಾಡಬೇಕಾಗಿತ್ತು. ಇದರಿಂದ ಮುಕ್ತರಾಗಲು ಪುಟ್ಟರಾಜರು 'ಬ್ರೈಲ್ ಲಿಪಿ' ಕಲಿತು, ಅದರಲ್ಲಿ ಪಾರಂಗತರಾದರು.

**ಸಮಾಜಕ್ಕೆ ಮುಡುಪಾದ ಜೀವ :**

ಪಂಚಾಕ್ಷರ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆ-ಆಲೂರಿನಲ್ಲಿ ಕ್ಯಾಂಪ್ (ಬಿಡಾರ) ಹಾಕಿದ್ದ ಸಂದರ್ಭದಲ್ಲಿ ತಾಯಿಯಾದ ಸಿದ್ಧಮ್ಮನವರು ಬೆಳೆದು ದೊಡ್ಡವನಾದ ಪುಟ್ಟರಾಜನನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮುದ್ದು ಮಗನನ್ನು ನೋಡಿದ ತಾಯಿಗೆ ಅಂತಃಕರಣ ತುಂಬಿ ಬಂತು. ಪಂಚಾಕ್ಷರ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡರು. ಗವಾಯಿಗಳು "ಅವನು ಬಂದರೆ ಕರೆದುಕೊಂಡು ಹೋಗು ತಾಯಿ" ಎಂದು ವಾತ್ಸಲ್ಯಪೂರ್ಣವಾಗಿ ಹೇಳಿದರು.

ಸಿದ್ಧಮ್ಮನವರು ಪುಟ್ಟಯ್ಯನೆಡೆ ಬಂದು ಮನೆಗೆ ಬರುವಂತೆ ಕೇಳಿಕೊಂಡರು. ಆದರೆ, ಪುಟ್ಟಯ್ಯನ ಮನಸ್ಸು ದೃಢವಾಗಿತ್ತು. ತಾಯಿಗೆ ಮೃದುವಾದ ಮಾತುಗಳಿಂದಲೇ ತನ್ನಿಚ್ಛೆಯನ್ನು ಮನವರಿಕೆ ಮಾಡಿಕೊಟ್ಟರು. "ನನಗೆ, ನನ್ನ ಸರ್ವಸ್ವವೂ ಗುರುಗಳು. ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಅದು ಹೇಗೆ ನಿನ್ನ ಜೊತೆ ಬರಲಿ ತಾಯಿ, ನೀನೆ ಹೇಳು? ಭವದಲ್ಲಿಯ ಎಲ್ಲ ಬಂಧನಗಳನ್ನು ತೊಡೆದು ಹಾಕಿರುವೆ. ಗುರು ಪಂಚಾಕ್ಷರರೇ ನನ್ನ ಸರ್ವಸ್ವ. ಅವರ ಆಜ್ಞಾಧಾರಕ ನಾನು. ನನ್ನ ಮಗನೆಂಬ ಭಾವವನ್ನು ತೊಡೆದು ಹಾಕಿ ನನ್ನನ್ನು ಸಮಾಜಕ್ಕರ್ಪಿಸು

ತಾಯಿ" ಎಂದು ತಾಯಿ ಸಿದ್ಧಮ್ಮನವರ ಪಾದಕ್ಕೆರಗಿ ಆರ್ತರಾದರು. ಸಿದ್ಧಮ್ಮನವರು ಸಾಮಾನ್ಯರಂತೆ ವರ್ತಿಸದೆ ಮಹಾತಾಯಿಯಂತೆ ಮಗನಿಗೆ ಆಶೀರ್ವದಿಸಿದರು. "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ. ಹೆಂಡತಿ, ಮಕ್ಕಳು ಸಂಸಾರವೆಂಬ ಬಂಧನದಲ್ಲಿ ಬಂಧಿಯಾಗುವುದು ನಿನಗಿಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಮಗನೆ. ಗುರು ಪಂಚಾಕ್ಷರರು ತೋರುವ ಮಾರ್ಗದಲ್ಲಿ ನೀನು ನಡೆದು ಅಮರನಾಗು ಕಂದ" ಎಂದು ಮಗನನ್ನು ಅಂತಃಕರಣ ತುಂಬಿ ಹರಸಿ, ಭಾರವಾದ ಹೃದಯದಿಂದ ದೇವರ ಹೊಸಪೇಟೆಗೆ ಮರಳಿದರು. ಪುಟ್ಟರಾಜರು ಲೌಕಿಕ ಬಂಧನಗಳ ಹೊಸ್ತಿಲನ್ನು ದಾಟಿ ಅನಿಕೇತನರಾದರು.



ಗಾಂಧಿ ತತ್ವಾನುಯಾಯಿಗಳಾದ ಪಂಚಾಕ್ಷರ ಗವಾಯಿಗಳು ಭಾರತದ ಸ್ವಾತಂತ್ರ್ಯ ಚಳುವಳಿಗೆ ಮುಖ್ಯ ಪ್ರೇರಣೆಗಳಲ್ಲೊಂದಾದ ಖಾದಿಬಟ್ಟೆಯನ್ನು ಧರಿಸಿಕೊಳ್ಳುವುದರ ಮೂಲಕ ಸ್ವದೇಶಿ ಆಂದೋಲನಕ್ಕೆ ಕೈಜೋಡಿಸಿದರು. ಅವರೊಂದಿಗೆ ಪುಟ್ಟರಾಜರು ಖಾದಿಬಟ್ಟೆಯನ್ನು ತೊಡುವ ಪ್ರತಿಜ್ಞೆ ಮಾಡಿದರು. ಹಾಲಿನಂಥ ಮನಸ್ಸುಳ್ಳ ಪುಟ್ಟರಾಜರು, ತಮ್ಮ ಜೀವನದುದ್ದಕ್ಕೂ ಶುಭ್ರವಾದ ಖಾದಿಬಟ್ಟೆಗಳನ್ನು ಧರಿಸಿ ಭಾರತೀಯತ್ವಕ್ಕೆ ಮಾದರಿಯಾದರು. ಶುಭ್ರವಾದ ಬಿಳಿಯ ಉದ್ದನೆಯ ಅಂಗಿ, ಪಂಚೆ (ದೋತರ), ತಲೆಗೆ ಕೆಂಪು ಪೇಠ (ಪಟಗ), ನೊಸಲಲ್ಲಿ ತ್ರಿಪುಂಡ್ರಭಸ್ಮ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಪಾದಗಳಿಗೆ ಅರಿವೆಯ ಪಟ್ಟಿಕೆಯನ್ನು ಜೋಡಿಸಿದ ಕಟ್ಟಿಗೆಯ ಹಾವುಗಳು, ಕೈಯಲ್ಲಿ ಉದ್ದನೆಯ ಬೆತ್ತ ಇವು ಪುಟ್ಟರಾಜರ ಬಾಹ್ಯ ವ್ಯಕ್ತಿತ್ವದ ಗುರುತುಗಳಾದವು.

ಪುಟ್ಟರಾಜರು ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಅಗಾಧ ಪಾಂಡಿತ್ಯ ಗಳಿಸುವುದರೊಂದಿಗೆ ಗಾಯನ, ವಾದನ, ಸಾಹಿತ್ಯ, ಕೀರ್ತನ ಮೊದಲಾದ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿ ಜ್ಞಾನಯೋಗಿ, ಗಾನಯೋಗಿ ಎಂದು ಪ್ರಸಿದ್ಧರಾದರು. ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ೭೫ ಕ್ಕೂ ಅಧಿಕ ಕೃತಿಗಳನ್ನು ರಚಿಸಿ ತ್ರಿಭಾಷಾ ಕವಿಯಾದರು. ಅವರ ಸಾಧನೆಗೆ ನಾಡೋಜ, ಬಸವಶ್ರೀ, ಪದ್ಮಭೂಷಣ, ಗೌರವ ಡಾಕ್ಟರೇಟ್ ಮುಂತಾದ ಗೌರವ ಪ್ರಶಸ್ತಿಗಳು ಸಾಲುಗಟ್ಟಿಬಂದವು. ಹೀಗೆ ಸಂಗೀತ ಲೋಕದ ಧ್ರುವ ನಕ್ಷತ್ರರಾಗಿ ಸಾವಿರಾರು ಶಿಷ್ಯರ ಬದುಕಿಗೆ ದಿವ್ಯಬೆಳಕಾದ ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು ದಿನಾಂಕ ೧೭-೦೯-೨೦೧೦ ರಂದು ಅನಂತದಲ್ಲಿ ಅನಂತವಾದರು, ಇತಿಹಾಸದಲ್ಲಿ ಅಮರರಾದರು.

* * * * *

©KTBS Not to be republished



ಸಂತೋಷ ಎಲ್ಲರಿಗೂ ಬೇಕು, ಆದರೆ ಅದಕ್ಕಾಗಿ ಯಾರೂ ಕಷ್ಟಪಡಲು ಸಿದ್ಧರಿಲ್ಲ – ಮಹಾವೀರ

## ಕೃತಿಕಾರರ ಪರಿಚಯ :



**ರಮೇಶಗೌಡ ಮಲ್ಲನಗೌಡ ಕಲ್ಲನಗೌಡ** ಧಾರವಾಡ ಜಿಲ್ಲೆಯ, ನವಲಗುಂದ ತಾಲ್ಲೂಕು, ಕಿತ್ತೂರು ಗ್ರಾಮದಲ್ಲಿ ೧೯೭೪ ರಲ್ಲಿ ಜನಿಸಿದರು. ಪ್ರಸ್ತುತ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾರೆ. ಇವರು 'ಅಮೃತಕ್ಕೆ ಹಾರಿದ ಗರುಡ' (ಕಥಾ ಸಂಕಲನ), 'ರೂಪ ಬಯಲು' (ಪ್ರಬಂಧ ಸಂಕಲನ), 'ಗಾನಯೋಗಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳು' (ಜೀವನ ಚರಿತ್ರೆ) ಕೃತಿಗಳನ್ನು ಹಾಗೂ ಹಲವು ಲೇಖನಗಳನ್ನು ಬರೆದಿದ್ದಾರೆ.

'ಅಮೃತಕ್ಕೆ ಹಾರಿದ ಗರುಡ' ಕಥಾ ಸಂಕಲನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ 'ರತ್ನಾಕರವರ್ಣಿ ಮುದ್ದಣ ದತ್ತಿ ಪ್ರಶಸ್ತಿ' ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ವರ್ಷದ ಉತ್ತಮ ಕೃತಿ' ಪ್ರಶಸ್ತಿಗಳು ಲಭಿಸಿವೆ.

## ಅಭ್ಯಾಸ

### I. ಪದಗಳ ಅರ್ಥ :

**ಅಂಧ** – ಕುರುಡ; ಕಣ್ಣು ಕಾಣದವ.
**ಅನಂತ** – ಕೊನೆಯಿಲ್ಲದ
**ಅಭಿಲಾಷೆ** – ಆಸೆ; ಬಯಕೆ.
**ಆರ್ತ** – ಕಷ್ಟಕ್ಕೆ ಸಿಕ್ಕ; ದುಃಖಿತ.
**ಗ್ರಹಿಸಿ** – ತಿಳಿದುಕೊಂಡು
**ನಿಷ್ಣಾತ** – ಪಾರಂಗತ; ನಿಪುಣ.
**ಬಾಷ್ಪ** – ಕಣ್ಣೀರು; ಕಂಬನಿ.
**ಮಾಧುರ್ಯ** – ಸಿಹಿ; ಹಿತ.
**ವಿಚಲಿತ** – ಚಂಚಲ
**ವೇದನೆ** – ನೋವು
**ಸುವರ್ಣ** – ಬಂಗಾರ; ಚಿನ್ನ.
**ಅಂತಃಕರಣ** – ಮನಸ್ಸು; ದಯೆ.
**ಅನಿಕೇತನ** – ಮನೆ ಇಲ್ಲದವ ಅಂದರೆ ವಿಶ್ವಮಾನವ.
**ಅಮರ** – ದೇವತೆ; ಶಾಶ್ವತವಾಗು.
**ಉದರ** – ಹೊಟ್ಟೆ
**ಜಂಗಮ** – ಚಲಿಸುವ; ವೀರಶೈವ ಧರ್ಮದ ವಿರಕ್ತ.
**ಪರಿ** – ಅರಿ; ಕಣ್ಣಿನ ರೋಗ; ಕತ್ತರಿಸು.
**ಬೇನೆ** – ರೋಗ; ನೋವು.
**ಮುಡುಪು** – ಮೀಸಲು
**ವಿಷಣ್ಣ** – ಖಿನ್ನವಾದ; ಬಾಡಿದ.
**ಶಯನಗೈದು** – ಮಲಗುವುದು.
**ಸಿಂಹಾವಲೋಕನ** – ಹಿಂದಿನ ಘಟನೆಗಳನ್ನು ಮತ್ತೊಮ್ಮೆ ವಿವರವಾಗಿ ಅವಲೋಕಿಸುವುದು ; ಹಿನ್ನೋಟ.

©KTBS Not to be republished

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?

೨. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?

೩. ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?

೪. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?

೫. ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ?

೨. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ?

೩. ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಬಾಲಕ ಪುಟ್ಟಯ್ಯ ಯಾವ ಮನಸ್ಥಿತಿ ಹೊಂದಿದ್ದನು?

೪. ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು?

೫. ತಾಯಿ ಸಿದ್ಧಮ್ಮ ಪುಟ್ಟರಾಜನನ್ನು ಏನೆಂದು ಆಶೀರ್ವದಿಸಿದಳು?

೬. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?

೭. ಪುಟ್ಟರಾಜರಿಗೆ ದೊರೆತ ಗೌರವ ಪ್ರಶಸ್ತಿಗಳಾವುವು?

೮. ವಿಶೇಷ ಚೇತನರಿಗೆ ನೀವು ಯಾವ ಮಾತುಗಳಿಂದ ಧೈರ್ಯ ತುಂಬುವಿರಿ?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ, ಹೇಗೆ? ಸಮರ್ಥಿಸಿರಿ.

೨. ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗ ವಿವರಿಸಿ.

೩. ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿ.

೪. ವಿಶೇಷ ಚೇತನರ ವಿಷಯದಲ್ಲಿ ನಮ್ಮ ಹೊಣೆಗಾರಿಕೆಗಳೇನು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. "ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿಬಿಟ್ಟವು".

೨. ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ.

೩. ಅವನು ಬಂದರೆ ಕರೆದುಕೊಂಡು ಹೋಗು ತಾಯಿ.



ಗುರಿಯನ್ನು ಮುಟ್ಟುವುದಕ್ಕಿಂತ ಅದರೆಡೆಗೆ ನಂಬಿಕೆಯಿಂದ ಸಾಗುವುದೇ ಹೆಚ್ಚು ಆನಂದ ದಾಯಕ - ರಾಬರ್ಟ್ ಲೂಯಿಸ್ ಸ್ಟೀವನ್ಸನ್

©KTBS Not to be republished

೪. ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ.

೫. ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು.

**ಉ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

೧. ಪುಟ್ಟರಾಜರ ಜನ್ಮಸ್ಥಳ ______________

೨. ಪುಟ್ಟರಾಜರು ______________ ರಂದು ಜನಿಸಿದರು.

೩. ಪುಟ್ಟರಾಜರ ಗುರುಗಳ ಹೆಸರು ______________

೪. ಪುಟ್ಟರಾಜರ ಮಾವನ ಹೆಸರು ______________

೫. ಪುಟ್ಟರಾಜರು ______________ ರಂದು ಅನಂತದಲ್ಲಿ ಅನಂತವಾದರು.

**ಊ) 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧. ಪಾಣಿನಿ | ಅ. ಕೈವಲ್ಯ ಪದ್ಧತಿ |
| ೨. ಶರ್ವವರ್ಮ | ಆ. ಶಬ್ದಮಣಿ ದರ್ಪಣ |
| ೩. ಕೇಶಿರಾಜ | ಇ. ಅಷ್ಟಾಧ್ಯಾಯಿ |
| ೪. ನಿಜಗುಣ ಶಿವಯೋಗಿಗಳು | ಈ. ಕಾತಂತ್ರ |

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಸಿಂಹಾವಲೋಕನ, ನಿಬ್ಬೆರಗಾಗು, ಕಣ್ಮಣಿ, ತಲ್ಲೀನತೆ, ಗುರುಸೇವೆ, ಅಭಿಲಾಷೆ, ಅಂತಃಕರಣ.

**ಆ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ದೃಷ್ಟಿ, ಸಂಸ್ಕೃತ, ಯೋಗಿ, ಆಶ್ಚರ್ಯ, ಜ್ಞಾನ.

**ಇ) ಕೆಳಗಿನ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿರಿ.**

ಪಂಚಾಕ್ಷರಿ, ಸುವರ್ಣಾಕ್ಷರ, ಇನ್ನೊಂದು, ತನ್ನಿಚ್ಛೆ, ತತ್ವಾನುಯಾಯಿ, ರುದ್ರಾಕ್ಷಿ, ಹಿಮಾಲಯ.

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಆಸಕ್ತಿ, ಶ್ರೇಷ್ಠ, ಗೌರವ, ಹೊರಗೆ, ಸ್ವೀಕರಿಸು, ಬಾಹ್ಯ, ಸ್ವದೇಶಿ, ಸ್ವಾತಂತ್ರ್ಯ.





©KTBS Not to be republished

# IV. ಸೈದ್ಧಾಂತಿಕ ವ್ಯಾಕರಣ :

## ನಾಮಪದ

ಒಂದು ವಸ್ತು, ಒಬ್ಬ ವ್ಯಕ್ತಿ, ಒಂದು ಸ್ಥಳದ ಹೆಸರಾಗಿರಬಹುದು ಅಥವಾ ಒಂದು ಗುಂಪನ್ನು ಸೂಚಿಸುವ ಪದವಾಗಿರಬಹುದು ಅಥವಾ ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಇತ್ಯಾದಿಗಳನ್ನು ಸೂಚಿಸುವ ಪದಗಳಾಗಿರಬಹುದು. ಅವುಗಳನ್ನು ನಾಮಪದಗಳೆಂದು ಕರೆಯುತ್ತೇವೆ.

**ನಾಮಪದದ ವಿಧಗಳು :**

೧. **ವಸ್ತುವಾಚಕ ಅಥವಾ ನಾಮವಾಚಕ** : ಯಾವುದೇ ವಸ್ತು, ವ್ಯಕ್ತಿ, ಪ್ರಾಣಿ ಹಾಗೂ ಸ್ಥಳಗಳಿಗೆ ಇರುವ ಹೆಸರುಗಳನ್ನು ವಸ್ತುವಾಚಕಗಳೆನ್ನುವರು. ಇವುಗಳಲ್ಲಿ ಮೂರು ವಿಧ. ಅವುಗಳೆಂದರೆ....

**ಅ) ರೂಢನಾಮ :** ಅನಾದಿಕಾಲದಿಂದ ರೂಢಿಯಾಗಿ ಬಂದಿರುವ ಸಾಮಾನ್ಯ ಹೆಸರುಗಳನ್ನು 'ರೂಢನಾಮ' ಎಂದು ಕರೆಯುತ್ತಾರೆ.
**ಉದಾ :** ಹೆಂಗಸು, ಗಂಡಸು, ಹುಡುಗ, ಹುಡುಗಿ, ಮಕ್ಕಳು, ಜನರು, ನದಿ, ಬೆಟ್ಟ, ಸಮುದ್ರ, ಕೆರೆ, ಹಳ್ಳ, ಹಳ್ಳಿ, ಗಿಡ, ಮರ, ಹೊಳೆ, ಮುದುಕ, ಮುದುಕಿ, ಹಣ್ಣು, ಎಲೆ, ಅಡಿಕೆ, ಹಸು, ಎಮ್ಮೆ, ಬಳ್ಳಿ – ಇತ್ಯಾದಿ

**ಆ) ಅಂಕಿತನಾಮ :** ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡಿರುವ ಹೆಸರುಗಳನ್ನು 'ಅಂಕಿತನಾಮ' ಎಂದು ಕರೆಯುತ್ತಾರೆ. ಅಂದರೆ ವಸ್ತು, ವ್ಯಕ್ತಿ ಹಾಗೂ ಸ್ಥಳಕ್ಕೆ ನೀಡಿರುವ ನಿರ್ದಿಷ್ಟ ಹೆಸರುಗಳು.
**ಉದಾ :** ಗಣೇಶ, ಕಾವೇರಿ, ಗಂಗಾ, ರಾಮ, ರಹೀಮ, ಬೆಂಗಳೂರು, ಧಾರವಾಡ, ಉಡುಪಿ, ಭಾರತ, ಕರ್ನಾಟಕ, ಬೇವು, ಹಲಸು, ಉಪ್ಪಿಟ್ಟು, ಹೋಳಿಗೆ – ಇತ್ಯಾದಿ.

**ಇ) ಅನ್ವರ್ಥನಾಮ :** ವಸ್ತುವಿನ ರೂಪ ಹಾಗೂ ವ್ಯಕ್ತಿಯ ಗುಣಲಕ್ಷಣಗಳನ್ನಾಧರಿಸಿ ಅರ್ಥಕ್ಕೆ ಅನುಸಾರ ನೀಡುವ ಹೆಸರುಗಳಿಗೆ 'ಅನ್ವರ್ಥನಾಮ' ಎಂದು ಕರೆಯುತ್ತಾರೆ.
**ಉದಾ :** ಜಾಣ, ಕವಿ, ಪಂಡಿತ, ಕುರುಡ, ಮೂಗ, ಕಿವುಡ, ದಡ್ಡ, ದಾನಿ, ಶಿಕ್ಷಕ, ವಿಜ್ಞಾನಿ, ಅಭಿಮಾನಿ, ನೀತಿಜ್ಞ, ಕುಂಟ, ಹೆಳವ, ಗಿಡ್ಡ, ಬೆಪ್ಪ, ಕ್ರೂರಿ, ಪೆದ್ದ, ಬುದ್ಧಿವಂತ, ಧೀರ, ಹೇಡಿ, ಸಾಧು, ಜಿಪುಣ, ಅಷ್ಟಾವಕ್ರ – ಇತ್ಯಾದಿ.

©KTBS Not to be republished

೨. **ಗುಣವಾಚಕ :** ವಸ್ತು ಅಥವಾ ವ್ಯಕ್ತಿಗಳ ಗುಣ, ರೀತಿ ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಿಗೆ 'ಗುಣವಾಚಕ' ಎನ್ನುವರು. ವಿಶೇಷಣಗಳನ್ನು ಯಾವುದಕ್ಕೆ ಹೇಳಲಾಗುತ್ತದೋ ಅಂಥ ಶಬ್ದಗಳನ್ನು ವಿಶೇಷ್ಯಗಳು ಎನ್ನುತ್ತಾರೆ.

| ಉದಾ : | ವಿಶೇಷಣ | ವಿಶೇಷ್ಯ |
|---|---|---|
| | ಸಿಹಿ | ಹಣ್ಣು |
| | ದೊಡ್ಡ | ನದಿ |
| | ಒಳ್ಳೆಯ | ಹುಡುಗಿ |

೩. **ಸಂಖ್ಯಾವಾಚಕ :** ಸಂಖ್ಯೆಯನ್ನು ಹೇಳುವ ಶಬ್ದಗಳೆಲ್ಲ ಸಂಖ್ಯಾ ವಾಚಕಗಳು.

**ಉದಾ :** ಒಂದು, ಎರಡು, ಮೂರು, ಹತ್ತು, ಸಾವಿರ, ಲಕ್ಷ, ಕೋಟಿ.... ಇತ್ಯಾದಿಗಳು

೪. **ಸಂಖ್ಯೇಯವಾಚಕ :** ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳೆಲ್ಲಾ ಸಂಖ್ಯೇಯ ವಾಚಕಗಳು ಎನ್ನುತ್ತಾರೆ. ಕೆಳಗಿನ ಉದಾಹರಣೆಯಲ್ಲಿ ಸಂಖ್ಯಾವಾಚಕ ಮತ್ತು ಸಂಖ್ಯೇಯ ವಾಚಕಗಳಿಗಿರುವ ವ್ಯತ್ಯಾಸವನ್ನು ತಿಳಿಯಿರಿ.

| ಉದಾ : | ಸಂಖ್ಯಾವಾಚಕ | ಸಂಖ್ಯೇಯವಾಚಕ |
|---|---|---|
| | ಎರಡು | ಇಬ್ಬರು, ಎರಡನೆಯ. |
| | ಮೂರು | ಮೂವರು, ಮೂರನೆಯ, ಮೂರರಿಂದ. |
| | ಐದು | ಐವರು, ಐದನೆಯ. |

೫. **ಭಾವನಾಮ :** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳನ್ನು 'ಭಾವನಾಮ' ಎನ್ನುತ್ತಾರೆ. ಭಾವ ಎಂದರೆ ಇರುವಿಕೆ, ಸ್ಥಿತಿ ಎಂದು ಅರ್ಥೈಸಬಹುದು.

**ಉದಾ :** ಬಿಳಿಯದರ ಭಾವ – ಬಿಳುಪು
ಕರಿಯದರ ಭಾವ – ಕಪ್ಪು
ಆಡುವುದರ ಭಾವ – ಆಟ
ನೋಡುವುದರ ಭಾವ – ನೋಟ

೬. **ಪರಿಮಾಣ ವಾಚಕ :** ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು 'ಪರಿಮಾಣ ವಾಚಕ' ಎನ್ನುತ್ತಾರೆ.

©KTBS Not to be republished

**ಉದಾ :** ಪರಿಮಾಣ – ಹಲವು, ಕೆಲವು. (ಹಲವು ನದಿಗಳು, ಕೆಲವು ಹಣ್ಣುಗಳು)
ಗಾತ್ರ – ಅಷ್ಟು, ಇಷ್ಟು (ಗುಡ್ಡದಷ್ಟು, ಆನೆಯಷ್ಟು)
ಅಳತೆ – ಅಷ್ಟು, ಇಷ್ಟು ( ಅಷ್ಟು ದೂರ, ಇಷ್ಟು ಪುಸ್ತಕಗಳು) – ಇತ್ಯಾದಿಗಳು.

**೭. ಪ್ರಕಾರ ವಾಚಕ :** ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳನ್ನು 'ಪ್ರಕಾರ ವಾಚಕ' ಎನ್ನುವರು. ಇವು ಒಂದು ಬಗೆಯ ಗುಣವಾಚಕಗಳೇ ಆಗಿವೆ.

**ಉದಾ :** ಅಂಥ, ಅಂಥದು, ಅಂತಹುದು, ಇಂಥ, ಇಂಥದು, ಇಂತಹುದು, ಎಂತಹ, ಎಂಥ, ಅಂಥವನು, ಅಂಥವಳು – ಇತ್ಯಾದಿ

**೮. ದಿಗ್ವಾಚಕಗಳು :** ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳನ್ನು 'ದಿಗ್ವಾಚಕ' ಎನ್ನುವರು.

**ಉದಾ :** ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ಆಗ್ನೇಯ, ವಾಯವ್ಯ, ನೈರುತ್ಯ, ತೆಂಕಣ, ಬಡಗಣ, ಮೂಡಣ, ಪಡುವಣ, ಆಚೆ, ಈಚೆ – ಇತ್ಯಾದಿ

**೯. ಸರ್ವನಾಮ :** ವಸ್ತು ವಾಚಕಗಳಾದ ನಾಮಪದಗಳ ಸ್ಥಾನದಲ್ಲಿ ನಿಂತು ಅವನ್ನು ಸೂಚಿಸುವ ಶಬ್ದಗಳನ್ನು 'ಸರ್ವನಾಮ' ಎನ್ನುತ್ತೇವೆ. ಅಂದರೆ ನಾಮಪದಗಳ ಬದಲಾಗಿ ಬಳಸುವ ಪದಗಳಿಗೆ ಸರ್ವನಾಮಗಳು ಎನ್ನುವರು.

**ಉದಾ :** ಅವನು, ಅವಳು, ಅದು, ಇದು, ಅವರು, ಇವರು, ಇವುಗಳಿಂದ, ಅದಕ್ಕೆ – ಇತ್ಯಾದಿ

ಸರ್ವನಾಮಗಳನ್ನು 'ಪುರುಷಾರ್ಥಕ ಸರ್ವನಾಮ', 'ಆತ್ಮಾರ್ಥಕ ಸರ್ವನಾಮ', 'ಪ್ರಶ್ನಾರ್ಥಕ ಸರ್ವನಾಮ' ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು.

**೧. ಪುರುಷಾರ್ಥಕ ಸರ್ವನಾಮ** : ಪುರುಷಾರ್ಥಕ ಸರ್ವನಾಮಗಳಲ್ಲಿ ಮೂರು ವಿಧ.

ಅ. ಉತ್ತಮ ಪುರುಷ : ಮಾತನಾಡುವ ವ್ಯಕ್ತಿ ತನ್ನನ್ನು ನಿರ್ದೇಶಿಸಿಕೊಳ್ಳುವ ಸರ್ವನಾಮಗಳನ್ನು 'ಉತ್ತಮ ಪುರುಷ' ಎನ್ನಲಾಗುತ್ತದೆ.

**ಉದಾ :** ನಾನು, ನಾವು.

ಆ. ಮಧ್ಯಮ ಪುರುಷ : ಮಾತನಾಡುವವನು ತನ್ನ ಮುಂದಿರುವ ವ್ಯಕ್ತಿಯನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಮಧ್ಯಮ ಪುರುಷ' ಎನ್ನಲಾಗುತ್ತದೆ.

**ಉದಾ :** ನೀನು, ನೀವು, ತಾವು.





©KTBS Not to be republished

ಇ. ಪ್ರಥಮ ಪುರುಷ : ಮಾತನಾಡುವವನಿಂದ ದೂರವಿರುವ ವ್ಯಕ್ತಿ ಇಲ್ಲವೇ ವಸ್ತುವನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಪ್ರಥಮ ಪುರುಷ' ಎನ್ನಲಾಗುತ್ತದೆ
**ಉದಾ :** ಅವರು, ಅವನು, ಅವಳು, ಅದು, ಅವು, ಇದು, ಇವು.

**೨. ಆತ್ಮಾರ್ಥಕ ಸರ್ವನಾಮ** : ಮಾತನಾಡುವವನು ತನ್ನನ್ನು ಹಾಗೂ ಇತರರನ್ನು ಗೌರವ ಸೂಚಕವಾಗಿ ಆತ್ಮಪ್ರಶಂಸೆಯಿಂದ ಬಳಸುವ ಸರ್ವನಾಮಗಳನ್ನು 'ಆತ್ಮಾರ್ಥಕ ಸರ್ವನಾಮ' ಎನ್ನುತ್ತಾರೆ. ಇವು ಸಾಮಾನ್ಯವಾಗಿ ಪ್ರಥಮ ಹಾಗೂ ಮಧ್ಯಮ ಪುರುಷದ ಅರ್ಥವನ್ನೇ ನೀಡುತ್ತವೆ.
**ಉದಾ :** ತಾನು, ತಾವು, ತನ್ನ, ತಮ್ಮ.

**೩. ಪ್ರಶ್ನಾರ್ಥಕ ಸರ್ವನಾಮ** : ಪ್ರಶ್ನೆಯಿಂದ ಕೂಡಿದ ಎಲ್ಲ ಸರ್ವನಾಮಗಳನ್ನು ಪ್ರಶ್ನಾರ್ಥಕ ಸರ್ವನಾಮ ಎನ್ನಲಾಗುತ್ತದೆ.

**ಉದಾ :** ಯಾವುವು? ಯಾವುದು? ಯಾರು?
ಏತರದು? ಆವುದು?

## V. ಚಟುವಟಿಕೆಗಳು :

೧. ವಿಶೇಷ ಚೇತನರನ್ನು ಸಂದರ್ಶಿಸಿ ಲೇಖನವನ್ನು ಸಿದ್ಧಪಡಿಸಿ ಸಹಪಾಠಿಗಳ ಮುಂದೆ ಓದಿರಿ.
೨. ಪತ್ರಿಕೆಗಳಲ್ಲಿ ಬರುವ ವಿಶೇಷ ಚೇತನರ ಪರಿಚಯಾತ್ಮಕ ಲೇಖನಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಿರಿ. ವಿಶೇಷ ಚೇತನರಿಗೆ ಧೈರ್ಯ, ಆತ್ಮವಿಶ್ವಾಸ ತುಂಬಲು ಇದರ ಸಹಾಯವನ್ನು ಪಡೆದುಕೊಳ್ಳಿರಿ.
೩. ವಿಶೇಷ ಚೇತನವಿರುವ ಅಂಧಮಕ್ಕಳ ಶಾಲೆಗೆ ಭೇಟಿ ನೀಡಿ ಬ್ರೈಲ್ ಲಿಪಿಯನ್ನು ಓದುವ ಮತ್ತು ಬರೆಯುವ ರೀತಿಯನ್ನು ತಿಳಿಯಿರಿ.





©KTBS Not to be republished

# ೪. ಹಕ್ಕಿಗೂಡುಗಳ ನಿಗೂಢ ಜಗತ್ತು

– ಕೆ. ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ

**ಪಾಠ ಪ್ರವೇಶ :** ನಮ್ಮ ಸುತ್ತಲ ಪರಿಸರದಲ್ಲಿ ಅನೇಕ ನಿಗೂಢ ಸಂಗತಿಗಳಿರುತ್ತವೆ. ಪ್ರಾಣಿಪಕ್ಷಿಗಳು ಮಾನವನನ್ನು ನಿಬ್ಬೆರಗಾಗಿಸುವಂತೆ ಜೀವನ ನಡೆಸುತ್ತಿರುತ್ತವೆ. ಬುದ್ಧಿವಂತ ಮಾನವ ಅವುಗಳ ಜೀವನ ಕ್ರಮವನ್ನು ಅಧ್ಯಯನ ಮಾಡಿ ತನ್ನ ಬದುಕನ್ನು ಸುಧಾರಿಸಿಕೊಳ್ಳುವ, ಸುಂದರವಾಗಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಬಂದಿದ್ದಾನೆ. ಇಂದು 'ಪರಿಸರ ಅಧ್ಯಯನ ಮತ್ತು ಸಾಹಿತ್ಯ' ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಪ್ರಕಾರವಾಗಿ ಬೆಳೆಯುತ್ತಿದೆ. ಪ್ರಸ್ತುತ ಲೇಖನದಲ್ಲಿ ಹಕ್ಕಿಗೂಡುಗಳ ನಿಗೂಢ ಜಗತ್ತು ಅನಾವರಣಗೊಂಡಿದೆ ಹಾಗೂ ಮಾನವ ಸಮಾಜಕ್ಕೆ ಬೇಕಾದ ಬದುಕಿನ ಮೌಲ್ಯಗಳು ಬಿಂಬಿತವಾಗಿವೆ.

ವಂಶಾಭಿವೃದ್ಧಿ ಎಲ್ಲಾ ಜೀವಿಗಳಲ್ಲೂ ಸಾಮಾನ್ಯವಾಗಿ ಕಂಡುಬರುವ ಸಹಜ ಪ್ರವೃತ್ತಿ. ಪ್ರತಿ ಜೀವಿಯ ಸಂತಾನಾಭಿವೃದ್ಧಿ ಕಾರ್ಯ ಅಪ್ರಜ್ಞಾಪೂರ್ವಕವಾಗಿ ನಡೆವ ಕ್ರಿಯೆಯಂತೆ ನಮಗೆ ಕಂಡರೂ ಅದರ ಹಿಂದೆ ಲಕ್ಷಾಂತರ ವರ್ಷಗಳಿಂದ ನಡೆದಿರುವ ಪ್ರಯೋಗಗಳ ಫಲಶ್ರುತಿಯಿದೆ. ವಿಕಾಸ ಪಥದ ಚರಿತ್ರೆ ಕ್ರೋಡೀಕರಣಗೊಂಡಿದೆ.

ಕೋಟ್ಯಂತರ ವರ್ಷಗಳ ವಿಕಾಸ ಕ್ರಿಯೆಯಲ್ಲಿ ಬೆನ್ನುಮೂಳೆಯ ಪ್ರಾಣಿಗಳು ಎರಡು ವಿರುದ್ಧ ದಿಕ್ಕಿನಲ್ಲಿ ಸಂತಾನೋತ್ಪತ್ತಿ ಮಾಡುತ್ತಾ ಸಾಗಿವೆ. ಮೀನು, ಕಪ್ಪೆ ಮತ್ತು ಸರೀಸೃಪಗಳಂತಹ ಪ್ರಾಣಿಗಳಲ್ಲಿ ಬಹುತೇಕ ಸಂಕುಲಗಳು ಅಸಂಖ್ಯಾತ ಮೊಟ್ಟೆಗಳನ್ನಿಟ್ಟು 'ಅವಕಾಶ ಮತ್ತು ಅದೃಷ್ಟಕ್ಕೆ' ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ. ಹಕ್ಕಿ ಮತ್ತು ಸಸ್ತನಿಗಳು ಕಡಿಮೆ ಸಂತತಿಗೆ ಜನ್ಮ ನೀಡಿ, ಅವುಗಳಿಗೆ ಲಾಲನೆ ಪೋಷಣೆ ಮಾಡಿ, ಬದುಕಿನ ಪಾಠ ಹೇಳಿ ಭಾವನಾತ್ಮಕ ನಂಟಿಗೆ ಅಂಟಿಕೊಂಡಿವೆ.

ಈ ಭಾವನಾತ್ಮಕ ನಂಟಿಗೆ, ಬದುಕಿನ ಪಾಠ ಹೇಳಿಕೊಡುವ ಶಾಲೆಗೆ ಒಂದು ಆಶ್ರಯ ಬೇಕು, ರಕ್ಷಣೆ ಬೇಕು. ಸಸ್ತನಿಗಳು ಗುಹೆ, ಪೊಟರೆ, ಗೂಡು, ಬಿಲದಂಥ ಆಶ್ರಯದಾಣಗಳನ್ನು ಆಯ್ದುಕೊಂಡರೆ ಬುದ್ಧಿವಂತ ಮನುಷ್ಯ 'ಮನೆ' ಕಟ್ಟಿದ, ಸಸ್ತನಿಗಳಿಗೂ ಹಿಂದಿನ ಹಕ್ಕಿಗಳು ಗೂಡುಕಟ್ಟಿದವು.

ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವು, ಗುಟುಕು ಪಡೆದು ಜೀವ ಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ ಅಲ್ಲಿ ಕಾಣುತ್ತದೆ. ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನ ಅಲ್ಲಿ ಸಮನ್ವಯಗೊಂಡಿದೆ. ಹುಟ್ಟಿದ ಮಕ್ಕಳಿಗೆ ಬದುಕಿನ





©KTBS Not to be republished



ಪಾಠ ಹೇಳುವ ಶಾಲೆ ಅದು. ನಿರ್ಜೀವ ವಸ್ತುವಿನಂತೆ ಕಾಣುವ ಮೊಟ್ಟೆಗೆ ಕೇವಲ ಸ್ಪರ್ಶದಿಂದಲೇ ಜೀವ ಕೊಡುವ ಹಕ್ಕಿ ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಸ್ಪರ್ಶ ಸಂಜೀವಿನಿಯ ಪಾಠ ಹೇಳುತ್ತದೆ. ತಾಯಿ –ಮಕ್ಕಳ ಕೌಟುಂಬಿಕ ಐಕಮತ್ಯಕ್ಕೂ ಗೂಡು ಇಂಬಾಗುತ್ತದೆ.

ಗೂಡು, ಹಕ್ಕಿಗಳಲ್ಲಿರುವ ತಂತ್ರಜ್ಞಾನಕ್ಕೆ ಅವು ಪಡುವ ಶ್ರಮ ಮತ್ತು ಪಡೆದಿರುವ ಕುಶಲತೆಗೆ ಹಿಡಿದ ಕನ್ನಡಿ. ಕೆಲವು ಕೀಟ, ಉರಗ ಸಂತತಿ ಮತ್ತು ಹಲವು ಸಸ್ತನಿಗಳೂ ಗೂಡು ಕಟ್ಟುತ್ತವೆ. ಆದರೆ ಹಕ್ಕಿಗಳಷ್ಟು ಕೌಶಲ್ಯದಿಂದ ಗೂಡು ಕಟ್ಟುವ ಚಾಕಚಕ್ಯತೆ ಬೇರಾವುದಕ್ಕೂ ಬಾರದು. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಅನೇಕ ವಸ್ತುಗಳನ್ನು ಸಮನ್ವಯಗೊಳಿಸಿ ಮನೆ ನಿರ್ಮಿಸುವ ಮನುಷ್ಯನ ಜಾಣ್ಮೆಯೂ ಕೆಲವೊಮ್ಮೆ ಈ ಚೋಟುದ್ದ ಹಕ್ಕಿಗಳ ಮುಂದೆ ನಾಚುತ್ತದೆ. ಅವು ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲೂ ಭಿನ್ನವಾದ ವಸ್ತುವನ್ನು ಬಳಸಬಲ್ಲವು. ಒಳಗಡೆಯ ಗೋಡೆಯನ್ನು ಪ್ಲಾಸ್ಟರ್ ಮಾಡಬಲ್ಲವು. ಗೂಡನ್ನು ಅಂದಗೊಳಿಸುವ ಸೌಂದರ್ಯಪ್ರಜ್ಞೆಯೂ ಅವಕ್ಕಿದೆ. ಆದರೆ, ಈ ಎಲ್ಲಾ ಕ್ರಿಯೆಗಳಿಗೂ ಅರ್ಥವಿರುತ್ತದೆ, ಸ್ಪಷ್ಟವಾದ ಉದ್ದೇಶವಿರುತ್ತದೆ.

ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡು ಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡು ಬೇಕು. ಮೊಟ್ಟೆ, ಮರಿಗಳನ್ನು ರಕ್ಷಿಸಿಕೊಳ್ಳಲು, ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಎತ್ತರದ ಮರದ ತುದಿ, ಕಣಿವೆ, ಬಿಲ, ದ್ವೀಪ ಅಥವಾ ನೀರಿನ ಮೇಲೆ ಅವು ಗೂಡು ಕಟ್ಟಬೇಕು.





©KTBS Not to be republished

ಮೊಟ್ಟೆ ಇಡುವ ಬೆನ್ನುಮೂಳೆ ಪ್ರಾಣಿಗಳಲ್ಲಿ ಹಕ್ಕಿಗಳೇ ಅತಿಹೆಚ್ಚು ಉಷ್ಣದೇಹಿಗಳು. ಅವುಗಳ ದೇಹದ ಉಷ್ಣತೆಯನ್ನು ಕಾಪಾಡಲು, ಮೊಟ್ಟೆಗಳಿಗೆ ಹಾಗೂ ತುಪ್ಪಳವಿಲ್ಲದ ಮರಿಗಳಿಗೆ ಕಾವು ಕೊಡಲು ಬೆಚ್ಚನೆಯ ಗೂಡು ಬೇಕು. ತಾಯ ಗರ್ಭಾಶಯದಲ್ಲಿರುವ ಭ್ರೂಣದಷ್ಟೇ ಗೂಡಿನಲ್ಲಿರುವ ಮೊಟ್ಟೆಮರಿಗಳು ಸುರಕ್ಷಿತವಾಗಿರುತ್ತವೆ. ಅದರಿಂದಲೇ 'ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ' ಎಂಬ ಗಾದೆ ರೂಢಿಯಲ್ಲಿರುವುದು.

## ಸ್ಥಳ ಆಯ್ಕೆ :

ಗೂಡು ಕಟ್ಟುವಷ್ಟೇ ಅದನ್ನು ಕಟ್ಟುವ ಸ್ಥಳದ ಆಯ್ಕೆ ಹಕ್ಕಿಯ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ನಭದಲ್ಲಿ ಹಾರಿ, ಪರ್ವತಗಳನ್ನು ಏರಿ, ಸಾಗರ, ದ್ವೀಪಗಳನ್ನು ದಾಟುವ ಹಕ್ಕಿಗಳು ತಮಗಿರುವ ಅಪೂರ್ವ ಹಾರಾಟ ಶಕ್ತಿಯಿಂದ ಎಲ್ಲೆಂದರಲ್ಲಿ ಗೂಡು ನಿರ್ಮಿಸಬಹುದಾದ ಅನಂತ ಅವಕಾಶಗಳನ್ನು ಪಡೆದಿವೆ. ಸಾಗರದ ದ್ವೀಪ, ಗಿರಿ ಶಿಖರದ ನೆತ್ತಿ, ಮನುಷ್ಯ ನುಸುಳಲಾರದ ನಿಬಿಡ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವಪ್ರದೇಶ – ಹೀಗೆ ಎಲ್ಲೆಲ್ಲೂ ಅವು ಗೂಡು ಕಟ್ಟಬಲ್ಲವು. ಈ ವಿಚಾರದಲ್ಲಿ ಮಾತ್ರ ಹಕ್ಕಿಯನ್ನು ಬೇರೆ ಯಾವ ಸಂಕುಲವೂ ಮೀರಿಸಲಾರದು.

ಹಕ್ಕಿಯ ಹಾರಾಟ ಶಕ್ತಿ ಗೂಡು ಕಟ್ಟುವ ಅನಂತ ಸಾಧ್ಯತೆಗಳನ್ನು ಸೃಷ್ಟಿಸಿದರೂ ಹಲವು ಬಾರಿ ಹಕ್ಕಿಯ ದೇಹಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ–ಬೇಟೆ ಸಂಬಂಧಗಳು ಅದರ ಸಾಮರ್ಥ್ಯಕ್ಕೆ ಮಿತಿಯೊಡ್ಡುತ್ತವೆ. ಹಕ್ಕಿಯು ಹೊಂದಿಕೊಂಡಿರುವ ಪರಿಸರ ಬದಲಾದಾಗಲೂ ಅವು ದಿಕ್ಕು ತಪ್ಪುತ್ತವೆ.

ಇಷ್ಟೆಲ್ಲ ಬದಲಾವಣೆಗಳಿಗೆ ಅವು ಸಮರ್ಥವಾಗಿ ಹೊಂದಿಕೊಳ್ಳುತ್ತವೆ. ಕೆಲವು ಹಕ್ಕಿಗಳು ಮನುಷ್ಯರಿರುವ ಕೇರಿಗಳಲ್ಲಿ ವಾಹನ ಸಂಚಾರ ಹೆಚ್ಚಿರುವ ಸ್ಥಳಗಳನ್ನೇ ಆಯ್ದುಕೊಳ್ಳುತ್ತವೆ. ಹಕ್ಕಿಗಳ ನೆಲೆಯನ್ನು ಅನೇಕ ಕಡೆ ಆಕ್ರಮಿಸಿಕೊಂಡ ನಂತರ ಹಲವಾರು ಹಕ್ಕಿಗಳು ಹೊಸ ಪರಿಸರಕ್ಕೆ ಥಟ್ಟನೆ ಹೊಂದಿಕೊಂಡವು. ಹಾಗಾಗಿ ನಾವೀಗ ಟ್ರಾನ್ಸ್‌ಫಾರ್ಮರ್ ಬಳಿ, ಮೀಟರ್ ಪೆಟ್ಟಿಗೆಯಲ್ಲಿ, ಅಷ್ಟೇ ಏಕೆ ವಿದ್ಯುತ್ ತಂತಿಗಳಲ್ಲಿ ತೂಗಾಡುವ ಗೂಡುಗಳನ್ನು ಕಾಣುತ್ತಿದ್ದೇವೆ.

## ಅಲಂಕಾರ ಪ್ರಜ್ಞೆ :

ಗೂಡಿನ ಒಳಭಾಗದಲ್ಲಿ ಶುಚಿತ್ವಕ್ಕೆ ಹಕ್ಕಿಗಳು ಹೆಚ್ಚು ಮಹತ್ವ ನೀಡುತ್ತವೆ. ಗೂಡು ಎದ್ದು ಕಾಣದ ರೀತಿಯಲ್ಲಿ ರಚಿಸುತ್ತವೆ. ಕೆಲವು ಹಕ್ಕಿಗಳಿಗೆ ವಿಪರೀತ ಅಲಂಕಾರ ಪ್ರಜ್ಞೆ ಇದೆ. ಅವು ವರ್ಣಮಯ ಹೂದಳವನ್ನೋ ಅಥವಾ ಹೊಳೆವ ಕಲ್ಲುಗಳನ್ನೋ ಹೆಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚೂರು, ಬಟ್ಟೆಯ ಚಿಂದಿ ಮುಂತಾದವುಗಳನ್ನು ಗೂಡಿಗೆ ತರುತ್ತವೆ. ಅಮೇರಿಕಾದಲ್ಲಿ ಗ್ಯಾನೆಟ್ ಎಂಬ ಕಡಲ ಹಕ್ಕಿ ಗಾಲ್ಫ್ ಚೆಂಡು, ನೀಲಿ ಸೀಸೆಯ ಚೂರು, ಈರುಳ್ಳಿ ಸಿಪ್ಪೆ



ಪ್ರಾಮಾಣಿಕತೆಗೆ ಫಲ ದಕ್ಕುತ್ತದೆ, ಆದರೆ ಬಹಳ ಸಮಯ ಕಾದಿರಬೇಕು – ಮಹಾತ್ಮ ಗಾಂಧಿ

©KTBS Not to be republished

ಮತ್ತು ಸಣ್ಣ ಬೊಂಬೆಯೊಂದನ್ನು ತಂದು ಗೂಡನ್ನು ಅಲಂಕರಿಸಿದ್ದು ೧೯೪೭ ರಷ್ಟು ಹಿಂದೆಯೇ ವರದಿಯಾಗಿತ್ತು.

ನಮ್ಮ ಕಾಡುಗಳಲ್ಲಿನ ನೀಲಿ ಸಾಮ್ರಾಟ (Blacknaped blue flycatcher) ಮತ್ತು ಪ್ಯಾರಡೈಸ್ ಫ್ಲೈಕ್ಯಾಚರ್ (ಸಗ್ಗದಕ್ಕಿ) ತಮ್ಮ ಗೂಡನ್ನು ಬಹು ಸುಂದರವಾಗಿ ಅಲಂಕರಿಸುತ್ತವೆ. ಕೇವಲ ಎರಡು ಒಣ ಕಡ್ಡಿಯನ್ನು ಅಪ್ಪಿ ಹಿಡಿದಂತೆ ಗುರುತ್ವಾಕರ್ಷಣೆ ಸಮತೋಲನವನ್ನು ಕಾಯ್ದಿಟ್ಟುಕೊಂಡು ಬಟ್ಟಲಾಕಾರದಲ್ಲಿ ಅವು ಗೂಡು ನಿರ್ಮಿಸುತ್ತವೆ. ಹೊರಮೈಗೆ ಜೇಡರ ಮೊಟ್ಟೆಗಳ ಕೋಶಗಳನ್ನು ನಿರ್ದಿಷ್ಟ ಅಂತರದಲ್ಲಿ ಜೋಡಿಸಿ ಅಲಂಕರಿಸುತ್ತವೆ. ಶತ್ರುಗಳ ಕಣ್ಣಿಗೆ ಗೂಡು ಗೋಚರಿಸಬಾರದೆಂಬುದು ಇದರ ಉದ್ದೇಶ. ಆದರೆ ಈ ಗೂಡುಗಳು ಭದ್ರತೆ, ತಾಂತ್ರಿಕ ಪರಿಣತಿ ಮತ್ತು ಕಲಾತ್ಮಕ ಪ್ರಜ್ಞೆಯನ್ನು ಏಕಕಾಲಕ್ಕೆ ಅಭಿವ್ಯಕ್ತಿಸುತ್ತವೆ.

* * * *

## ಕೃತಿಕಾರರ ಪರಿಚಯ :



**ಬಿ. ಎಸ್. ಕೃಪಾಕರ** ಮತ್ತು **ಕೆ. ಸೇನಾನಿ** ಈ ಇಬ್ಬರು ಪರಿಸರ ಮತ್ತು ವನ್ಯಜೀವಿಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯಚಿತ್ರ, ಛಾಯಾಗ್ರಹಣ ಹಾಗೂ ಸಾಹಿತ್ಯದ ಮೂಲಕ ಹೆಚ್ಚು ಚಿರಪರಿಚಿತರಾಗಿದ್ದಾರೆ. ಇವರು ಕಾಡುನಾಯಿಗಳ ಕುರಿತು 'ದಿ ಪ್ಯಾಕ್' ಸಾಕ್ಷ್ಯಚಿತ್ರವನ್ನು ತಯಾರಿಸಿದ್ದಾರೆ. ಈ ಚಿತ್ರಕ್ಕೆ ಪ್ರತಿಷ್ಠಿತ 'ಗ್ರೀನ್ ಆಸ್ಕರ್' ಪ್ರಶಸ್ತಿ ದೊರೆತಿದೆ. ಈ ಇಬ್ಬರು ಇಂಗ್ಲೀಷಿನಲ್ಲಿ 'ಎ ವಾಕ್ ಆನ್ ದಿ ವೈಲ್ಡ್ ಸೈಡ್', 'ವ್ಯಾಲಿ ಆಫ್ ಬ್ಯಾಂಬೂಸ್ ಅಂಡ್ ಫರ್ಗಟನ್ ವಿಲೇಜಸ್' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರು ಶ್ರೀ **ಕೆ. ಪುಟ್ಟಸ್ವಾಮಿ** ಅವರ ಜೊತೆಗೂಡಿ 'ಜೀವಜಾಲ' ಕೃತಿಯನ್ನು ರಚಿಸಿದ್ದಾರೆ. ಪ್ರಸ್ತುತ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಲೇಖನವನ್ನು 'ಜೀವಜಾಲ' ಕೃತಿಯಿಂದ ಆರಿಸಲಾಗಿದೆ.

## ಅಭ್ಯಾಸ

### I. ಪದಗಳ ಅರ್ಥ :

**ಅನಂತ** – ಕೊನೆಯಿಲ್ಲದ

**ಅಪೂರ್ವ** – ಅಪರೂಪದ; ಹಿಂದೆ ಎಂದೂ ಕಾಣದ.

**ಅವಘಡ** – ತೊಂದರೆ; ಅಪಘಾತ.

**ಇಂಬು** – ಎಡೆ; ದಾರಿ; ಅವಕಾಶ.

**ಉರಗ** – ಹಾವು

**ಉಷ್ಣ** – ಬಿಸಿ; ಸೆಕೆ.

©KTBS Not to be republished

**ಐಕಮತ್ಯ** – ಏಕಾಭಿಪ್ರಾಯ; ಒಗ್ಗಟ್ಟು.
**ಕ್ರೋಢೀಕರಣ** – ಒಟ್ಟುಗೂಡಿಸುವಿಕೆ
**ತುಪ್ಪಳ** – ಪ್ರಾಣಿಗಳ ಮೃದು ಕೂದಲು; ಉಣ್ಣೆ.
**ದ್ವೀಪ** – ನೀರಿನಿಂದ ಸುತ್ತುವರೆದ ಭೂಭಾಗ.
**ನಿಗೂಢ** –ರಹಸ್ಯ; ಅಡಗಿಸಿಟ್ಟ; ಮುಚ್ಚಿಟ್ಟ.
**ಪಥ** – ದಾರಿ; ಹಾದಿ.
**ಫಲಶೃತಿ** – ಪರಿಣಾಮ; ಫಲಿತಾಂಶ.
**ವಾಸ್ತುಶಿಲ್ಪ** – ಕಟ್ಟಡಗಳನ್ನು ಕಟ್ಟುವ ಕಲೆ.
**ವೈಪರಿತ್ಯ** – ವಿರೋಧ; ಅಸಂಬದ್ಧ.
**ಸಂಜೀವಿನಿ** – ಜೀವಕೊಡುವ ಮೂಲಿಕೆ.
**ಸರೀಸೃಪ** – ನೆಲದಲ್ಲಿ ಹರಿದಾಡುವ ಪ್ರಾಣಿ.
**ಸಾಕಾರ** – ಆಕಾರದಿಂದ ಕೂಡಿರುವುದು.
**ಕಡಲು** – ಸಮುದ್ರ
**ಗಾಥೆ** – ಪದ್ಯ; ಹಾಡು; ಗಾದೆ.
**ದಾರುಣ** – ಭಯಂಕರ; ಉಗ್ರತೆ.
**ನಭ** – ಆಕಾಶ; ಮೋಡ.
**ನಿಬಿಡ** – ದಟ್ಟವಾದ.
**ಪ್ರವೃತ್ತಿ** – ಆಸಕ್ತಿ; ಸ್ವಭಾವ; ಒಲವು.
**ರಶ್ಮಿ** – ಕಿರಣ; ಕಾಂತಿ.
**ವಿಕಾಸ** – ಅರಳುವಿಕೆ; ಬದಲಾವಣೆ.
**ಸಂಕುಲ** – ಗುಂಪು; ಸಮೂಹ.
**ಸಮನ್ವಯ** – ಹೊಂದಾಣಿಕೆ.
**ಸಸ್ತನಿ** – ಹಾಲುಕೊಡುವ ಜೀವಿ
**ಸ್ವೋಪಜ್ಞತೆ** – ಸೃಜನಸಾಮರ್ಥ್ಯ

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಸಸ್ತನಿಗಳ ಆಶ್ರಯದಾಣಗಳು ಯಾವುವು?
೨. ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?
೩. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?
೪. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
೫. ಅಮೆರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು?

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?
೨. ಹಕ್ಕಿಗೂಡಿನ ವಿಶೇಷತೆಗಳೇನು?
೩. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?
೪. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?
೫. ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಗೂಡು ಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ?
೬. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ?
೭. ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು?



ತೆಳ್ಳಗಿನ ದಾರವೊಂದು ಗಾಳಿಪಟವನ್ನು ನಿಯಂತ್ರಿಸುವಂತೆ ಮಾನವನ ಸಹನೆ ಆತನನ್ನು ನಿಯಂತ್ರಿಸುತ್ತದೆ – ಮಹಾವೀರ

©KTBS Not to be republished

**ಇ) ಸಂದರ್ಭದೊಡನೆ ವಿವರಿಸಿರಿ.**

೧. ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ.
೨. ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು.
೩. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ.

## III. ಭಾಷಾಭ್ಯಾಸ :

**ಅ) ಕೆಳಗಿನ ಸಂಧಿ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ಬರೆಯಿರಿ.**

ವಂಶಾಭಿವೃದ್ಧಿ, ಸಂತಾನಾಭಿವೃದ್ಧಿ, ಕೋಟ್ಯಂತರ,
ಆಶ್ರಯದಾಣ, ಬಟ್ಟಲಾಕಾರ, ಸಂತಾನೋತ್ಪತ್ತಿ.

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

ಸೋಪಜ್ಞತೆ, ಅವಘಡ, ಸಂಜೀವಿನಿ, ಸಮನ್ವಯ
ಅಪೂರ್ವ, ಐಕಮತ್ಯ, ಅಲಂಕಾರ, ನಿಗೂಢ.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಸಹಜ, ಪ್ರಜ್ಞೆ, ನಿರ್ಜೀವ, ಸ್ಪರ್ಶ, ನಿರಾಕರಿಸು.

**ಈ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ.**

ವರ್ಷ, ಅಚ್ಚರಿ, ದನಿ, ಜ್ಞಾನ, ಸ್ಪರ್ಶ, ಜನ್ಮ, ವನ.

**ಉ) ಈ ಕೆಳಗಿನ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.**

'ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ.'

©KTBS Not to be republished

## IV. ಸೈದ್ಧಾಂತಿಕ ವ್ಯಾಕರಣ :

### ಕಾಲಗಳು

ನಿಮಗೆ ತಿಳಿದಿರುವಂತೆ ಕಾಲಗಳಲ್ಲಿ ಮೂರು ವಿಧ.

೧. ಭೂತಕಾಲ

೨. ವರ್ತಮಾನ ಕಾಲ

೩. ಭವಿಷ್ಯತ್ ಕಾಲ

ಕೆಲಸ ಅಥವಾ ಕ್ರಿಯೆ ಯಾವ ಕಾಲದಲ್ಲಿ ನಡೆಯಿತು ಎಂಬುದನ್ನು ವಾಕ್ಯದಲ್ಲಿನ 'ಕ್ರಿಯಾಪದ' ನಿರ್ಧರಿಸುತ್ತದೆ. ಕ್ರಿಯಾಪದದ ಮೂಲ ರೂಪವನ್ನು **'ಧಾತು'** ಎಂದು ಕರೆಯುತ್ತೇವೆ. ಧಾತುವಿಗೆ 'ಕಾಲಸೂಚಕ ಪ್ರತ್ಯಯ' ಹಾಗೂ 'ಆಖ್ಯಾತ ಪ್ರತ್ಯಯ' ಸೇರಿ 'ಕ್ರಿಯಾಪದ' ಆಗುತ್ತದೆ. ಕ್ರಿಯಾಪದದಲ್ಲಿ ಕಾಲಸೂಚಕ ಪ್ರತ್ಯಯಗಳು ಮೂರೂ ಕಾಲದಲ್ಲಿ ಯಾವ ರೀತಿ ಬಳಕೆಯಾಗುತ್ತವೆ ಎಂಬುದನ್ನು ವಿವರವಾಗಿ ತಿಳಿಯೋಣ.

**೧. ಭೂತಕಾಲ :**

ಭೂತಕಾಲವು ಈ ಹಿಂದೆ ನಡೆದು ಹೋದ ಕ್ರಿಯೆಯನ್ನು ಸೂಚಿಸುತ್ತದೆ. ಅಂದರೆ ಆ ಕ್ರಿಯೆಯು ಮುಗಿದು ಹೋಗಿದ್ದರೆ ಅದು ಭೂತಕಾಲವೆನಿಸುತ್ತದೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ.

**"ಸಲೀಮನು ಶಾಲೆಗೆ ಹೋದನು"** ಈ ವಾಕ್ಯದಲ್ಲಿ ಕ್ರಿಯೆಯು ಭೂತಕಾಲದಲ್ಲಿ ನಡೆದಿರುವುದನ್ನು ಸೂಚಿಸುತ್ತದೆ. ಭೂತಕಾಲದ ಕ್ರಿಯಾಪದಗಳು ಹೇಗೆ ಆಗುತ್ತವೆ ಎಂಬುದನ್ನು ಗಮನಿಸಿ.

| | **ಧಾತು** | + | **ಕಾಲಸೂಚಕ ಪ್ರತ್ಯಯ** | + | **ಆಖ್ಯಾತ ಪ್ರತ್ಯಯ** | **= ಕ್ರಿಯಾಪದ** |
|---|---|---|---|---|---|---|
| **೧. ಪ್ರಥಮ ಪುರುಷ** | | | | | | |
| ಪುಲ್ಲಿಂಗ | ನೋಡು | + | ದ | + | ಅನು | = ನೋಡಿದನು |
| ಸ್ತ್ರೀಲಿಂಗ | ನೋಡು | + | ದ | + | ಅಳು | = ನೋಡಿದಳು |
| ನಪುಂಸಕಲಿಂಗ | ನೋಡು | + | ದ | + | ಇತು | = ನೋಡಿತು |
| **೨. ಮಧ್ಯಮ ಪುರುಷ** | ನೋಡು | + | ದ | + | ಎ | = ನೋಡಿದೆ |
| **೩. ಉತ್ತಮ ಪುರುಷ** | ನೋಡು | + | ದ | + | ಎನು | = ನೋಡಿದೆನು |

ಇಲ್ಲಿ **'ದ'** ಎಂಬುದು ಭೂತ ಕಾಲವನ್ನು ಸೂಚಿಸುವ ಪ್ರತ್ಯಯ ಎಂಬುದನ್ನು ನೆನಪಿಡಿ.





©KTBS Not to be republished

**೨. ವರ್ತಮಾನ ಕಾಲ :**

ವರ್ತಮಾನ ಕಾಲವು ಕ್ರಿಯೆಯು ನಡೆಯುತ್ತಿರುವುದನ್ನು ಸೂಚಿಸುತ್ತದೆ. ಅಂದರೆ ಕ್ರಿಯೆಯು ಪ್ರಸ್ತುತ ಕಾಲದಲ್ಲಿ ನಡೆದರೆ ಅದು ವರ್ತಮಾನಕಾಲ ಅನಿಸುತ್ತದೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ.

**"ಮೇರಿ ಶಾಲೆಗೆ ಹೋಗುತ್ತಾಳೆ"** ಇಲ್ಲಿ ಕ್ರಿಯೆಯು ವರ್ತಮಾನ ಕಾಲದಲ್ಲಿ ನಡೆಯುತ್ತಿರುವುದನ್ನು ಸೂಚಿಸುತ್ತದೆ. ವರ್ತಮಾನ ಕಾಲದ ಕ್ರಿಯಾಪದಗಳು ಹೇಗೆ ಆಗುತ್ತವೆ ಎಂಬುದನ್ನು ಗಮನಿಸಿ.

| | ಧಾತು | + | ಕಾಲಸೂಚಕ ಪ್ರತ್ಯಯ | + | ಆಖ್ಯಾತ ಪ್ರತ್ಯಯ | = ಕ್ರಿಯಾಪದ |
|---|---|---|---|---|---|---|
| **೧. ಪ್ರಥಮ ಪುರುಷ** | | | | | | |
| ಪುಲ್ಲಿಂಗ | ನೋಡು | + | ಉತ್ತ | + | ಆನೆ | = ನೋಡುತ್ತಾನೆ |
| ಸ್ತ್ರೀಲಿಂಗ | ನೋಡು | + | ಉತ್ತ | + | ಆಳೆ | = ನೋಡುತ್ತಾಳೆ |
| ನಪುಂಸಕಲಿಂಗ | ನೋಡು | + | ಉತ್ತ | + | ಅದೆ | = ನೋಡುತ್ತದೆ |
| **೨. ಮಧ್ಯಮ ಪುರುಷ** | ನೋಡು | + | ಉತ್ತ | + | ಈಯ | = ನೋಡುತ್ತೀಯ |
| **೩. ಉತ್ತಮ ಪುರುಷ** | ನೋಡು | + | ಉತ್ತ | + | ಏನೆ | = ನೋಡುತ್ತೇನೆ |

ಇಲ್ಲಿ **'ಉತ್ತ'** ಎಂಬುದು ವರ್ತಮಾನ ಕಾಲವನ್ನು ಸೂಚಿಸುವ ಪ್ರತ್ಯಯ ಎಂಬುದನ್ನು ನೆನಪಿಡಿ.

**೩. ಭವಿಷ್ಯತ್ ಕಾಲ:**

ಭವಿಷ್ಯತ್ ಕಾಲವು ಮುಂದೆ ನಡೆಯುವ ಕ್ರಿಯೆಯನ್ನು ವಿವರಿಸುವ ಕಾಲವಾಗಿದೆ. ಅಂದರೆ ಕ್ರಿಯೆ ಮುಂದೆ ಜರುಗುವುದನ್ನು ಸೂಚಿಸುತ್ತದೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ.

"ರಾಮನು ಶಾಲೆಗೆ ಹೋಗುವನು"

ಇಲ್ಲಿ ರಾಮನು ಶಾಲೆಗೆ ಹೋಗುವ ಕ್ರಿಯೆಯು ಭವಿಷ್ಯತ್ ಕಾಲದಲ್ಲಿ ನಡೆಯುವುದನ್ನು ಸೂಚಿಸುತ್ತದೆ. ಭವಿಷ್ಯತ್ ಕಾಲದ ಕ್ರಿಯಾಪದಗಳು ಹೇಗೆ ಆಗುತ್ತವೆ ಎಂಬುದನ್ನು ಗಮನಿಸಿ.

| | ಧಾತು | + | ಕಾಲಸೂಚಕ ಪ್ರತ್ಯಯ | + | ಆಖ್ಯಾತ ಪ್ರತ್ಯಯ | = ಕ್ರಿಯಾಪದ |
|---|---|---|---|---|---|---|
| **೧. ಪ್ರಥಮ ಪುರುಷ** | | | | | | |
| ಪುಲ್ಲಿಂಗ | ನೋಡು | + | ವ | + | ಅನು | = ನೋಡುವನು |
| ಸ್ತ್ರೀಲಿಂಗ | ನೋಡು | + | ವ | + | ಅಳು | = ನೋಡುವಳು |
| ನಪುಂಸಕಲಿಂಗ | ನೋಡು | + | ವ | + | ಅದು | = ನೋಡುವುದು |
| **೨. ಮಧ್ಯಮ ಪುರುಷ** | ನೋಡು | + | ವ | + | ಇ | = ನೋಡುವಿ |
| **೩. ಉತ್ತಮ ಪುರುಷ** | ನೋಡು | + | ವ | + | ಎನು | = ನೋಡುವೆನು |

©KTBS Not to be republished



**ಮಾಡುವ ಕೆಲಸವನ್ನು ಶ್ರದ್ಧೆ, ಪ್ರಾಮಾಣಿಕತೆಗಳಿಂದ ಮಾಡು. ಅದರ ಫಲ ಸಿಕ್ಕೇ ಸಿಗುತ್ತದೆ.**

ಇಲ್ಲಿ **'ವ'** ಎಂಬುದು ಭವಿಷ್ಯತ್ ಕಾಲವನ್ನು ಸೂಚಿಸುವ ಪ್ರತ್ಯಯ ಎಂಬುದನ್ನು ನೆನಪಿಡಿ. ಹೀಗೆ ಕನ್ನಡ ವ್ಯಾಕರಣದಲ್ಲಿ 'ಕಾಲ'ವನ್ನು ಮೂರು ಬಗೆಗಳಲ್ಲಿ ಗುರುತಿಸಲಾಗಿದೆ.

## ಕಾಲ ಪಲ್ಲಟ :

ವಾಕ್ಯದಲ್ಲಿ ಒಂದು ನಿರ್ದಿಷ್ಟ ಕಾಲದ ಪ್ರಯೋಗವು ಮತ್ತೊಂದು ಕಾಲದ ಅರ್ಥವನ್ನು ಸೂಚಿಸುವುದೇ ಕಾಲಪಲ್ಲಟ.

**ಉದಾ :** ನಮ್ಮಣ್ಣನು ನಾಳೆ ಬರುತ್ತಾನೆ.

ಈ ವಾಕ್ಯದಲ್ಲಿ 'ಬರುತ್ತಾನೆ' ಎಂಬುದು ವರ್ತಮಾನ ಕಾಲದಲ್ಲಿದೆ. ಆದರೆ 'ನಾಳೆ' ಎನ್ನುವ ಶಬ್ದ ಭವಿಷ್ಯತ್ ಕಾಲವನ್ನು ಸೂಚಿಸುತ್ತಿದೆ. ವ್ಯಾಕರಣದ ನಿಯಮಗಳನುಸಾರ ಈ ವಾಕ್ಯವು 'ನಮ್ಮಣ್ಣನು ನಾಳೆ ಬರುವನು' ಎಂದು ಪ್ರಯೋಗವಾಗಬೇಕಿತ್ತು. ಹೀಗೆ ನಿರ್ದಿಷ್ಟ ಕಾಲದಲ್ಲಿ ಪ್ರಯೋಗವಾಗಬೇಕಾದ ಕ್ರಿಯಾಪದ ಬೇರೊಂದು ಕಾಲದಲ್ಲಿ ಪ್ರಯೋಗವಾಗುವುದನ್ನು 'ಕಾಲಪಲ್ಲಟ' ಎಂದು ಕರೆಯಲಾಗುತ್ತದೆ

## ವಿಭಕ್ತಿಗಳು ಪ್ರತ್ಯಯಗಳು :

'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆದನು' ಈ ವಾಕ್ಯವು – ಭೀಮ, ತಾನು, ಬಲಗಾಲು, ಚೆಂಡು – ಹೀಗೆ ಕೇವಲ ನಾಮಪ್ರಕೃತಿಗಳನ್ನೇ ಹೇಳಿ ಒದೆದನು ಎಂದಿದ್ದರೆ ಅರ್ಥವಾಗುತ್ತಿರಲಿಲ್ಲ.

'ಭೀಮ, ತಾನು, ಬಲಗಾಲು, ಚೆಂಡು' ಈ ನಾಲ್ಕು ಪ್ರಕೃತಿಗಳಿಗೆ ಪರಸ್ಪರ ವಾಕ್ಯದಲ್ಲಿ ಒಂದು ಸಂಬಂಧವಿದೆ. ಈ ಸಂಬಂಧವನ್ನು ವಿಭಕ್ತಿ ಪ್ರತ್ಯಯಗಳು ಉಂಟುಮಾಡುತ್ತವೆ. ಈ ರೀತಿ ನಾಮಪ್ರಕೃತಿಗೆ ಸೇರುವ ಪ್ರತ್ಯಯಗಳನ್ನು **'ವಿಭಕ್ತಿ ಪ್ರತ್ಯಯಗಳು'** ಎನ್ನುತ್ತಾರೆ.

ನಾಮಪದವು ಕ್ರಿಯಾಪದದೊಂದಿಗೆ ಹೊಂದಿರುವ ಸಂಬಂಧವನ್ನು ತಿಳಿಸುವ ಕರ್ತೃ, ಕರ್ಮ, ಕರಣ ಮುಂತಾದವುಗಳನ್ನು ಕಾರಕಾರ್ಥಗಳು ಎಂದು ಕರೆಯಲಾಗುತ್ತದೆ. ಅಂದರೆ, ಕ್ರಿಯಾನಿಮಿತ್ತ. 'ಮಾಡಿಸುವ' ಅಥವಾ 'ಮಾಡಿಸುವ ಪದಾರ್ಥವನ್ನು' ಸೂಚಿಸುವುದೇ **ಕಾರಕ**. ವಿಭಕ್ತಿಗಳು ಏಳು ಇದ್ದರೂ ಕಾರಕ ಆರು ಮಾತ್ರ. ಷಷ್ಠೀ ವಿಭಕ್ತಿ ಪ್ರತ್ಯಯ 'ಅ' ಎಂಬುದು ಕ್ರಿಯೆಗೆ ನೇರವಾಗಿ ಸಂಬಂಧ ಪಡದಿರುವುದರಿಂದ ಅದನ್ನು ಕಾರಕ ಎಂದು ಕರೆಯಲಾಗುವುದಿಲ್ಲ. 'ರಾಮನ' ಎಂಬ ಷಷ್ಠೀ ವಿಭಕ್ತಿಯಿಂದ ಕೂಡಿದ ಪದದ ಮುಂದೆ ನೇರವಾಗಿ ಕ್ರಿಯಾಪದವನ್ನು ಇರಿಸಲು ಸಾಧ್ಯವಿಲ್ಲ.

©KTBS Not to be republished

## ವಿಭಕ್ತಿ ಪಲ್ಲಟ :

ನಾವು ಮಾತನಾಡುವಾಗ ನಾಮಪ್ರಕೃತಿಗಳಿಗೆ ಯಾವ ಯಾವ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಹೇಳಬೇಕೋ ಅದನ್ನು ಬಿಟ್ಟು ಬೇರೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಹೇಳುವುದುಂಟು. ಹೀಗೆ ಬರಬೇಕಾದ ವಿಭಕ್ತಿ ಪ್ರತ್ಯಯಕ್ಕೆ ಪ್ರತಿಯಾಗಿ ಬೇರೊಂದು ವಿಭಕ್ತಿ ಪ್ರತ್ಯಯ ಬರುವಂತೆ ಹೇಳುವುದೇ 'ವಿಭಕ್ತಿ ಪಲ್ಲಟ' ಅನಿಸುತ್ತದೆ.

ಈ ಕೆಳಗಿನ ಉದಾಹರಣೆಗಳನ್ನು ಗಮನಿಸಿ...

೧. ಬಂಡಿಯನ್ನು ಹತ್ತಿದನು
೨. ಊರನ್ನು ಸೇರಿದನು
೩. ಬೆಟ್ಟವನ್ನು ಹತ್ತಿದನು

– ಹೀಗೆ ದ್ವಿತೀಯಾ ವಿಭಕ್ತಿಯನ್ನು ಸೇರಿಸಿ ಹೇಳಬೇಕಾದ ಕಡೆಯಲ್ಲಿ....

೧. ಬಂಡಿಗೆ ಹತ್ತಿದನು
೨. ಊರಿಗೆ ಸೇರಿದನು
೩. ಬೆಟ್ಟಕ್ಕೆ ಹತ್ತಿದನು

ಹೀಗೆ ಚತುರ್ಥೀ ವಿಭಕ್ತಿಯನ್ನು ಸೇರಿಸಿ ಹೇಳುವುದು ವಾಡಿಕೆ. ಇಲ್ಲಿ ದ್ವಿತೀಯಾರ್ಥದಲ್ಲಿ ಚತುರ್ಥಿ ವಿಭಕ್ತಿ ಬಂದಿದೆಯೆಂದು ತಿಳಿಯಬೇಕು. ಜೀವಂತ ಭಾಷೆಯಲ್ಲಿ ಇಂತಹ ಬದಲಾವಣೆಗಳು ಅಲ್ಲೊಂದು ಇಲ್ಲೊಂದು ಆಗುತ್ತಿರುತ್ತವೆ. ಇಂತಹ ಬದಲಾವಣೆಯನ್ನು ವ್ಯಾಕರಣಕಾರರು ಒಪ್ಪಿಕೊಂಡಿದ್ದರೂ ನಿಯಮ ಬಿಟ್ಟು ಎಲ್ಲಾ ಕಡೆ ಬಳಸಬಾರದು. ಭಾಷೆಯ ಶುದ್ಧರೂಪದ ಬಳಕೆಗೆ ಹೆಚ್ಚು ಗಮನ ನೀಡಬೇಕು.

## V. ಚಟುವಟಿಕೆ :

೧. ನಿಮ್ಮ ಮನೆ ಅಥವಾ ಶಾಲೆಯ ಪರಿಸರದಲ್ಲಿ ಪಕ್ಷಿಗಳು ಗೂಡು ಕಟ್ಟುವ ರೀತಿಯನ್ನು ಗಮನಿಸಿರಿ. ಸಾಧ್ಯವಾದರೆ ಅವುಗಳ ಫೋಟೋ ತೆಗೆದು ಶಾಲೆಯ ಭಿತ್ತಿಪತ್ರದಲ್ಲಿ ಪ್ರಕಟಿಸಿರಿ.
೨. "ಪರಿಸರ ಸಂರಕ್ಷಣೆ ಇಂದಿನ ಅಗತ್ಯ' ಈ ಕುರಿತು ನಿಮ್ಮ ಗೆಳೆಯನಿಗೆ ಒಂದು ಪತ್ರ ಬರೆಯಿರಿ.
೩. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು ಬರೆದಿರುವ 'ಮಿಂಚುಳ್ಳಿ' ಪುಸ್ತಕವನ್ನು ಓದಿರಿ.
೪. ಪತ್ರಿಕೆಯಲ್ಲಿ ಬರುವ ಚಿತ್ರ ಸಹಿತ ಪಕ್ಷಿಗಳ ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ಮಾಡಿರಿ.

©KTBS Not to be republished



ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ, ದುರ್ಜನರ ಸಹವಾಸ ಹೆಜ್ಜೇನು ಕಡಿದಂತೆ.

# ೫. ಕಾಫೀ–ಕಪ್ಪು

– ಗುರುರಾಜ ಕರ್ಜಗಿ

**ಪಾಠ ಪ್ರವೇಶ :** ಗುರು ಶಿಷ್ಯರ ಸಂಬಂಧ ತಂದೆ ಮಕ್ಕಳಷ್ಟೇ ಪವಿತ್ರವಾದುದು. ವಿದ್ಯಾರ್ಥಿಗಳನ್ನು ಜೀವನದುದ್ದಕ್ಕೂ ತಿದ್ದುವ, ಆತ್ಮಸ್ಥೈರ್ಯ ತುಂಬುವ ಕೆಲಸವನ್ನು ಶಿಕ್ಷಕರು ಮಾಡುತ್ತಲೇ ಇರುತ್ತಾರೆ. ಮಕ್ಕಳ ಮನಸ್ಥಿತಿಯನ್ನು ಶ್ರೇಷ್ಠ ಗುರು ಮಾತ್ರ ಅರ್ಥಮಾಡಿಕೊಳ್ಳಬಲ್ಲ. ಅವರಿಗೆ ಅಗತ್ಯವಿರುವ ಜ್ಞಾನವನ್ನು ಅಗತ್ಯವಿರುವಷ್ಟು, ಅಗತ್ಯ ಸಂದರ್ಭದಲ್ಲಿ ತಿಳಿಸಿಕೊಡುವ ಜಾಣ್ಮೆ ಗುರುವಿನಲ್ಲಿರುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಶಿಕ್ಷಕರ ಬಗ್ಗೆ ಅಪಾರ ಗೌರವ ಹಾಗೂ ಅಭಿಮಾನಗಳನ್ನು ಹೊಂದಿರುತ್ತಾರೆ.

ಪ್ರಸ್ತುತ ಪಾಠದಲ್ಲಿ ಗುರುಗಳು ತಮ್ಮನ್ನು ಕಾಣಲು ಬಂದ ವಿದ್ಯಾರ್ಥಿಗಳಿಗೆ ಜೀವನ ಪಾಠವನ್ನು 'ಕಾಫೀ–ಕಪ್' ಮೂಲಕ ಮನವರಿಕೆ ಮಾಡಿಕೊಡುವ ಸನ್ನಿವೇಶ ಮನೋಜ್ಞವಾಗಿದೆ.

ಒಂದು ಬಾರಿ ಒಂದೇ ಶಾಲೆಯಲ್ಲಿ ಕಲಿತು ನಂತರ ಬೆಳೆದು ದೊಡ್ಡವರಾದ ಒಂದಿಷ್ಟು ಹಳೆಯ ವಿದ್ಯಾರ್ಥಿಗಳೆಲ್ಲ ತಮ್ಮ ಹೆಡ್ ಮಾಸ್ತರರ ಮನೆಗೆ ಹೋದರು. ಅವರು ನಿವೃತ್ತಿಯಾಗಿ ಎಷ್ಟೋ ವರ್ಷಗಳಾಗಿವೆ. ಈ ಎಲ್ಲ ಹಳೆಯ ವಿದ್ಯಾರ್ಥಿಗಳನ್ನು ಕಂಡು ಅವರಿಗೆ ತುಂಬ ಸಂತೋಷ. ನಿಜವಾದ ಶಿಕ್ಷಕನಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರಿಯರಾಗುತ್ತಾರೆ. ಹೆಡ್‌ಮಾಸ್ತರರು ಸಂಭ್ರಮದಿಂದ ಅವರನ್ನೆಲ್ಲ ಪುಟ್ಟ ಮನೆಯಲ್ಲಿ ಅಲ್ಲಲ್ಲಿ ಕೂಡ್ರಿಸಿ ಮಾತನಾಡುತ್ತಿದ್ದರು. ಆಗ ಈ ಹಿರಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು. ಒಂದಲ್ಲ ಒಂದು ತಕರಾರು. ಎಲ್ಲ ಕಡೆಗೆ ವ್ಯಾಪಾರ ಕಡಿಮೆಯಾಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತಿದೆ. ಹಣಕ್ಕೆ ಬೆಲೆಯೇ ಇಲ್ಲ, ಮಕ್ಕಳು ಬೆಳೆಯುತ್ತಿದ್ದಾರೆ, ಅವರನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ. ಹೀಗೆಲ್ಲ ತೊಂದರೆಗಳ ಸರಮಾಲೆ ಬೆಳೆಯುತ್ತಿತ್ತು. ಆಗ ಹೆಡ್‌ಮಾಸ್ತರರು ಹೇಳಿದರು. "ಮಕ್ಕಳೇ ಒಂದು ಐದು ನಿಮಿಷ ಇರಿ. ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವರ್ಷವಾಯಿತು. ಆದರೆ ನನ್ನ ಕಾಫೀ ಕೂಡ ತುಂಬ ಚೆನ್ನಾಗಿರುತ್ತದೆ" ಎಂದು ಜೋರಾಗಿ ನಕ್ಕು ಅಡುಗೆ ಮನೆಗೆ ಹೋದರು. ಹತ್ತು ನಿಮಿಷದಲ್ಲಿ ಒಂದು ದೊಡ್ಡ ಪಾತ್ರೆಯಲ್ಲಿ ಬಿಸಿ ಬಿಸಿ ಕಾಫೀ ತಂದರು. ಒಂದೆರಡು ಟ್ರೇನಲ್ಲಿ ಸುಮಾರು 30–35 ಕಪ್ ಕೂಡ ತಂದಿಟ್ಟರು. ಬಂದ ಹುಡುಗರು ಕೇವಲ ಹದಿನೈದು ಜನ, ಗುರುಗಳು ತಂದಿಟ್ಟ ಟ್ರೇಗಳಲ್ಲಿ ಕೆಲವು ಅತ್ಯಂತ ಬೆಲೆಬಾಳುವಂತಹವು, ಚೈನಾ ಪಿಂಗಾಣಿಗಳು, ಕೆಲವು ಸುಂದರ ಗಾಜಿನವು, ಕೆಲವು ಪ್ಲಾಸ್ಟಿಕ್ ಕಪ್ಪುಗಳು, ಇನ್ನು ಕೆಲವು ಏನೂ ಬೆಲೆಬಾಳದ ಗಾಜಿನವು ಮತ್ತು ಕೆಲವು ಸ್ಟೀಲಿನ ಲೋಟಗಳು.

"ನೀವೇ ಕಾಫೀ ಹಾಕಿಕೊಳ್ಳಿ. ಆಮೇಲೆ ಕುಳಿತು ಮಾತನಾಡೋಣ" ಎಂದರು ಗುರುಗಳು. ವಿದ್ಯಾರ್ಥಿಗಳು ಹೋಗಿ ಕಪ್ಪು ಆರಿಸಿಕೊಂಡು, ಕಾಫೀ ಹಾಕಿಕೊಂಡು ಬಂದರು.

©KTBS Not to be republished



ಎಲ್ಲರೂ ಕಾಫೀ ಕುಡಿಯುತ್ತಿರುವಾಗ ಗುರುಗಳು ಮಾತು ಎತ್ತಿದರು. "ನೀವು ಗಮನಿಸಿದ್ದೀರಾ? ನೀವೆಲ್ಲಾ ಎಂಥ ಕಪ್ಪು ಆರಿಸಿಕೊಂಡಿದ್ದೀರಿ? ನಾನೂ ನೋಡುತ್ತಿದ್ದೆ. ಮೊದಲು ಹೋದವನು ಅತ್ಯಂತ ಬೆಲೆಬಾಳುವ ಕಪ್ಪು ಆರಿಸಿಕೊಂಡ. ಅಂತೆಯೇ ಎಲ್ಲರೂ ಬೆಲೆಬಾಳುವ ಕಪ್ಪುಗಳನ್ನೇ ಆರಿಸಿಕೊಂಡು, ಸಾಧಾರಣವಾದ ಕಪ್ಪುಗಳನ್ನು ಅಲ್ಲಿಯೇ ಬಿಟ್ಟುಬಂದಿರಿ. ಉತ್ತಮವಾದದ್ದನ್ನೇ ಪಡೆಯಬೇಕು ಎನ್ನುವ ಆಸೆ ನಿಮ್ಮದು.  ಬಹುಶಃ ಅದೇ ನಿಮ್ಮ ತೊಂದರೆಗಳಿಗೂ ಕಾರಣ.

ನಿಮಗೆಲ್ಲ ಬೇಕಾಗಿದ್ದುದು ಕಾಫೀ, ಕಪ್ಪಲ್ಲ.  ಆದರೂ ಅತ್ಯುತ್ತಮವಾದ ಕಪ್ಪನ್ನೇ ಆರಿಸಿಕೊಂಡಿರಿ. ಜೀವನ ಎಂದರೆ ಕಾಫಿ ಇದ್ದಂತೆ. ಹಣ, ಅಂತಸ್ತು, ನಿಮ್ಮ ಅಧಿಕಾರ ಇವೆಲ್ಲ ಕಪ್ಪುಗಳಿದ್ದ ಹಾಗೆ. ಅವೆಲ್ಲ ಜೀವನವನ್ನು ಧರಿಸಲು ಬೇಕಾದ ಸಾಧನಗಳಷ್ಟೇ.  ನೀವು ಹಿಡಿದುಕೊಂಡ ಕಪ್ಪು, ಕಾಫಿಯ ರುಚಿಯನ್ನು ಬದಲಿಸಲಾರದು. ದುರ್ದೈವವೆಂದರೆ ನಾವು ಕಾಫಿಗಿಂತ ಕಪ್ಪಿಗೇ ಹೆಚ್ಚು ಮಹತ್ವ ಕೊಡುತ್ತೇವೆ.  ಮತ್ತೊಬ್ಬರ ಕಪ್ಪನ್ನು ನೋಡಿ ಅಸೂಯೆ ಪಡುತ್ತೇವೆ."

"ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಈ ಕಾಫಿ ಮಾತ್ರ, ಕಪ್ಪುಗಳನ್ನಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ, ಅಲಂಕಾರಗಳ ಬೆನ್ನತ್ತಿ ಓಡಿ ಓಡಿ ಜೀವನವನ್ನು ಮರೆಯಬೇಡಿ. ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದು ಸಿಕ್ಕಿರಲಿಕ್ಕಿಲ್ಲ. ಆದರೆ ಸಿಕ್ಕಿರುವುದನ್ನು ಹೇಗೆ ಚೆನ್ನಾಗಿ ಆಸ್ವಾದಿಸಬೇಕು ಎನ್ನುವುದು ಗೊತ್ತಿದೆ. ಕಪ್ಪುಗಳ ಚಿಂತೆ ಬೇಡ, ಕಾಫೀ ಆಸ್ವಾದಿಸಿ."

* * * *

©KTBS Not to be republished

## ಕೃತಿಕಾರರ ಪರಿಚಯ :



ಶಿಕ್ಷಣ ತಜ್ಞರಾದ **ಡಾ. ಗುರುರಾಜ ಕರ್ಜಗಿ**ಯವರು ೧೯೫೨ ರಲ್ಲಿ ಹಾವೇರಿ ಜಿಲ್ಲೆಯ ಕರ್ಜಗಿಯಲ್ಲಿ ಜನಿಸಿದರು. ಪ್ರಾಧ್ಯಾಪಕರಾದ ಇವರು ಇಪ್ಪತ್ತೆರಡಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ದೇಶವಿದೇಶದ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅಂತರ ರಾಷ್ಟ್ರೀಯ ಸೃಜನಶೀಲ ಅಧ್ಯಾಪನಾ ಕೇಂದ್ರದ (ಎ.ಸಿ.ಟಿ) ಸ್ಥಾಪಕ ನಿರ್ದೇಶಕರಾಗಿ ಕೆಲಸಮಾಡಿದ್ದಾರೆ. ಪ್ರಜಾವಾಣಿ ದಿನಪತ್ರಿಕೆಯಲ್ಲಿನ ಇವರ 'ಕರುಣಾಳು ಬಾ ಬೆಳಕೆ' ಅಂಕಣ ಬಹಳಷ್ಟು ಜನಪ್ರಿಯತೆ ಪಡೆದಿದೆ. ಪ್ರಸ್ತುತ ಲೇಖನವನ್ನು 'ಕರುಣಾಳು ಬಾ ಬೆಳಕೆ' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

## ಅಭ್ಯಾಸ

## I. ಪದಗಳ ಅರ್ಥ :

**ಅಸೂಯೆ** – ಹೊಟ್ಟೆಕಿಚ್ಚು
**ಆಸ್ವಾದಿಸು** – ರುಚಿ ನೋಡುವುದು; ಸವಿಯುವುದು.
**ಕೂಡ್ರಿಸಿ** – ಕುಳ್ಳಿರಿಸಿ
**ತಕರಾರು** – ಅಡ್ಡಿ; ಆಕ್ಷೇಪಣೆ
**ದುರ್ದೈವ** – ಕೆಟ್ಟ ಅದೃಷ್ಟ; ದೌರ್ಭಾಗ್ಯ.
**ನಿವೃತ್ತಿ** – ವೃತ್ತಿಯಿಂದ ಬಿಡುಗಡೆ
**ಮಾತು ಎತ್ತಿದರು** – ಮಾತನ್ನು ಆರಂಭಿಸಿದರು.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಹೆಡ್ ಮಾಸ್ತರರು ಸಂತೋಷಗೊಂಡುದು ಏಕೆ?
೨. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?
೩. ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು?
೪. ಗುರುಗಳು ಹೇಳಿದಂತೆ ಕಾಫೀ ಮತ್ತು ಕಾಫಿಯ ಕಪ್ಪು ಯಾವುದರ ಪ್ರತೀಕಗಳು?
೫. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು?
೬. ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ ಯಾವುದು?

©KTBS
Not to be republished

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?

೨. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು?

೩. ಹೆಡ್ ಮಾಸ್ತರರು ಮಕ್ಕಳಿಗೆ ಏನೆಂದು ಹೇಳಿ ಅಡುಗೆ ಮನೆಗೆ ಹೋದರು?

೪. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಗುರುಗಳು ಸುಖ ಜೀವನದ ಪಾಠವನ್ನು ವಿದ್ಯಾರ್ಥಿಗಳಿಗೆ ಹೇಗೆ ಮನವರಿಕೆ ಮಾಡಿಕೊಟ್ಟರು?

೨. ಸುಖಜೀವನ ವ್ಯಕ್ತಿಯ ಒಳಗಿದೆಯೇ ಅಥವಾ ಹೊರಗಿದೆಯೇ? ಚರ್ಚಿಸಿ.

**ಈ) ಸಂದರ್ಭದೊಂದಿಗೆ ವಿವರಿಸಿರಿ.**

೧. ನಿಜವಾದ ಶಿಕ್ಷಕನಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರಿಯರಾಗುತ್ತಾರೆ.

೨. ನನ್ನ ಕಾಫೀ ಕೂಡ ತುಂಬ ಚೆನ್ನಾಗಿರುತ್ತದೆ.

೩. ನೀವೇ ಕಾಫೀ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ.

೪. ನೀವು ಗಮನಿಸಿದ್ದೀರಾ? ನೀವೆಲ್ಲ ಎಂಥ ಕಪ್ಪು ಆರಿಸಿಕೊಂಡಿದ್ದೀರಿ?

೫. ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ.

**ಉ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಲ್ಲಿ ಸರಿಯಾದುದನ್ನು ಆಯ್ದು ಬರೆಯಿರಿ.**

೧. ಹೆಡ್ ಮಾಸ್ತರರು ತಾವೇ ಕಾಫೀ ಮಾಡಿದುದಕ್ಕೆ ಕಾರಣ ______________

ಅ) ಹೆಂಡತಿ ಊರಿಗೆ ಹೋಗಿದ್ದರಿಂದ ಆ) ಹೆಂಡತಿ ತೀರಿ ಹೋಗಿದ್ದರಿಂದ

ಇ) ತಮ್ಮ ಕಾಫೀ ರುಚಿ ಇರುತ್ತದೆಂದು ಈ) ಕಾಫೀ ಮಾಡಲು ಬರುತ್ತದೆಂದು ತೋರಿಸಲು

೨. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಮನೆಗೆ ಬಂದದ್ದು ______________

ಅ) ಕಾಫೀ ಕುಡಿಯಲು ಆ) ಪಾಠ ಹೇಳಿಸಿಕೊಳ್ಳಲು

ಇ) ಕಷ್ಟ ಹೇಳಿಕೊಳ್ಳಲು ಈ) ಆರೋಗ್ಯ ವಿಚಾರಿಸಲು

೩. ಗುರುಗಳು ಹೇಳಿದಂತೆ ಕಾಫೀ ______________ ಇದ್ದಂತೆ

ಅ) ಜೀವನ ಆ) ಹಣ

ಇ) ಅಂತಸ್ತು ಈ) ಅಧಿಕಾರ





©KTBS Not to be republished

## III. ಭಾಷಾಭ್ಯಾಸ :

**ಅ) ಕೆಳಗಿನ ಸಂಧಿ ಪದಗಳನ್ನು ಬಿಡಿಸಿ, ಸಂಧಿ ಹೆಸರು ಬರೆಯಿರಿ.**

ವಿದ್ಯಾರ್ಥಿ, ಅತ್ಯಂತ, ಒಂದೆರಡು, ಅತ್ಯುತ್ತಮ, ಮತ್ತೊಬ್ಬ.

**ಆ) ಇವುಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.**

ಹಳೆಯ, ಆಸೆ, ಸಂತೋಷ, ರುಚಿ, ಸಾಧಾರಣ.

**ಇ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ವರ್ಷ, ಸಂತೋಷ, ಶಾಲೆ, ಆಸೆ.

**ಈ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

ಸಂತೋಷ, ದುರ್ದೈವ, ಆಸ್ವಾದಿಸು, ಅಧಿಕಾರ.

**ಉ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ಕಪ್ : ಲೋಟ :: ಹೆಡ್ ಮಾಸ್ತರ್ : ________________

೨. ಸರಮಾಲೆ : ಜೋಡುನುಡಿ :: ಬಿಸಿ ಬಿಸಿ : ________________

೩. ಮಕ್ಕಳು : ನಾಮಪದ :: ಹೋದರು : ________________

೪. ಮತ್ತೊಬ್ಬ : ಲೋಪಸಂಧಿ :: ಅತ್ಯಂತ : ________________

೫. ಜೀವನದಲ್ಲಿ : ಸಪ್ತಮೀ ವಿಭಕ್ತಿ :: ರುಚಿಯನ್ನು : ________________

## IV. ಸೈದ್ಧಾಂತಿಕ ವ್ಯಾಕರಣ :

### ಸಮಾಸಗಳು :

'ಅರಸನ ಮನೆಯಲ್ಲಿ ಸಂಭ್ರಮ ತುಂಬಿದೆ'. ಈ ವಾಕ್ಯದಲ್ಲಿ ಕೆಳಗೆ ಗೆರೆ ಹಾಕಿರುವ 'ಅರಸ' ಮತ್ತು 'ಮನೆಯಲ್ಲಿ' ಎಂಬ ಪದಗಳ ಅರ್ಥಗಳು ಬೇರೆಬೇರೆ. ಆದರೆ ಅದೇ ಅರ್ಥ ಬರುವಂತೆ ಅವೆರಡೂ ಪದಗಳನ್ನು ಸೇರಿಸಿ 'ಅರಮನೆಯಲ್ಲಿ' ಎಂದು ಒಂದೇ ಪದ ಮಾಡಿ ಹೇಳಬಹುದು.

'ಹಿರಿದಾದ ತೊರೆಯು ಹರಿಯುತ್ತಿತ್ತು' ಈ ವಾಕ್ಯದಲ್ಲೂ 'ಹಿರಿದಾದ' 'ತೊರೆಯು' ಎಂಬೆರಡು ಪದಗಳನ್ನು ಕೂಡಿಸಿ 'ಹೆದ್ದೊರೆ' ಹರಿಯುತ್ತಿತ್ತು ಎನ್ನಬಹುದು.

ಮೇಲಿನ ಉದಾಹರಣೆಗಳಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಸೇರಿ ಒಂದು



ನೀನು ಭವಿಷ್ಯದ ಬಗ್ಗೆ ಯೋಚಿಸದಿದ್ದರೆ ನಿನಗೆ ಭವಿಷ್ಯವೇ ಇರಲಾರದು – ಗಾಲ್ಸ್‌ವರ್ದಿ

©KTBS Not to be republished

ಪದವಾಗಿರುವುದನ್ನು ಗಮನಿಸಬಹುದು. ಹೀಗೆ ಹಲವು ಪದಗಳನ್ನು ಸೇರಿಸಿ ಒಂದು ಪದ ಮಾಡುವುದರಿಂದ ಅರ್ಥವು ಕೆಡುವುದಿಲ್ಲ. ಜೊತೆಗೆ ಬರೆಯುವ ಶ್ರಮ ಮತ್ತು ಉಚ್ಚಾರಣೆ ಮಾಡುವ ಸಮಯವೂ ಸ್ವಲ್ಪ ಉಳಿತಾಯವಾಗುತ್ತದೆ. ಇದನ್ನೇ ವ್ಯಾಕರಣದಲ್ಲಿ 'ಸಮಾಸ' ಎಂದು ಕರೆಯುತ್ತೇವೆ. ಇದರ ಸೂತ್ರವನ್ನು ಈ ರೀತಿ ಹೇಳಬಹುದು.

**'ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮಪದಗಳು ಅರ್ಥಕ್ಕನುಸಾರವಾಗಿ ಸೇರಿ ತಮ್ಮಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಕಳೆದುಕೊಂಡು ಒಂದು ಪದವಾಗುವುದನ್ನು 'ಸಮಾಸ' ಎಂದು ಕರೆಯಲಾಗುತ್ತದೆ.'**

ಹೀಗೆ ಸಮಾಸ ಮಾಡುವುದಕ್ಕೆ ಕೆಲವು ನಿಬಂಧನೆಗಳಿವೆ. ಮುಖ್ಯವಾಗಿ ಕನ್ನಡ + ಕನ್ನಡ, ಕನ್ನಡ + ತದ್ಭವ, ತದ್ಭವ + ತದ್ಭವ, ಸಂಸ್ಕೃತ + ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಬಹುದು. ಆದರೆ ಕನ್ನಡ + ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಬಾರದು. ಆದರೂ ನಮ್ಮ ಪೂರ್ವದ ಕವಿಗಳು ಕನ್ನಡ ಮತ್ತು ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಿದ್ದಾರೆ. ಈ ರೀತಿಯ ದೋಷಯುಕ್ತ ಸಮಾಸಗಳನ್ನು 'ಅರಿ ಸಮಾಸ' ಎಂದು ಕರೆಯಲಾಗಿದೆ. ಆದರೆ ಪೂರ್ವದ ಕವಿಗಳು ಮಾಡಿರುವ ಸಮಾಸಗಳಲ್ಲಿ, ಬಿರುದಾವಳಿಗಳಲ್ಲಿ, ಗಮಕ ಹಾಗೂ ಕ್ರಿಯಾ ಸಮಾಸಗಳಲ್ಲಿ ಅರಿ ಸಮಾಸದ ದೋಷವನ್ನು ಪರಿಗಣಿಸುವಂತಿಲ್ಲ.

**ಕನ್ನಡ ಪದದೊಡನೆ ಸಂಸ್ಕೃತ ಪದವನ್ನು ಸೇರಿಸಿ ಸಮಾಸ ಮಾಡಬಾರದು. ಹಾಗೆ ಸೇರಿಸಿ ಸಮಾಸ ಮಾಡಿದರೆ ಅದನ್ನು 'ಅರಿ ಸಮಾಸ' ಎನ್ನುವರು.**

| ಉದಾ : | ಪೂರ್ವಪದ | + | ಉತ್ತರಪದ | = ಸಮಾಸಪದ |
|---|---|---|---|---|
| | ಮಳೆಯ | + | ಕಾಲ | = ಮಳೆಗಾಲ |
| | ದಳದ | + | ಪತಿ | = ದಳಪತಿ |
| | ಮಹಾ | + | ಕಾಳಿ | = ಮಾಕಾಳಿ |

(ಈ ಮೇಲಿನ ಉದಾಹರಣೆಗಳಲ್ಲಿ ಕಾಲ, ಪತಿ, ಮಹಾ ಇವು ಸಂಸ್ಕೃತ ಪದಗಳು. ಮಳೆಯ, ದಳದ, ಕಾಳಿ ಇವು ಕನ್ನಡದ ಪದಗಳು. ಇವುಗಳನ್ನು ಕೂಡಿಸಿ ಸಮಾಸ ಮಾಡಬಾರದು. ಆದರೂ ಪೂರ್ವದ ಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿದ್ದಾರೆ.)

## ಸಮಾಸದ ವಿಧಗಳು :

೧. **ತತ್ಪುರುಷ ಸಮಾಸ :** ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರಪದದ ಅರ್ಥವು ಪ್ರಧಾನವಾಗಿ ಉಳಿಯುವ ಸಮಾಸಕ್ಕೆ 'ತತ್ಪುರುಷ ಸಮಾಸ' ಎನ್ನುವರು.

| ಉದಾ : | ಪೂರ್ವಪದ | + | ಉತ್ತರಪದ | = ಸಮಾಸಪದ |
|---|---|---|---|---|
| | ಮರದ | + | ಕಾಲು | = ಮರಗಾಲು |
| | ತೇರಿಗೆ | + | ಮರ | = ತೇರುಮರ |
| | ಕವಿಗಳಿಂದ | + | ವಂದಿತ | = ಕವಿವಂದಿತ |

©KTBS Not to be republished

೨. **ಕರ್ಮಧಾರಯ ಸಮಾಸ :** ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು, ವಿಶೇಷಣ ವಿಶೇಷ್ಯ ಸಂಬಂಧದಿಂದ ಕೂಡಿ ಆದ ಸಮಾಸಕ್ಕೆ 'ಕರ್ಮಧಾರಯ ಸಮಾಸ' ಎನ್ನುವರು.

| ಉದಾ : | ಪೂರ್ವಪದ | + | ಉತ್ತರಪದ | = ಸಮಾಸಪದ |
|---|---|---|---|---|
| | ಹಿರಿದು | + | ಜೇನು | = ಹೆಜ್ಜೇನು |
| | ಹೊಸದು | + | ಕನ್ನಡ | = ಹೊಸಗನ್ನಡ |
| | ಶ್ವೇತವಾದ | + | ಛತ್ರ | = ಶ್ವೇತಛತ್ರ |
| | ದಿವ್ಯವಾದ | + | ಪ್ರಕಾಶ | = ದಿವ್ಯಪ್ರಕಾಶ |

೩. **ದ್ವಿಗು ಸಮಾಸ :** ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ 'ದ್ವಿಗು ಸಮಾಸ' ಎನಿಸುತ್ತದೆ.

| ಉದಾ : | ಪೂರ್ವಪದ | + | ಉತ್ತರಪದ | = ಸಮಾಸಪದ |
|---|---|---|---|---|
| | ಒಂದು | + | ಕಟ್ಟು | = ಒಗ್ಗಟ್ಟು |
| | ಎರಡು | + | ಮಡಿ | = ಇಮ್ಮಡಿ |
| | ಪಂಚಗಳಾದ | + | ಇಂದ್ರಿಯಗಳು | = ಪಂಚೇಂದ್ರಿಯಗಳು |
| | ಸಪ್ತಗಳಾದ | + | ಸ್ವರಗಳು | = ಸಪ್ತಸ್ವರಗಳು |

೪. **ಅಂಶಿ ಸಮಾಸ :** ಪೂರ್ವೋತ್ತರ ಪದಗಳು ಅಂಶ ಅಂಶಿ ಭಾವಸಂಬಂಧದಿಂದ ಕೂಡಿ, ಪೂರ್ವಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ 'ಅಂಶಿ ಸಮಾಸ' ಎನ್ನುವರು.

| ಉದಾ : | ಪೂರ್ವಪದ | + | ಉತ್ತರಪದ | = ಸಮಾಸಪದ |
|---|---|---|---|---|
| | ಕೈಯ | + | ಅಡಿ | = ಅಂಗೈ |
| | ತಲೆಯ | + | ಮುಂದು | = ಮುಂದಲೆ |
| | ಮೂಗಿನ | + | ತುದಿ | = ತುದಿಮೂಗು |

೫. **ದ್ವಂದ್ವ ಸಮಾಸ :** ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲ ಪದಗಳ ಅರ್ಥಗಳೂ ಪ್ರಧಾನವಾಗಿ ಉಳ್ಳ ಸಮಾಸಕ್ಕೆ 'ದ್ವಂದ್ವ ಸಮಾಸ' ಎಂದು ಹೆಸರು.

**ಉದಾ :** ಕೆರೆಯೂ + ಕಟ್ಟೆಯೂ + ಬಾವಿಯೂ = ಕೆರೆಕಟ್ಟೆಬಾವಿಗಳು
ಗಿಡವೂ + ಮರವೂ + ಬಳ್ಳಿಯೂ + ಪೊದೆಯೂ = ಗಿಡಮರಬಳ್ಳಿಪೊದೆಗಳು
ಸೂರ್ಯನೂ + ಚಂದ್ರನೂ + ನಕ್ಷತ್ರವೂ = ಸೂರ್ಯಚಂದ್ರನಕ್ಷತ್ರಗಳು.

©KTBS Not to be republished



**ಮೂರ್ಖನ ಹೃದಯ ಬಾಯಲ್ಲಿದ್ದರೆ ಜಾಣನ ಬಾಯಿ ಹೃದಯದಲ್ಲಿರುತ್ತದೆ – ಬೆಂಜಮಿನ್ ಫ್ರಾಂಕ್ಲಿನ್**

೬. **ಬಹುವ್ರೀಹಿ ಸಮಾಸ :** ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ ಅರ್ಥವು ಪ್ರಧಾನವಾಗಿ ಉಳಿಯುವ ಸಮಾಸಕ್ಕೆ 'ಬಹುವ್ರೀಹಿ ಸಮಾಸ' ಎನ್ನುವರು.

| ಉದಾ : | ಪೂರ್ವಪದ | + | ಉತ್ತರಪದ | = ಸಮಾಸಪದ |
|---|---|---|---|---|
| | ಮೂರು | + | ಕಣ್ಣುಳ್ಳವ | = ಮುಕ್ಕಣ್ಣ |
| | ಕೆಂಪು | + | ಕಣ್ಣುಳ್ಳವ | = ಕೆಂಗಣ್ಣ |
| | ಡೊಂಕು | + | ಕಾಲುಳ್ಳವ | = ಡೊಂಕುಗಾಲ |

೭. **ಕ್ರಿಯಾ ಸಮಾಸ :** ಪೂರ್ವಪದವು ಸಾಮಾನ್ಯವಾಗಿ ದ್ವಿತೀಯಾ ವಿಭಕ್ತಿಯಿಂದ ಕೂಡಿದ್ದು, ಉತ್ತರದಲ್ಲಿರುವ ಕ್ರಿಯಾಪದದೊಡನೆ ಸೇರಿ ಆಗುವ ಸಮಾಸವನ್ನು 'ಕ್ರಿಯಾ ಸಮಾಸ' ಎನ್ನುವರು.

| ಉದಾ : | ಪೂರ್ವಪದ | + | ಉತ್ತರಪದ | = ಸಮಾಸಪದ |
|---|---|---|---|---|
| | ಕೈಯನ್ನು | + | ಮುಟ್ಟಿ | = ಕೈಮುಟ್ಟಿ |
| | ಕಣ್ಣನ್ನು | + | ತೆರೆದನು | = ಕಣ್ಣು ತೆರೆದನು |
| | ಕಾವ್ಯವನ್ನು | + | ಬರೆದು | = ಕಾವ್ಯಬರೆದು |

೮. **ಗಮಕ ಸಮಾಸ :** ಪೂರ್ವಪದವು ಸರ್ವನಾಮ ಅಥವಾ ಕೃದಂತಗಳಲ್ಲಿ ಒಂದಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವನ್ನು 'ಗಮಕ ಸಮಾಸ' ಎನ್ನುವರು.

| ಉದಾ : | ಪೂರ್ವಪದ | + | ಉತ್ತರಪದ | = ಸಮಾಸಪದ |
|---|---|---|---|---|
| | ಅವನು | + | ಹುಡುಗ | = ಆ ಹುಡುಗ |
| | ಅದು | + | ಕಲ್ಲು | = ಆ ಕಲ್ಲು |
| | ಮಾಡಿದುದು | + | ಅಡಿಗೆ | = ಮಾಡಿದಡಿಗೆ |

## V. ಚಟುವಟಿಕೆಗಳು :

೧. ಪ್ರಸ್ತುತ ಪಾಠದ ಕಥಾ ಸನ್ನಿವೇಶವನ್ನು ರೂಪಕವನ್ನಾಗಿ ಪರಿವರ್ತಿಸಿ, ಅಭಿನಯಿಸಿ.
೨. 'ನಾನು ಮೆಚ್ಚಿದ ಶಿಕ್ಷಕ' ಈ ಬಗ್ಗೆ ಒಂದು ಪ್ರಬಂಧ ಬರೆದು ತರಗತಿಯಲ್ಲಿ ಓದಿರಿ. ಅದನ್ನು ಶಾಲಾಭಿತ್ತಿ ಪತ್ರಿಕೆಯಲ್ಲೂ ಪ್ರದರ್ಶಿಸಿ.
೩. ಉತ್ತಮ ಜೀವನದ ಗುಣಗಳನ್ನು ಪಟ್ಟಿ ಮಾಡಿ, ಅವುಗಳನ್ನು ಅನುಸರಿಸುವುದನ್ನು ಕಲಿಯಿರಿ.



©KTBS Not to be republished

**ಗೆಳೆತನ ಬೆಳೆಸಲು ಸಾವಿರಾರು ಮಾತು ಬೇಕು, ಶತ್ರುವನ್ನು ಸೃಷ್ಟಿಸಲು ಒಂದೇ ಮಾತು ಸಾಕು – ಗಾಂಧೀಜಿ**

# ೬. ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ

– ಬಸವಪ್ರಭು ಪಾಟೀಲ ಬೆಟ್ಟದೂರು
ಮತ್ತು ಕೆ. ಸಿದ್ಧಯ್ಯಸ್ವಾಮಿ.

**ಪಾಠ ಪ್ರವೇಶ :** 'ದೇಶ ಸುತ್ತು ಕೋಶ ಓದು' ಈ ಗಾದೆ ಜ್ಞಾನ ಸಂಪಾದನೆಯ ಎರಡು ಮಾರ್ಗಗಳನ್ನು ಸೂಚಿಸುತ್ತದೆ. ದೇಶ ಸುತ್ತಲು ಅವಕಾಶ ಇರುವವರು ಪ್ರವಾಸದ ರಸಾನುಭವವನ್ನು ನೇರವಾಗಿ ಪಡೆಯುತ್ತಾರೆ. ಈ ಅವಕಾಶದಿಂದ ವಂಚಿತರಾದವರು ಪ್ರವಾಸ ಸಾಹಿತ್ಯವನ್ನು ಓದುವುದರ ಮೂಲಕ ರಸಾನಂದವನ್ನು ಪರೋಕ್ಷವಾಗಿ ಪಡೆಯುತ್ತಾರೆ. ದೇಶ ಸುತ್ತುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಅದು ವೆಚ್ಚದಾಯಕ. ಆದರೆ ಕೋಶ ಓದುವುದು ಎಲ್ಲರಿಗೂ ಸಾಧ್ಯವಾಗುವ ಸುಲಭದ ಮಾರ್ಗ. ಕೆಲವರು ದೇಶ ವಿದೇಶಗಳನ್ನು ಸಂದರ್ಶಿಸಿ ಅಲ್ಲಿಯ ಇತಿಹಾಸ, ಕಲೆ, ಸಾಹಿತ್ಯ, ವಿಜ್ಞಾನ ಹಾಗೂ ಸಂಸ್ಕೃತಿಗಳನ್ನು ಪರಿಚಯಿಸುವುದರೊಂದಿಗೆ ಪ್ರವಾಸ ಕಾಲದಲ್ಲಿ ತಾವು ಕಂಡುಂಡ ಅನುಭವಗಳನ್ನು, ನೋಡಿದ ದೃಶ್ಯಗಳನ್ನು ಮನೋಜ್ಞವಾಗಿ ವರ್ಣಿಸುತ್ತಾರೆ. ಈ ರೀತಿಯ ಬರವಣಿಗೆಯನ್ನು ಪ್ರವಾಸ ಸಾಹಿತ್ಯವೆಂದು ಕರೆಯುತ್ತೇವೆ. ಪ್ರವಾಸ ಸಾಹಿತ್ಯ ಒಂದು ಸೃಜನಶೀಲ ಕಲಾಭಿವ್ಯಕ್ತಿಯಾಗಿ ಕನ್ನಡದಲ್ಲಿ ೨೦ ನೇ ಶತಮಾನದಿಂದ ಕಾಣಿಸಿಕೊಂಡಿತು. ಸೂರಿ ವೆಂಕಟರಮಣಶಾಸ್ತ್ರೀ ಕರ್ಕಿ ಅವರ 'ದಕ್ಷಿಣ ಯಾತ್ರಾ ಚರಿತ್ರೆ' ಕನ್ನಡದ ಮೊದಲ ಪ್ರವಾಸ ಕಥನವಾಗಿದೆ.

ಪ್ರಸ್ತುತ ಪ್ರವಾಸ ಕಥನದಲ್ಲಿ ಲೇಖಕರು ಯೂರೋಪಿನಲ್ಲಿ ಕಂಡುಂಡ ಅನುಭವಗಳನ್ನು ಸರಳ ಶೈಲಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಲೇಖನವನ್ನು ಓದುತ್ತಿದ್ದಂತೆ ನಮಗೂ ಲಂಡನ್ನಿನಲ್ಲಿ ಸಂಚರಿಸಿದ ಅನುಭವವುಂಟಾಗುತ್ತದೆ.

©KTBS Not to be republished

ಈ ಮ್ಯೂಸಿಯಂ ನೋಡಲು ಒಂದು ತಾಸು ಸಮಯವೆಂದು ನಮ್ಮ ಗೈಡ್ ಹೇಳಿದರು. ಮೇಡಂ ಟುಸ್ಸೋಡ್ ಈ ವ್ಯಾಕ್ಸ್ ಗೊಂಬೆಗಳನ್ನು ಮೊದಲು ಮಾಡಿದವರು. ಈ ಮೇಣದ ಗೊಂಬೆಗಳು ತದ್ರೂಪ ಒಬ್ಬ ವ್ಯಕ್ತಿಯನ್ನೇ ಹೋಲುತ್ತವೆ. ಯಾವ ವ್ಯಕ್ತಿಯನ್ನು ಮೇಣದಲ್ಲಿ ಮಾಡಿರುತ್ತಾರೋ – ಅವರನ್ನು. ಶಾರೂಖ್ ಖಾನ್, ಅಮೀರ್ ಖಾನ್, ಅಮಿತಾಬಚ್ಚನ್, ಮರ್ಲಿನ್ ಮನ್ರೋ, ಟೆನಿಸ್ ತಾರೆ ಬೆಕರ್, ಬೋರ್ಗ್ ಹೀಗೆ ಪ್ರಸಿದ್ಧರ ವ್ಯಾಕ್ಸ್ ಗೊಂಬೆ ಮಾಡಿದ್ದಾರೆ. ಆ ಮೂರ್ತಿಗಳ ಪಕ್ಕದಲ್ಲಿ ನಿಂತು ನೀವು ಫೋಟೋ ತೆಗೆಸಿಕೊಂಡರೆ ನಿಜವಾದ ವ್ಯಕ್ತಿಯೊಂದಿಗೆ ಇದ್ದೇವೇನೋ ಅನಿಸುತ್ತದೆ. ಈ ಸಹಜತೆಯೇ ಆ ಮೇಣದ ಬೊಂಬೆಗಳ ವೈಶಿಷ್ಟ್ಯ.

ಇದೇ ಮ್ಯೂಸಿಯಂನಲ್ಲಿ ಛೇಂಬರ್ ಆಫ್ ಹಾರರ್ಸ್ ಇದೆ. ಅಲ್ಲಿ ಚೀರುವ, ಭಯಾನಕವಾಗಿ ಕಿರುಚುವ (ವಿಪರೀತ ನೋವಾದಾಗ) ಶಬ್ದ ಕೇಳಿಬರುತ್ತದೆ. ಅದು ರಾಜರು ತಮ್ಮ ವಿರೋಧಿಗಳನ್ನು ಕೊಲ್ಲಿಸುತ್ತಿದ್ದ ಸಮಯದಲ್ಲಿ ಅವರು ಹೊರಡಿಸುತ್ತಿದ್ದ ಚೀತ್ಕಾರ.



"ನಾನು ಮತ್ತು ಸತೀಶ ಒಂದು ಹಾಲಿನೊಳಗಿಂದ ಹೋದಾಗ ಅಲ್ಲಿ ನಮ್ಮ ಮೇಲೆ ಆಕ್ರಮಣ ಮಾಡಲು ಕತ್ತಿಹಿಡಿದು ಒಬ್ಬ ಬಂದ. ಒಬ್ಬ ಕತ್ತು ಹಿಚುಕಲು ಬಂದವನಂತೆ, ವಿಕಾರವಾಗಿ ಕಿರುಚುತ್ತಾ ಹೊಟ್ಟೆಗೆ ಡ್ಯಾಗರ್ ತಿವಿಯಲು ಬಂದಂತೆ ಮಾಡಿದಾಗ ನಾವು ಅಂಜಿಹೋದೆವು. ಆದರೆ ಅದು ಕ್ಷಣ ಮಾತ್ರ – ನಮಗೆ ಅವರು ಅಪಾಯ ಮಾಡಲಿಲ್ಲ. ಅದು ಒಂದು ರೀತಿಯ ಹಿಂದಿನ ಕಾಲದ ಕ್ರೂರಿಗಳ ನಡವಳಿಕೆ ತೋರಿಸುವ ರೀತಿಯಾಗಿತ್ತು" ಎಂದು ಎಸ್.ಜೆ.ಎಂ. ಕಾಲೇಜಿನ ಉಪನ್ಯಾಸಕರಾದ ಇಂಜಿನಿಯರ್ ರಮೇಶ್ ನಮಗೆ ಹೇಳಿದರು. ಅಲ್ಲದೆ "ಅಲ್ಲಿನ ಒಳ ಥೇಟರ್‌ನಲ್ಲಿ ೩ಡಿ ಕನ್ನಡಕ ಹಾಕಿಕೊಂಡು ತಾರಾಲಯ (Planetorium) ನೋಡಿದೆವು. ತುಂಬಾ ಹತ್ತಿರದಿಂದ ನಮಗೆ ನಕ್ಷತ್ರಗಳು ಕಂಡವು ಎಂದು" ಹೇಳಿದರು. ನಮಗೆ ಅದು ನೋಡಲಾಗಲಿಲ್ಲ. ವ್ಯಾಕ್ಸ್ ಪ್ರತಿಮೆ ನೋಡಿ ಅಲ್ಲಿನ ಗದ್ದಲ ನೋಡಿ ನಾವು ನಾಲ್ಕೈದು ಜನ ಸಾಕಪ್ಪಾ ಎಂದು ಹೊರಗೆ ಬಂದಿದ್ದೆವು. ಅಲ್ಲಿಂದ ಊಟಕ್ಕೆ ಬಸ್ಸಿನಲ್ಲಿ ಹೋಗುವಾಗ ನಮ್ಮ ಗೈಡ್ ೧೬೬೬ ರಲ್ಲಿ ಲಂಡನ್‌ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿ ೩ ದಿನ ಲಂಡನ್ ಹೊತ್ತಿ ಉರಿಯಿತಂತೆ. ೧೩೦೦೦ ಮನೆಗಳು, ೮೦ ಚರ್ಚ್‌ಗಳು ಸುಟ್ಟುಹೋದವಂತೆ. ಇದರ ನೆನಪಿಗಾಗಿ ೨೦೦ ಅಡಿ ಎತ್ತರದ ಸ್ತಂಭ ನಿಲ್ಲಿಸಿದ್ದಾರಂತೆ. ಅದಕ್ಕಿಂತ ಒಂದೆರಡು ವರುಷದ ಹಿಂದೆ ಪ್ಲೇಗ್‌ಗೆ ಲಂಡನ್ನಿನಲ್ಲಿ ಹನ್ನೆರಡು – ಹದಿಮೂರು ಸಾವಿರ ಜನ ಸತ್ತು ಹೋದರಂತೆ ಎಂದು ತಿಳಿಸಿದ. ಊಟ ಮಾಡಿ ನಾವು ಟವರ್ ಬ್ರಿಜ್ ನೋಡಲು ಹೊರಟೆವು. ದಾರಿಯಲ್ಲಿ ಬ್ರಿಟಿಷ್ ಪ್ರಧಾನಿ ಇರುವ ಮನೆ ೧೦ ಡೌನಿಂಗ್ ಸ್ಟ್ರೀಟನ್ನು ನೋಡಿದೆವು. ಆ ದಾರಿಯಲ್ಲಿ ಎಡ–ಬಲಕ್ಕೆ ಸಚಿವಾಲಯಗಳಿವೆ.

©KTBS Not to be republished

ಲಂಡನ್ನಿನಲ್ಲಿ ಕೇಂಬ್ರಿಜ್ ಹಾಗೂ ಆಕ್ಸ್‌ಫರ್ಡ್ ಪ್ರಸಿದ್ಧ ವಿಶ್ವವಿದ್ಯಾಲಯಗಳಿವೆ. ಅವು ನಮಗೆ ದೂರ ಇದ್ದವು. ನಮ್ಮ ಕೋಚ್ ಲಂಡನ್ ವಿಶ್ವವಿದ್ಯಾಲಯದ ಮುಂದಿನಿಂದ ಹೋದಾಗ ಅಲ್ಲಿ ಕುಳಿತಂಥ ಗಾಂಧಿ ಪ್ರತಿಮೆ ನೋಡಿದೆವು. ಅದು ಲಂಡನ್ ವಿಶ್ವವಿದ್ಯಾಲಯ. ಇಲ್ಲಿ ಗಾಂಧೀಜಿ ಓದಿದ್ದರಂತೆ. ತುಂಬಾ ಸಂತಸವಾಯಿತು.

ಟವರ್ ಬ್ರಿಜ್ ನೋಡಲು ಹೋಗುವಾಗ ಜನರು ಆಫೀಸ್‌ನಿಂದ ಹೊರಬರುತ್ತಿದ್ದರು. ರಸ್ತೆಗಳು ಜನರಿಂದ ತುಂಬಿ ಹೋಗಿದ್ದವು, ದಿನಾಲು ಲಂಡನ್ನಿನಲ್ಲಿ ಕೆಲಸ ಮಾಡಲು ಹೊರಗಿನಿಂದ ೩ ಲಕ್ಷ ಜನ ಬರುತ್ತಾರಂತೆ. ಲಂಡನ್ ಬದುಕಲು ತುಂಬಾ ದುಬಾರಿ ಊರು. ಹೀಗಾಗಿ ನೌಕರದಾರರು ೫೦–೬೦ ಕಿ.ಮೀ. ದೂರದ ಸಬರ್ಬ್‌ಗಳಿಂದ ಬರುತ್ತಾರೆ. ಇವರೆಲ್ಲ ಬಸ್ಸೋ, ರೈಲೋ ಹಿಡಿಯಲು ತರಾತುರಿಯಿಂದ ಹೊರಟಿದ್ದರು.

ದಾರಿಯಲ್ಲಿ ಶಾರ್ದ ಎಂಬ ಯುರೋಪಿನಲ್ಲಿಯೇ ಎತ್ತರದ (೩೫೦ ಮೀ.) ಕಟ್ಟಡ ನೋಡಿದೆವು. ಇದು ವಾಣಿಜ್ಯ ಸಮುಚ್ಚಯ, ಸಿಂಪೋಸಿಯಾ ಚರ್ಚ್ ಕೂಡಾ, ಸುಂದರವಾಗಿ ಭವ್ಯವಾಗಿ ಇತ್ತು.

ಲಂಡನ್‌ನಲ್ಲಿ ಹರಿಯುವ ಪ್ರಸಿದ್ಧವಾದ ನದಿ ಥೇಮ್ಸ್. ಥೇಮ್ಸ್ ನದಿಯ ದಕ್ಷಿಣಕ್ಕೆ ಉದ್ಯಮಗಳು, ಫ್ಯಾಕ್ಟರಿಗಳು ಹೆಚ್ಚಾಗಿ ರಾಜಕಾರಣಿಗಳು ಇರುತ್ತಾರಂತೆ. ಉತ್ತರಕ್ಕೆ ವ್ಯಾಪಾರಿಗಳು, ಕಡಿಮೆ ಆದಾಯ ಹೊಂದಿದವರು ವಾಸಿಸುತ್ತಾರೆ. ಥೇಮ್ಸ್ ನದಿ ದಂಡೆ ಬದಿಯಲ್ಲಿ ವಾಸಿಸುವವರು ಶ್ರೀಮಂತರೇ – ನಮ್ಮ ಮುಂಬಯಿಯ ಸಮುದ್ರ ದಂಡೆಗುಂಟ ಇರುವ ಮೆರೀನ್ ಡ್ರೈವ್‌ನಂತೆ.

ಥೇಮ್ಸ್ ನದಿಯ ಮೇಲೆ ೧೩ ಬ್ರಿಜ್‌ಗಳಿವೆ. ಅದರಲ್ಲಿ ಟವರ್ ಬ್ರಿಜ್ ಪ್ರಮುಖವಾದುದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದೂವರೆ ಎರಡು ನಿಮಿಷದಲ್ಲಿ ಮೇಲಕ್ಕೆದ್ದು ಹಡಗುಗಳು ಹೋಗಲು ದಾರಿ ಮಾಡಿಕೊಡುತ್ತದೆ.

ಈ ಟವರ್ ಬ್ರಿಜ್‌ನಂತೆ ಈ ಥೇಮ್ಸ್ ನದಿಯ ಮೇಲೆ ವೆಸ್ಟ್‌ಮಿನಿಸ್ಟರ್ ಸೇತುವೆ, ವಾಟರ್ಲೂ ಸೇತುವೆ, ಲಂಡನ್ ಸೇತುವೆ ಪ್ರಸಿದ್ಧವಾಗಿವೆ. ಲಂಡನ್ ಬ್ರಿಜ್‌ಗೆ ಹತ್ತಿರದಲ್ಲೇ ಟವರ್ ಆಫ್ ಲಂಡನ್ ನೋಡಿದೆವು. ೩–೪ ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡದ ಮೇಲೆ ಟವರ್‌ಗಳಿವೆ. ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸಿದ ಜಾಗ. ರಾಜಮನೆತನಗಳಲ್ಲಿನ ವೈಷಮ್ಯ, ಅಸೂಯೆ, ಕೊಲೆ ಸುಲಿಗೆಗಳ ತಾಣವಿದು. ರಾಬರ್ಟ್ ಕ್ಲೈವ್ ೧೭೫೭ ರ ಪ್ಲಾಸಿ ಕದನದಲ್ಲಿ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳನ್ನು ಇಲ್ಲಿ ಇಡಲಾಗಿದೆಯಂತೆ. ಇದು ನಿಗೂಢ ಸ್ಥಳ.

ಐವರ್ ಬ್ರಿಜ್ ಮೇಲೆ ಹಾದು, ಟವರ್ ಆಫ್ ಲಂಡನ್‌ನ್ನು ಎಡಕ್ಕೆ ಮಾಡಿಕೊಂಡು ನಾವು ಲಂಡನ್ ಐ ನೋಡಲು ಹೋದೆವು. ಅಲ್ಲಿಯೂ ಮತ್ತೊಂದು ಬ್ರಿಜ್ ಕ್ರಾಸ್ ಮಾಡಿದೆವು. ದೂರದಿಂದ ಪಾರ್ಲಿಮೆಂಟ್ ಹಾಗೂ ಬಿಗ್‌ಬೆನ್ ಗಡಿಯಾರ ಕಾಣುತ್ತಿದ್ದವು. ಬ್ರಿಟೀಷ್ ಪಾರ್ಲಿಮೆಂಟ್ ಹಳೇ ಯುರೋಪಿಯನ್ ಶೈಲಿಯ ಬೃಹತ್ ಕಟ್ಟಡ. ೩೨೦ ಅಡಿ ಗೋಪುರ ಹೊಂದಿದೆ. ನಾವು ಅದನ್ನು ದೂರದಿಂದ ನೋಡಿದೆವು. ಅದರ ಅನತಿ ದೂರದಲ್ಲಿಯೇ ಲಂಡನ್ ಐ.

೧೩ ಯೂರೋ (೯೬೨ ರೂ) ನೀಡಿ ಇಲ್ಲಿ ಪ್ರವೇಶ ಪಡೆಯಬೇಕು. ನಮ್ಮ ಜಾತ್ರೆಗಳಲ್ಲಿರುವಂತಹ ದೊಡ್ಡ ಚಕ್ರ– ಅದರಲ್ಲಿ ೧೨ ಗಾಜಿನ ದುಂಡಗಿನ ಕೋಶಗಳು, ೨೦–೨೫ ಜನ ಅದರಲ್ಲಿ ಸೇರಬಹುದು.

ನಮ್ಮ ಜಾತ್ರೆಗಳಲ್ಲಿನ ಚಕ್ರ ಅದರಲ್ಲಿರುವ ತೊಟ್ಟಿಲುಗಳು ಭರಭರ ಮೇಲೇರಿ ಕೆಳಕ್ಕೆ ಇಳಿಯುತ್ತವೆ. ಆದರೆ ಈ ಚಕ್ರ ಹಾಗಲ್ಲ. ನಾವು ನಿಂತಿರುವ ಒಂದು ಕೋಶ ಮೇಲೇರಿ, ಮೊದಲು ಇದ್ದ ಜಾಗಕ್ಕೆ ಬರಲು ಅರ್ಧ ತಾಸು ಹಿಡಿಯುತ್ತದೆ. ಹೀಗಾಗಿ ನಮಗೆ ಮೇಲೇರಿದ್ದು, ಕೆಳಗಿಳಿಯುವುದು ಅನಿಸುವುದೇ ಇಲ್ಲ. ಕೋಶ ಮೇಲೇರಿದಾಗ ಲಂಡನ್ ನಗರವನ್ನು ನಾಲ್ಕೂ ದಿಕ್ಕಿನಿಂದ ನೋಡಬಹುದು. ತುಂಬಾ ಸುಂದರವಾಗಿ ಕಾಣುತ್ತದೆ ಲಂಡನ್. ನಡುವೆ ಹರಿಯುತ್ತಿರುವ ಥೇಮ್ಸ್. ಲಂಡನ್‌ನ ಜನ ಸಂಖ್ಯೆ ೮೫ ಲಕ್ಷ – ೬೧೦ ಚದುರ ಮೈಲು ವಿಸ್ತೀರ್ಣದ ಲಂಡನ್ ಔದ್ಯಮಿಕ, ಬ್ಯಾಂಕಿಂಗ್ ನಗರ.

ಲಂಡನ್ ಮಧ್ಯದಿಂದ ಹೊರವಲಯದ ಕಡೆಗೆ ಬಂದಂತೆಲ್ಲ ಲಂಡನ್ ಮಲಗಿ ನಿದ್ರಿಸುತ್ತಿದೆಯೋ ಅನಿಸುತ್ತದೆ. ರಸ್ತೆ ಮೇಲೆ ಕಾರುಗಳು, ಅಪರೂಪಕ್ಕೊಮ್ಮೆ ಸೈಕಲ್ ಕಾಣುತ್ತವೆ. ಮನೆ ಮುಂದೆ ಜನಗಳೇ ಇಲ್ಲ! ಇಲ್ಲಿ ಕತ್ತಲಾಗುವುದು ರಾತ್ರಿ ೯ಕ್ಕೆ. (ಸೂರ್ಯ ಮುಳುಗದ ದೇಶವೆಂದು ಕರೆಸಿಕೊಳ್ಳುತ್ತಿದ್ದ ಬ್ರಿಟನ್ನಿನಲ್ಲಿ ಸೂರ್ಯನು ಮುಳುಗುತ್ತಾನೆ) ಬೆಳಕು ಮೂಡುವುದು ೪.೩೦ – ೫.೦೦ ಕ್ಕೆಲ್ಲ ಬೆಳ್ಳಂ ಬೆಳಗು.

ಲಂಡನ್ ಟ್ಯೂಬ್ ಟ್ರೇನಿಗೆ ಪ್ರಸಿದ್ಧ, ನಮಗೆ ಬರೀ ಕೋಚ್ ಪ್ರಯಾಣ. ಲಂಡನ್ ಟ್ಯೂಬ್ ಟ್ರೇನ್ ನೋಡಲಿಲ್ಲವಲ್ಲ ಎಂಬ ಕೊರಗಾಯಿತು.

ಏಳು ಏಳ್ದೇಳು ಪ್ಯಾರಿಸಿಗೆ ನಡೆ ಎಂದಿತು ನಮ್ಮ ಟೂರ್ ಇಟಿನರಿ (Itinery) ಇನ್ನೆಲ್ಲಿಯ ಟ್ಯೂಬ್ ಟ್ರೇನ್!

****

## ಕೃತಿಕಾರರ ಪರಿಚಯ :



**ಡಾ. ಬಸವಪ್ರಭು ಪಾಟೀಲ** ಇವರು ೧೯೪೭ ರಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬೆಟ್ಟದೂರು ಗ್ರಾಮದಲ್ಲಿ ಜನಿಸಿದರು. ವೃತ್ತಿಯಲ್ಲಿ ವೈದ್ಯರಾಗಿದ್ದು, ಶರಣಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿರುವ ಇವರು ಜನಾನುರಾಗಿಯಾಗಿದ್ದಾರೆ. ದೇಶವಿದೇಶಗಳನ್ನು ಸುತ್ತಿ ಲೋಕಾನುಭವವನ್ನು ಪಡೆದಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ– 'ಮಾತನಾಡಿ ಹೆಣಗಳೇ', 'ಇದೇನುಕತೆ', 'ಬೆಳಗು'(ನಾಟಕ), 'ಬಸವನಾಡಿನಿಂದ ಮಂಡೇಲ ನಾಡಿಗೆ' (ಪ್ರವಾಸ ಕಥನ) ಇತ್ಯಾದಿ.



**ಕೆ. ಸಿದ್ಧಯ್ಯಸ್ವಾಮಿ** ಇವರು ೧೯೪೫ ರಲ್ಲಿ ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ಜನಿಸಿದರು. ಇವರು ವೃತ್ತಿಯಲ್ಲಿ ಬ್ಯಾಂಕ್ ಮ್ಯಾನೇಜರ್ ಆಗಿದ್ದು ೨೦ ಕ್ಕೂ ಹೆಚ್ಚು ವಿದೇಶಗಳಿಗೆ ಭೇಟಿ ನೀಡಿದ್ದಾರೆ. ಇವರಿಬ್ಬರು ಸೇರಿ ಬರೆದ **'ಯೂರೋಪಿನಲ್ಲಿ....'** ಪ್ರವಾಸ ಸಾಹಿತ್ಯದಿಂದ ಪ್ರಸ್ತುತ ಲೇಖನವನ್ನು ಆರಿಸಲಾಗಿದೆ.

©KTBS Not to be republished

**ಟಿಪ್ಪಣಿ :**

**೧. ಪ್ಲಾಸಿ ಕದನ** : ಪಶ್ಚಿಮ ಬಂಗಾಳದ ಭಾಗೀರಥಿ ನದಿಯ ದಡದಲ್ಲಿರುವ ಪ್ಲಾಸಿ ಎಂಬಲ್ಲಿ ಬ್ರಿಟೀಷರ ರಾಬರ್ಟ್ ಕ್ಲೈವ್ ಹಾಗೂ ಬಂಗಾಳದ ನವಾಬ ಸಿರಾಜುದ್ದೌಲ್ ನಡುವೆ ೧೭೫೭ ರಲ್ಲಿ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಸಿರಾಜುದ್ದೌಲ್ ಸೋತು ಹತ್ಯೆಗೊಳಗಾದನು. ಭಾರತದಲ್ಲಿ ಬ್ರಿಟೀಷರು ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಪ್ಲಾಸಿ ಕದನ ಮಹತ್ವದ್ದಾಯಿತು.

**೨. ಪ್ಲೇಗ್** : ಇದು ಸಾಂಕ್ರಾಮಿಕ ರೋಗ. ೧೮ ನೇ ಶತಮಾನದ ಕೊನೆ ಹಾಗೂ ೧೯ ನೇ ಶತಮಾನದ ಆರಂಭದಲ್ಲಿ ಚಿಕಿತ್ಸೆ ಇಲ್ಲದೆ ಅಪಾರ ಸಂಖ್ಯೆಯ ಜನ ಬಲಿಯಾದರು. ಬೆಳಗ್ಗೆ ಚೆನ್ನಾಗಿ ಓಡಾಡಿಕೊಂಡಿದ್ದವರು ಸಂಜೆಯ ವೇಳೆಗೆ ಅಸ್ವಸ್ಥಗೊಂಡು ಸಾವನ್ನಪ್ಪುತ್ತಿದ್ದರು. ಇದು ಮೊದಲು ಇಲಿಗಳಿಗೆ ಬಂದು ನಂತರ ಜನರಿಗೆ ಹರಡುತ್ತಿತ್ತು.

## ಅಭ್ಯಾಸ

## I. ಪದಗಳ ಅರ್ಥ :

**ಕೋಚ್** – ರಾಜರಥ; ನಾಲ್ಕುಚಕ್ರದ ಬಂಡಿ.
**ಡ್ಯಾಗರ್** – ಕಠಾರಿ; ಚೂರಿ; ತಿವಿ.
**ತರಾತುರಿ** – ಅವಸರ
**ದುಬಾರಿ** – ಹೆಚ್ಚುಬೆಲೆ; ತುಟ್ಟಿ.
**ಪಾರ್ಲಿಮೆಂಟ್** – ಸಂಸತ್ತು
**ಮ್ಯೂಸಿಯಂ** – ವಸ್ತುಸಂಗ್ರಹಾಲಯ.
**ಸಮುಚ್ಛಯ** – ಗುಂಪು
**ಹಾರರ್** – ಭಯ; ನಡುಕ.
**ಗೈಡ್** – ಮಾರ್ಗದರ್ಶಿ
**ತದ್ರೂಪ** – ಅದೇ ತರಹದ
**ತಾಸು** – ಗಂಟೆ
**ನಿಗೂಢ** – ರಹಸ್ಯ
**ಬ್ರಿಜ್** – ಸೇತುವೆ
**ವ್ಯಾಕ್ಸ್** – ಮೇಣ
**ಸಬರ್ಬ್** – ಉಪನಗರ
**Planetorium** - ತಾರಾಲಯ; ಸೌರವ್ಯೂಹದ ಮಾದರಿ ಕೇಂದ್ರ,

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

೧. ಲಂಡನ್ನಿನಲ್ಲಿ ಹರಿಯುವ ಪ್ರಸಿದ್ಧ ನದಿ ____________

೨. ಪ್ಲಾಸಿ ಕದನ ನಡೆದ ವರ್ಷ ____________

೩. ಲಂಡನ್‌ನ ನಿಗೂಢ ಸ್ಥಳ ____________



ಯಾವಾಗಲೂ ಬೇಸರವಿಲ್ಲದೆ ಕಾರ್ಯನಿರತನಾಗಿರುವವನು ಯಶಸ್ಸನ್ನು ಸಾಧಿಸುತ್ತಾನೆ – ಅಮೇರಿಕಾದ ನಾಣ್ಣುಡಿ

©KTBS Not to be republished

ಆ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧) ಶಾರ್ದ | ಅ) ಲಂಡನ್ ರೂಪಾಯಿ |
| ೨) ಥೇಮ್ಸ್ | ಆ) ವಾಣಿಜ್ಯ ಸಮುಚ್ಛಯ |
| ೩) ಸಿಂಪೋಸಿಯಾ | ಇ) ದಾರಿ |
| ೪) ಯೂರೋ | ಈ) ಚರ್ಚ್ |
| | ಉ) ನದಿ |

ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಲಂಡನ್‌ನಲ್ಲಿರುವ ವ್ಯಾಕ್ಸ್ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಹೇಗೆ ಬಂತು?
೨. ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುವು?
೩. ಲಂಡನ್ ವಿಶ್ವವಿದ್ಯಾಲಯದ ಮುಂದೆ ಗಾಂಧೀಜಿಯವರ ಪ್ರತಿಮೆಯನ್ನು ಏಕೆ ಸ್ಥಾಪಿಸಲಾಗಿದೆ?
೪. ಥೇಮ್ಸ್ ನದಿ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ?
೫. ಲಂಡನ್‌ನ ಭೂ ವಿಸ್ತೀರ್ಣ ಎಷ್ಟು?

ಈ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?
೨. ಥೇಮ್ಸ್ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ?
೩. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು?
೪. ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೆಗಳಾವುವು?
೫. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ?

ಉ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂನ ವಿಶೇಷತೆ ಏನು?
೨. ಛೇಂಬರ್ ಆಫ್ ಹಾರರ್ಸ್ ಒಳಗೆ ಹೋದಾಗ ಲೇಖಕರಿಗಾದ ಅನುಭವಗಳೇನು?
೩. ಥೇಮ್ಸ್ ನದಿಯ ಸುತ್ತಮುತ್ತ ಲೇಖಕರು ಕಂಡ ದೃಶ್ಯಗಳಾವುವು?

Not to be republished ©KTBS

ಊ) ಸಂದರ್ಭದೊಡನೆ ವಿವರಿಸಿರಿ.

೧. ಅಲ್ಲಿನ ಒಳ ಥೇಟರ್‌ನಲ್ಲಿ ೩ಡಿ ಕನ್ನಡಕ ಹಾಕಿಕೊಂಡು ತಾರಾಲಯ ನೋಡಿದೆವು.

೨. ಇವರೆಲ್ಲ ಬಸ್ಸೋ, ರೈಲೋ ಹಿಡಿಯಲು ತರಾತುರಿಯಿಂದ ಹೊರಟಿದ್ದರು.

೩. ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ.

## III. ಭಾಷಾಭ್ಯಾಸ :

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.

ಸಚಿವಾಲಯ, ಮೇಲೇರಿ, ನಾಲ್ಕೈದು, ಶಸ್ತ್ರಾಸ್ತ್ರ.

ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

ದುಬಾರಿ, ತರಾತುರಿ, ಅಪರೂಪ, ತದ್ರೂಪ, ನಿಗೂಢ.

ಇ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ.

ಸ್ತಂಭ, ಸಂತಸ, ನಿದ್ರೆ, ಮೂರ್ತಿ, ಸಾವಿರ, ತಾಣ.

## IV.ಸೈದ್ಧಾಂತಿಕ ವ್ಯಾಕರಣ :

### ೧. ಅವ್ಯಯಗಳು :

೧. ಅವನು **ಚೆನ್ನಾಗಿ** ಓದಿದನು.

೨. ಅವಳು **ಚೆನ್ನಾಗಿ** ಓದಿದಳು.

೩. ಅವರು **ಚೆನ್ನಾಗಿ** ಓದಿದರು.

೪. ಅದು **ಚೆನ್ನಾಗಿ** ಓದುತ್ತದೆ.

ಮೇಲಿನ ಎಲ್ಲಾ ವಾಕ್ಯಗಳಲ್ಲಿ ಬಂದಿರುವ 'ಚೆನ್ನಾಗಿ' ಎಂಬ ಪದವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳಲ್ಲೂ, ಏಕವಚನ, ಬಹುವಚನಗಳಲ್ಲೂ ಯಾವ ವ್ಯತ್ಯಾಸವನ್ನೂ ಹೊಂದದೆ ಬಳಕೆಯಾಗಿದೆ. 'ಚೆನ್ನಾಗಿ' ಎಂಬುದರ ಮೇಲೆ ಯಾವ ವಿಧವಾದ ಪ್ರತ್ಯಯಗಳೂ ಸೇರುವುದಿಲ್ಲ. ಹೀಗೆ ಲಿಂಗ, ವಚನ, ವಿಭಕ್ತಿಗಳಿಂದ ಯಾವ ವ್ಯತ್ಯಾಸವನ್ನೂ ಹೊಂದದ ಅನೇಕ ಶಬ್ದಗಳನ್ನು ಭಾಷೆಯಲ್ಲಿ ಬಳಸುತ್ತೇವೆ. ಸುಮ್ಮನೆ, ನೆಟ್ಟನೆ, ಪಕ್ಕನೆ, ಮೆಲ್ಲಗೆ, ಸುತ್ತಲೂ, ಹೌದು, ತರುವಾಯ, ಇಲ್ಲ – ಇಂತಹ ಶಬ್ದಗಳನ್ನು 'ಅವ್ಯಯ' ಎಂದು ಕರೆಯುತ್ತಾರೆ. ಇದರ ಸೂತ್ರವನ್ನು ಹೀಗೆ ಹೇಳಬಹುದು.

**'ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ, ಏಕರೂಪವಾಗಿರುವ ಶಬ್ದಗಳನ್ನು 'ಅವ್ಯಯ' ಎಂದು ಕರೆಯಲಾಗುತ್ತದೆ'.**



Not to be republished ©KTBS

**ಅವ್ಯಯದ ವಿಧಗಳು :**

| ಕ್ರ. ಸಂ. | ಅವ್ಯಯದ ವಿಧಗಳು | ಉದಾಹರಣೆಗಳು |
|---|---|---|
| ೧. | ಸಾಮಾನ್ಯ ಅವ್ಯಯ | ಚೆನ್ನಾಗಿ, ನೆಟ್ಟಗೆ, ತಟ್ಟನೆ, ಬಿಮ್ಮನೆ, ಸುಮ್ಮನೆ, ಬೇಗನೆ, ಹಾಗೆ. |
| ೨. | ಅನುಕರಣ ಅವ್ಯಯಗಳು | ಜುಳುಜುಳು, ಪಟಪಟ, ಧಗಧಗ, ಸುಯ್ಯನೆ, ದಡದಡ, ಢಣಢಣ, |
| ೩. | ಭಾವಸೂಚಕ ಅವ್ಯಯಗಳು | ಎಲಾ! ಅಯ್ಯೋ! ಅಕಟಕಟಾ! ಆಹಾ! ಭಲಾ! ಥೂ! ಅಬ್ಬಾ! |
| ೪. | ಕ್ರಿಯಾರ್ಥಕ ಅವ್ಯಯಗಳು | ಉಂಟು, ಬೇಕು, ಬೇಡ, ಅಹುದು, ಸಾಕು, ಇಲ್ಲ, ಅಲ್ಲ, ಹೌದು. |
| ೫. | ಸಂಬಂಧಾರ್ಥಕ ಅವ್ಯಯಗಳು | ಮತ್ತು, ಅಥವಾ, ಆದ್ದರಿಂದ, ಆದುದರಿಂದ, ಅಲ್ಲದೆ, ಹಾಗಾದರೆ. |
| ೬. | ಕೃದಂತ ಅವ್ಯಯ | ಇರಲು, ಇರಲಾಗಿ. (ಬರುತ್ತಿರಲು, ಬರುತ್ತಿರಲಾಗಿ) |
| ೭. | ತದ್ಧಿತಾಂತ ಅವ್ಯಯ | ಅಂತೆ, ತನಕ, ವರೆಗೆ, ಮಟ್ಟಿಗೆ. (ರಾಮನಂತೆ, ಮನೆತನಕ....) |
| ೮. | ಅವಧಾರಣಾರ್ಥಕ ಅವ್ಯಯ | ಅದೇ, ಇದೇ, ನಾನೇ – ಇವುಗಳಲ್ಲಿರುವ 'ಏ' ಕಾರ. |

## ೨. ದ್ವಿರುಕ್ತಿ, ಜೋಡುನುಡಿ–ನುಡಿಗಟ್ಟು (ಪಡೆನುಡಿ)

ವಾಕ್ಯದಲ್ಲಿ ಪದವನ್ನು ಜೋಡಿಸುವ ಜಾಣ್ಮೆಯೇ ಶೈಲಿ. ಪದಗಳ ಆಯ್ಕೆ ಮತ್ತು ಜೋಡಣೆಯಲ್ಲಿ ಕೌಶಲ ಇದ್ದಾಗ ಶೈಲಿ ಸುಂದರವಾಗುತ್ತದೆ. ಭಾಷೆಯಲ್ಲಿ ಸಹಜ–ಸ್ವಾಭಾವಿಕ ಪದಗಳೊಂದಿಗೆ ವಿಶಿಷ್ಟ ಅರ್ಥಬರುವಂತೆ ಕೆಲವು ಪದಗಳನ್ನು ಜೋಡಿಸಿ ಬಳಸುವುದುಂಟು. ಅಂತಹ ಪದಗಳ ಜೋಡಣೆಯಲ್ಲಿ ದ್ವಿರುಕ್ತಿ, ಜೋಡುನುಡಿ, ನುಡಿಗಟ್ಟು ಅಥವಾ ಪಡೆನುಡಿ ಎಂಬುದಾಗಿ ಹಲವು ವಿಧಗಳಿವೆ.

### ಅ) ದ್ವಿರುಕ್ತಿ:

ಹೌದುಹೌದು, ಮನೆಮನೆ, ನಿಲ್ಲುನಿಲ್ಲು, ಬನ್ನಿಬನ್ನಿ, ಬೇಡಬೇಡ, ಓಡುಓಡು, –ಹೀಗೆ ಒಂದೇ ಪದ ಮಾತು ಇಲ್ಲವೇ ಬರವಣಿಗೆಯಲ್ಲಿ ಎರಡು ಸಾರಿ ಬಳಕೆಯಾದರೆ ಅದನ್ನು 'ದ್ವಿರುಕ್ತಿ' ಎನ್ನುತ್ತಾರೆ.

'ದ್ವಿ' ಎಂದರೆ 'ಎರಡು', 'ಉಕ್ತಿ' ಎಂದರೆ 'ಹೇಳು', 'ದ್ವಿರುಕ್ತಿ' ಎಂದರೆ 'ಎರಡುಬಾರಿ ಹೇಳು' ಎಂದು ಅರ್ಥ. ಸಾಮಾನ್ಯವಾಗಿ ಉತ್ಸಾಹ, ಅವಸರ, ದುಃಖ, ಇತ್ಯಾದಿ ಸಂದರ್ಭಗಳಲ್ಲಿ ಭಾವನೆಗಳ ತೀವ್ರತೆಯನ್ನು ವ್ಯಕ್ತಪಡಿಸುವಾಗ ದ್ವಿರುಕ್ತಿಗಳು ಬಳಕೆಯಾಗುತ್ತವೆ. ಕೆಲವೊಮ್ಮೆ ದ್ವಿರುಕ್ತಿಯಲ್ಲಿನ ಎರಡು ಪದಗಳು ಕೂಡಿದಾಗ ಮೊದಲ ಪದ ರೂಪಾಂತರಗೊಳ್ಳುವುದುಂಟು.

**ಉದಾ :** ಕಡೆ + ಕಡೆ = ಕಟ್ಟಕಡೆ     ಮೊದಲು + ಮೊದಲು = ಮೊತ್ತಮೊದಲು
ಕೆಳಗೆ + ಕೆಳಗೆ = ಕೆಳಕೆಳಗೆ     ಹೊಸದು + ಹೊಸದು = ಹೊಚ್ಚಹೊಸದು
ತುದಿ + ತುದಿ = ತುತ್ತತುದಿ     ಒಂದು + ಒಂದು = ಒಂದೊಂದು

©KTBS Not to be republished

**ಆ) ಜೋಡುನುಡಿ :** ಅರ್ಥವಿರುವ ಪದದೊಂದಿಗೆ ಸಮಾನಾರ್ಥ, ವಿರುದ್ಧಾರ್ಥ ಇಲ್ಲವೇ ಅರ್ಥರಹಿತ ಪದಗಳನ್ನು ಜೋಡಿಸಿ ಬಳಸುವುದುಂಟು. ಇವುಗಳನ್ನೇ 'ಜೋಡುನುಡಿ' ಎಂದು ಕರೆಯಲಾಗುತ್ತದೆ.

**ಉದಾ :**

ಸಮಾನಾರ್ಥಕ ಜೋಡುನುಡಿ – ಉಡಿಗೆತೊಡಿಗೆ, ಅವಳಿಜವಳಿ.

ವಿರುದ್ಧಾರ್ಥಕ ಜೋಡುನುಡಿ – ಸಿಹಿ ಕಹಿ, ನೋವು ನಲಿವು, ಆದಿ ಅಂತ್ಯ.

ಎರಡನೇ ಪದ ಅರ್ಥರಹಿತವಾಗಿರುವ ಜೋಡುನುಡಿ –ಕೂಲಿನಾಲಿ, ಗಿಡಗಂಟೆ, ಕಾಳುಕಡ್ಡಿ, ಹುಳುಹುಪ್ಪಟೆ.

**ಇ) ಪಡೆನುಡಿ–ನುಡಿಗಟ್ಟು :** ವಿಶೇಷಾರ್ಥ ನೀಡುವ ಪದಪುಂಜವನ್ನು 'ಪಡೆನುಡಿ' ಅಥವಾ 'ನುಡಿಗಟ್ಟು' ಎಂದು ಕರೆಯಲಾಗುತ್ತದೆ. ಇಲ್ಲಿ ಪದಗಳ ಬಾಹ್ಯ ಅರ್ಥಕ್ಕಿಂತ ಸೂಚ್ಯಾರ್ಥ ಇಲ್ಲವೇ ಒಳ ಅರ್ಥ ಪ್ರಧಾನವಾಗಿರುತ್ತದೆ.

| | | | | |
|---|---|---|---|---|
| **ಉದಾ:** | **ಕತ್ತಿಮಸೆ** | – ದ್ವೇಷಸಾಧಿಸು | **ಕೈಕೊಡು** | – ಮೋಸಮಾಡು |
| | **ಬೆನ್ನುತಟ್ಟು** | – ಪ್ರೋತ್ಸಾಹಿಸು | **ಹೊಂಚುಹಾಕು** | – ಸಮಯ ಸಾಧಿಸು |
| | **ನಾಯಿಜನ್ಮ** | – ಹೀನಬಾಳು | **ತಲೆದೂಗು** | – ಮೆಚ್ಚುಗೆ ಸೂಚಿಸು |

**೩. ತತ್ಸಮ – ತದ್ಭವಗಳು :** ಸಂಸ್ಕೃತದಲ್ಲಿರುವ ಶಬ್ದಗಳನ್ನು ಯಾವ ಬದಲಾವಣೆಯನ್ನೂ ಮಾಡದೆ ಕನ್ನಡದಲ್ಲಿ ಹಾಗೆಯೇ ಬಳಸುವ ಶಬ್ದಗಳನ್ನು **'ತತ್ಸಮ'** ಎಂದು ಕರೆಯಲಾಗುತ್ತವೆ. (ತತ್ ಎಂದರೆ ಅದಕ್ಕೆ, ಸಮ ಎಂದರೆ ಸಮಾನವಾದುದು. ಅಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದು ಅರ್ಥ.)

**ಉದಾ :** ಕವಿ, ಕಾವ್ಯ, ರಾಮ, ಭೀಮ, ಶಿಶು, ಪತಿ, ಯತಿ, ಸ್ತ್ರೀ, ಶ್ರೀ, ವನ, ಯುದ್ಧ – ಇತ್ಯಾದಿಗಳು

ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಇಲ್ಲವೇ ಪೂರ್ಣ ಬದಲಾವಣೆ ಹೊಂದಿ ಬಂದಿರುವ ಶಬ್ಧಗಳನ್ನು **'ತದ್ಭವ'** ಎಂದು ಕರೆಯುವರು. (ತತ್ ಎಂದರೆ ಅದರಿಂದ ಅಂದರೆ ಸಂಸ್ಕೃತದಿಂದ, ಭವ ಎಂದರೆ ಹುಟ್ಟಿದ ಎಂದು ಅರ್ಥ)

**ಉದಾ :** ಸಿರಿ, ಪೊಡವಿ, ರಾಯ, ಕಬ್ಬಿಗ, ಜೋಗಿ, ಜುದ್ದ, ವರುಸ, ಕಜ್ಜ, ಆಗಸ, ಬಸದಿ – ಇತ್ಯಾದಿಗಳು

## V. ಚಟುವಟಿಕೆ :

೧. ಪ್ರಸ್ತುತ ಗದ್ಯ ಭಾಗದಲ್ಲಿ ಬಳಕೆಯಾಗಿರುವ ಅನ್ಯದೇಶೀಯ ಪದಗಳ ಅರ್ಥ ತಿಳಿಯಿರಿ.

೨. ನೀವು ಕೈಗೊಂಡ ಪ್ರವಾಸದ ಅನುಭವಗಳನ್ನು ಬರೆದು ಶಾಲೆಯ ಭಿತ್ತಿ ಪತ್ರದಲ್ಲಿ ಪ್ರಕಟಿಸಿ.

©KTBS Not to be republished

# ೭ . ನನ್ನ ಗೋಪಾಲ

– ಕುವೆಂಪು

**ಪಾಠ ಪ್ರವೇಶ :** ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಹೊಸಗನ್ನಡ ಸಾಹಿತ್ಯದಲ್ಲಿ ಅನೇಕ ಪ್ರಕಾರದ ಕೃತಿಗಳು ಬಂದವು. ಸಣ್ಣಕತೆ, ಕಾದಂಬರಿ, ಕವಿತೆ, ಕಥನಕಾವ್ಯ, ಪ್ರಬಂಧ, ಜೀವನಚರಿತ್ರೆ, ವ್ಯಕ್ತಿಚಿತ್ರಣ ಇವೇ ಮೊದಲಾದವುಗಳೊಂದಿಗೆ ನಾಟಕ ಪ್ರಕಾರವೂ ಒಂದಾಗಿದೆ (ಹದಿನೆಂಟನೆಯ ಶತಮಾನದಲ್ಲಿ ರಚಿತವಾದ ಸಿಂಗರಾರ್ಯನ 'ಮಿತ್ರಾವಿಂದ ಗೋವಿಂದ'ವೇ ಮೊದಲ ಉಪಲಬ್ಧ ನಾಟಕ). ಇದು ವಾಚಕ (ಸಂಭಾಷಣೆ), ಆಂಗಿಕ (ಅಂಗಚಲನೆ), ಆಹಾರ್ಯ (ವೇಷಭೂಷಣ), ಸಾತ್ವಿಕ (ಮುಖಭಾವ) ಎಂಬ ನಾಲ್ಕು ಅಂಗಗಳಿಂದ ಕೂಡಿದುದು. ಇಂದು ದೃಶ್ಯ ಮಾಧ್ಯಮಕ್ಕೆ ರಂಗಪರಿಕರ, ಬೆಳಕು, ಧ್ವನಿಗಳೂ ಸೇರಿಕೊಂಡಿವೆ. ಇಂತಹ ನಾಟಕವನ್ನು ಅದರಲ್ಲಿಯ ಅಂಕ, ದೃಶ್ಯ ಇತ್ಯಾದಿಗಳಿಗನುಗುಣವಾಗಿ ರೂಪಕ, ಪ್ರಹಸನ, ಏಕಾಂಕಗಳೆಂದು ಕರೆಯುವುದೂ ಉಂಟು.

ಪ್ರಕೃತ ನಾಟಕ ಭಾಗದಲ್ಲಿ ಜೀವನ ನಿರ್ವಹಣೆಯ ಸಮಸ್ಯೆಯ ನಡುವೆಯೂ ಹೆತ್ತವಳ ಶೈಕ್ಷಣಿಕ ಕಾಳಜಿ, ನಿಷ್ಕಲ್ಮಷ ಭಕ್ತಿ, ಪ್ರಕೃತಿಯ ಆರಾಧನೆ ಇತ್ಯಾದಿಗಳ ಕಡೆಗೆ ನಾಟಕಕಾರರು ಗಮನವಿತ್ತು ಚಿತ್ರಿಸಿದುದನ್ನು ಕಾಣಬಹುದು.

©KTBS Not to be republished

## ನೋಟ ಒಂದು

(ಒಂದು ಸಣ್ಣ ಗುಡಿಸಲು. ಅದರ ಜಗಲಿಯ ಮೇಲೆ ಒಂದು ಮೂಲೆಯಲ್ಲಿ ಒಂದು ಗೋಪಾಲನ ಸಣ್ಣ ವಿಗ್ರಹವಿರುವ ದೇವರ ಗೂಡು. ಗೋಪಾಲನ ತಾಯಿ ಒಂದು ಚರಕದ ಮುಂದೆ ಕುಳಿತು ನೂಲುತ್ತಿದ್ದಾಳೆ. ಆಕೆ ಬಡ ಹೆಂಗಸು, ವಿಧವೆ.)

ನನ್ನ ಗೋಪಾಲನೆಲ್ಲಿ? ಹಾಸಿಗೆಯಿಂದ ಇನ್ನೂ ಏಳಲಿಲ್ಲವೊ ಏನೊ? (ಒಂದು ಮೂಲೆಯ ಕಡೆ ನೋಡಿ)

ಗೋಪಾಲ, ಬೆಳಗಾಯ್ತು, ಮೇಲೇಳು; ನೋಡಲ್ಲಿ, ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಕೇಳಲ್ಲಿ, ಹಕ್ಕಿಗಳು ಹಾಡುತ್ತ, ಹಾರಾಡಿ ಕರೆಯುತ್ತಿವೆ ನಿನ್ನ. ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ. ಎದ್ದೇಳು ಗೋಪಾಲ. ಶಾಲೆಗೆ ಹೊತ್ತಾಗುತ್ತದೆ. ಗುರುಗಳೇನೆಂದಾರು? ಏಳು ಗೋಪಾಲ. ನನ್ನ ಕಂದಾ.

(ಗೋಪಾಲನು ಶುಚಿಯಾದ ಬಟ್ಟೆಗಳನ್ನು ಉಟ್ಟುಕೊಂಡು, ಬುಟ್ಟಿಯಲ್ಲಿ ಹೂಗಳನ್ನು ಕೊಯ್ದುಕೊಂಡು ಬೇಗ ಬರುತ್ತಾನೆ.)

**ಗೋಪಾಲ :** ಕರೆದೆಯೇನಮ್ಮ?

ತಾಯಿ : ಹೌದು, ಮಗು. ಮಲಗಿದ್ದೆಯೆಂದು ಕರೆದೆ. ಎಲ್ಲಿಗೆ ಹೋಗಿದ್ದೆ?

ಗೋಪಾಲ : ಆಗಲೇ ಎದ್ದು ಸ್ನಾನಮಾಡಿ, ನಿನಗೆ ಗೋಪಾಲನ ಪೂಜೆಗೆ ಬೇಕಾದ ಹೂಗಳನ್ನು ಕೊಯ್ಯಲೆಂದು ಬನಗಳಿಗೆ ಹೋಗಿದ್ದೆ.

ತಾಯಿ : ಹೂ ಕೊಯ್ದೆಯೇನು?

ಗೋಪಾಲ : ಹೌದಮ್ಮ, ನೋಡಿಲ್ಲಿ! (ಬುಟ್ಟಿಯನ್ನು ತೋರಿಸುತ್ತ)

ಬನದಲ್ಲಿ ಏನಮ್ಮ ಸೊಗಸು! ಏನು ಆನಂದ! ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತಬಾಳೆಯ ಹೂವು, ಗೋರಂಟೆಯ ಹೂವು! ಏನಮ್ಮ, ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತಿತ್ತು. ಆಮೇಲೆ ಹಕ್ಕಿಗಳ ಇಂಪಾದ ಗಾನ! ತಂಗಾಳಿ! ಸೂರ್ಯದೇವನ ಹೊಂಬೆಳಕು! ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಗಳು ಮಿರುಗುವ ಲೀಲೆ! ಮನೆಗಿಂತ ಬನವೇ ಸೊಗಸಮ್ಮ, ನೀನೊಬ್ಬಳಲ್ಲಿದ್ದರೆ.....

ತಾಯಿ : ಹೌದು, ಕಂದಾ! ಅವುಗಳೆಲ್ಲ ನೋಡು, ಆ ಗೋಪಾಲನ ಲೀಲೆ!
(ವಿಗ್ರಹವನ್ನು ತೋರಿಸುತ್ತಾಳೆ.)
ಹೂಗಳನ್ನು ಅಲ್ಲಿಟ್ಟು ನೀನು ಶಾಲೆಗೆ ಹೋಗು. ಹೊತ್ತಾಗಿ ಹೋದರೆ ಗುರುಗಳು ನೊಂದುಕೊಳ್ಳುತ್ತಾರೆ. ನಿನಗಾಗಿ ಗಂಜಿ ಮಾಡಿಟ್ಟಿದ್ದೇನೆ.

ಗೋಪಾಲ : ಆಗಲಮ್ಮ, ಹೋಗುತ್ತೇನೆ. ಅಮ್ಮ, ನಾನು ಬರುವಾಗ ಕಾಡು ದಾಟಿ ಬರಬೇಕು. ಬೈಗಿನ ಹೊತ್ತು ನನಗಲ್ಲಿ ಒಬ್ಬನೇ ಬರುವುದಕ್ಕೆ ಹೆದರಿಕೆ. ಜೊತೆಗೆ ಯಾರಾದರೂ ಬೇಕಮ್ಮ. ನೆರೆಯೂರಿನಿಂದ ಬರುವ ಹುಡುಗರಿಗೆ ಜೊತೆಗೆ ಆಳುಗಳಿರುವರಮ್ಮ. ರಾಮು, ಕಿಟ್ಟಿ, ನಾಣಿ, ಮಾಧು ಇವರೆಲ್ಲರಿಗೂ ಒಬ್ಬೊಬ್ಬ ಆಳು. ನನಗೆ ಮಾತ್ರ ಯಾರೂ ಇಲ್ಲ.

ತಾಯಿ : ಮಗೂ, ಅವರೆಲ್ಲ ಶ್ರೀಮಂತರ ಮಕ್ಕಳು; ಬೇಕಾದಷ್ಟು ಹಣವಿದೆ. ನಮಗೆಲ್ಲಿ ಬರಬೇಕು? ನೀನೇ ಬಲ್ಲೆ, ಹೊಟ್ಟೆಗೆ ಹಿಟ್ಟು ಸಿಕ್ಕುವುದೇ ಕಷ್ಟ. ನೂಲು ಮಾರಿ ಬಂದ ಮೂರು ಕಾಸಿನಲ್ಲಿ ನಮ್ಮ ಸಂಸಾರವೆಲ್ಲ ಸಾಗಬೇಕು. ನೋಡು, ಆ ಗೋಪಾಲ ಕೊಡಬೇಕು, ನಾವು ಉಣಬೇಕು.

ಗೋಪಾಲ : ಅಮ್ಮಾ, ನನಗೊಂದು ಹೊಸ ಪಂಚೆ ಕೊಡುವೆನೆಂದು ಮೊನ್ನೆಯೇ ಹೇಳಿದ್ದೆ; ಇಂದು ಕೊಡುತ್ತೀಯಾ? ನನ್ನ ಗೆಳೆಯರೆಲ್ಲರೂ ನನ್ನನ್ನು ನೋಡಿ ಹಾಸ್ಯಮಾಡುತ್ತಾರಮ್ಮ. ಅವರೆಲ್ಲಾ ಬೆಲೆಯುಳ್ಳ ಬಟ್ಟೆ ಹಾಕಿಕೊಂಡು ಬರುತ್ತಾರೆ.

©KTBS Not to be republished



ವಿನಾಶಕ್ಕೆ ಹೇತುವಾಗುವುದು ಅಹಂಕಾರ, ಉನ್ನತಿಗೆ ದಾರಿ ತೋರುವುದು ವಿನಯ – ಏಸುಕ್ರಿಸ್ತ

**ತಾಯಿ :** ಕೊಡುತ್ತೇನೆ, ಕಂದ. ನಿನಗಾಗಿ ಹಗಲಿರುಳೂ ನೂತು ಅದನ್ನು ಸಂಪಾದಿಸಿದ್ದೇನೆ. ಹೋಗು, ಗಂಜಿಯುಂಡು ಬಾ! ಕೊಡುತ್ತೇನೆ. (ಗೋಪಾಲನು ಹೂವಿನ ಬುಟ್ಟಿಯನ್ನು ಇಟ್ಟು ಹೋಗುತ್ತಾನೆ.)

ಲಕ್ಷ್ಮೀಶ, ಇದುವರೆಗೆ ನಾನು ಬಡವಳೆಂದು ನನಗೆ ತಿಳಿದಿರಲಿಲ್ಲ. ಇಂದು ನನ್ನ ಗೋಪಾಲನ ಬಯಕೆ ನನಗದನ್ನು ತಿಳಿಸಿತು. ಅಯ್ಯೋ! ಆ ಮಗುವಿಗೆ ಬಡತನದ ಬವಣೆಯೇಕೆ? ಇದುವರೆಗೆ ಅವನು ಕೇಳಿದ ವಸ್ತುವನ್ನೆಲ್ಲ ಕೊಟ್ಟು ಅವನಿಗೆ ಬಡತನದ ಸುದ್ದಿಯನ್ನೇ ತಿಳಿಸದಿದ್ದೆ.–ಇಂದು ಅವನ ಜೊತೆಗೆ ಯಾರನ್ನು ಕಳುಹಿಸಲಿ? ಕಾಡಿನಲ್ಲಿ ಮುದ್ದು ಕಂದನಿಗೆ ಹೆದರಿಕೆಯಂತೆ ಗೋಪಾಲ!



ಗೋಪಾಲ, ನಿನ್ನನ್ನೇ ನಂಬುವಂತೆ ಹೇಳಿ, ನನ್ನ ಗೋಪಾಲನನ್ನ ಕಳುಹಿಸುತ್ತೇನೆ. (ಗೋಪಾಲನು ಬಗಲಲ್ಲಿ ಒಂದು ಸಣ್ಣ ಚಾಪೆ ಇಟ್ಟುಕೊಂಡು, ಕೈಯಲ್ಲಿ ಓಲೆ ಹಿಡಿದು, ಲೇಖನಿ ತೆಗೆದುಕೊಂಡು ಸಿದ್ಧನಾಗಿ ಬರುತ್ತಾನೆ.)

**ಗೋಪಾಲ :** ಅಮ್ಮ, ನಾನು ಶಾಲೆಗೆ ಹೊರಡುತ್ತೇನೆ. (ತಾಯಿಗೆ ನಮಸ್ಕಾರ ಮಾಡುತ್ತಾನೆ.)

**ತಾಯಿ :** ಹಣೆಗೆ ತಿಲಕವನ್ನಿಟ್ಟುಕೋ, ಕಂದ. ಆ ಕರಡಿಗೆ ತೆಗೆದುಕೊಂಡು ಬಾ, ಇಲ್ಲಿ. (ಗೋಪಾಲನು ಕರಡಿಗೆ ತಂದುಕೊಡುತ್ತಾನೆ. ತಾಯಿ ತಿಲಕವನ್ನಿಡುತ್ತಾಳೆ.) ಕಂದಾ, ಸುಖವಾಗಿ ಹೋಗಿ ಬಾ. ಗೋಪಾಲನು ನಿನ್ನ ಜೊತೆಗೆ ಇರಲಿ. ತೆಗೆದುಕೊ, ಈ ಪಂಚೆಯನ್ನು. (ಕೊಡುತ್ತಾಳೆ.) ನೀನು ಶಾಲೆಯಿಂದ ಬರುವಾಗ ಕಾಡಿನಲ್ಲಿ ಹೆದರಿಕೆಯಾದರೆ ಗೋಪಾಲನನ್ನು ಕೂಗು, ಬರುತ್ತಾನೆ.

©KTBS Not to be republished

ಗೋಪಾಲ : ಯಾರಮ್ಮ ಅವನು?

ತಾಯಿ : ನಿನ್ನಣ್ಣ, ನನ್ನ ಹಿರಿಯ ಮಗ. ಕಾಡಿನಲ್ಲಿ ಅವನು ಯಾವಾಗಲೂ ದನ ಕಾಯುತ್ತಾ ಇರುತ್ತಾನೆ. ನೀನು ಕರೆದರೆ ಬಂದು ನಿನ್ನನ್ನು ಕಾಡು ದಾಟಿಸುತ್ತಾನೆ.

ಗೋಪಾಲ : ಅಮ್ಮ, ಅವನಿಗೆ ನನ್ನ ಗುರುತಿದೆಯೆ?

ತಾಯಿ : ಹೌದು, ಅವನಿಗೆ ಎಲ್ಲರ ಗುರುತೂ ಇರುತ್ತದೆ. ನೀನು ಹೆದರಬೇಡ, ಹೋಗು. ನೀನು ಕರೆದರೆ ಬಂದೇ ಬರುತ್ತಾನೆ. (ಗೋಪಾಲನು ಹೋಗುತ್ತಾನೆ.) ನನ್ನ ಭಕ್ತಿಗೆ ಬಲವಿಲ್ಲೆಂದು ಕೋಪಮಾಡಬೇಡ, ಗೋಪಾಲ. (ವಿಗ್ರಹಕ್ಕೆ ಪುನಃ ಅಡ್ಡಬೀಳುತ್ತಾಳೆ.)

## ನೋಟ ಎರಡು

(ಒಂದು ಕಾಡು. ಸಂಜೆಯ ಸಮಯ. ಗೋಪಾಲನು ಶಾಲೆಯಿಂದ ಹಿಂತಿರುಗಿ ಬರುತ್ತಾನೆ. ತನ್ನ ಕೈಲಿದ್ದ ಚಾಪೆ ಮೊದಲಾದವುಗಳನ್ನು ಕೆಳಗಿಟ್ಟು ಹೂಗಳನ್ನು ಆಯುತ್ತಾನೆ.)

ಗೋಪಾಲ : ಈ ಮರದಲ್ಲಿ ಏನು ಹೂವಿನ ಗೊಂಚಲು! ಭಾರ ಹೆಚ್ಚಾಗಿ ತಲೆ ಬಾಗುತ್ತಿದೆ, ಮರ. ಈ ನೇರಿಲ ಹಣ್ಣು ಎಷ್ಟು ಕಪ್ಪಾಗಿವೆ! (ಆಯ್ದು ತಿನ್ನುತ್ತಾನೆ.) ಆಗಲೇ ಬೈಗಾಯ್ತು. ಏನು ಸೂರ್ಯನಪ್ಪ! ನಾನು ಮನೆಗೆ ಹೋಗುವವರೆಗಾದರೂ ಮುಳುಗದೆ ಕಾದರೆ! ಈ ಕಪ್ಪಿನಲ್ಲಿ ನನಗೊಬ್ಬನಿಗೇ ಹೆದರಿಕೆ. ಓಹೋ ಮರೆತಿದ್ದೆ, ಅಮ್ಮ ಹೇಳಿದ್ದು. ನನ್ನಣ್ಣ ಗೋಪಾಲ ಇಲ್ಲಿಯೇ ದನ ಕಾಯುತ್ತಿರುವನಂತೆ. ಅವನನ್ನು ಕರೆಯುತ್ತೇನೆ. "ಗೋಪಾಲಣ್ಣಾ, ಗೋಪಾಲಣ್ಣಾ! ಗೋಪಾಲಣ್ಣಾ!" ಇದೇಕೆ, ಉತ್ತರವೇ ಇಲ್ಲ! ದನಗಳನ್ನು ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೊ? ಆದರೆ ಅಮ್ಮ ಹೇಳಿದ್ದಾಳೆ. ಇಲ್ಲಿಯೇ ಇರುತ್ತಾನಂತ. ಅಮ್ಮನ ಮಾತು ಸುಳ್ಳಾಗಲಾರದು! ಮತ್ತೆ ಕರೆದು ನೋಡುತ್ತೇನೆ; ಅಣ್ಣಾ, ಅಣ್ಣಾ! ಏ ಅಣ್ಣಾ! ನನಗೆ ಹೆದರಿಕೆ, ಅಣ್ಣಾ. ಕತ್ತಲಾಗುತ್ತಿದೆ, ಎಲ್ಲಿದ್ದೀಯಣ್ಣಾ, ಏ ಗೋಪಾಲಣ್ಣಾ!

ಬನದ ಗೋಪಾಲ : (ತೆರೆಯೊಳಗಿಂದಲೆ) ಏನೋ, ಗೋಪಾಲ?

ಗೋಪಾಲ : ಎಲ್ಲಿದ್ದೀಯಾ? ಹೆದರಿಕೆಯಾಗುತ್ತಿದೆ ನನಗೆ. ಅಮ್ಮ ಹೇಳಿದ್ದಳು, ಹೆದರಿಕೆಯಾದರೆ ನಿನ್ನನ್ನು ಕರೆ ಅಂತ.

ಬನದ ಗೋಪಾಲ : ಹೆದರಬೇಡ, ನಾನಿಲ್ಲಿಯೇ ಇದ್ದೇನೆ. ಧೈರ್ಯವಾಗಿ ಹೋಗು ಮನೆಗೆ.

ಗೋಪಾಲ : ಎಲ್ಲಿದ್ದೀಯೆ, ಬಾ ಅಣ್ಣಾ–





©KTBS Not to be republished

**ಬನದ ಗೋಪಾಲ :** ತುಂಬಾ ಕೆಲಸದ ಮೇಲಿದ್ದೇನೆ ಕಣೋ. ಈಗ ಬರುವುದಕ್ಕಾಗುವುದಿಲ್ಲ. ನೀನು ಹೋಗು.

**ಗೋಪಾಲ :** ನೀನು ಮನೆಗೆ ಬರುವುದಿಲ್ಲವೆ–ಅಮ್ಮನ ನೋಡುವುದಕ್ಕೆ? ಕತ್ತಲಲ್ಲಿ ಕಾಡಿನ ನಡುವೆ ಏಕಿರುವೆ?

**ಬನದ ಗೋಪಾಲ :** ನಾನು ಆಮೇಲೆ ಹಿಂದಿನಿಂದ ಬರುತ್ತೇನೆ, ಅಮ್ಮನಿಗೆ ಹೇಳು. ಅಮ್ಮ ನಿನಗಾಗಿ ಕಾದಿದ್ದಾಳೆ; ಬೇಗ ಹೋಗಪ್ಪ.

(ಗೋಪಾಲನು ಹೋಗುತ್ತಾನೆ. ಬನದ ಗೋಪಾಲನು ಕಾಡಿನಿಂದ ಈಚೆಗೆ ಬರುತ್ತಾನೆ. ತಲೆಯ ಮೇಲೆ ಸಣ್ಣದೊಂದು ಕಿರೀಟ, ನವಿಲುಗರಿ; ಕೈಲೊಂದು ಕೊಳಲು. ಗೋಪಾಲನು ಹೋಗುತ್ತಿರುವುದನ್ನೆ ನಗುತ್ತಾ ಸ್ವಲ್ಪ ಹೊತ್ತು ನೋಡುತ್ತಾನೆ. ಬಳಿಕ ಕೊಳಲೂದಿ ಹಾಡುತ್ತಾನೆ.)

**ಧನ್ಯಾಸಿ–ಆದಿತಾಳ**

ತಿಳಿವಳಿಕೆಗೆ ನಾ ಸಿಲುಕೇ ಮನುಜಾ
ಒಲುಮೆಗೆ ಸೆರೆಯಾಗುವೆನು ॥ ಪ ॥

ತಪಸಿಗಳೆನ್ನನು ಜ್ಞಾನದಿ ಮುಟ್ಟಲು
ಯುಗಯುಗಗಳು ಬಲು ಬಳಲುವರು
ಯೋಗಿಗಳೆನ್ನನು ಜನುಮ ಜನುಮದಲಿ
ಹೊಂದಲು ಸಾಧನೆ ಮಾಡುವರು ॥ ೧ ॥

ಕಡಲಿನ ಬಿತ್ತರ ಸಾಲದು ಪವಡಿಸೆ
ಭಕ್ತಿಯ ಕಂಬನಿ ಮನೆ ಎನಗೆ
ಹಿಮಗಿರಿ ಎತ್ತರ ಸಾಲದು ನಾನಿರೆ
ಭಕ್ತನ ಹೃದಯವು ಸಾಕೆನಗೆ ॥ ೨ ॥

ಬೃಂದಾವನದಾ ಗೋಪಿಯರರಿತರೆ
ವೇದಗಳಾಡುವ ಸತ್ಯವನು?
ಹಾಲನು ಮಾರುವ ಹೆಣ್ಣುಗಳೊಲ್ಮೆಯೆ
ಮೀರದೆ ಯೋಗಿಯ ಸಾಧನೆಯ? ॥ ೩ ॥

॥ ತೆರೆ ॥





©KTBS Not to be republished

## ಕೃತಿಕಾರರ ಪರಿಚಯ :



ಕನ್ನಡದ ವರ್ಡ್ಸ್‌ವರ್ತ್ ಹಾಗೂ ರಾಷ್ಟ್ರಕವಿ ಎಂದು ಖ್ಯಾತರಾಗಿರುವ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ದಿನಾಂಕ ೨೯-೧೨-೧೯೦೪ ರಂದು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕುಪ್ಪಳಿಯಲ್ಲಿ ಜನಿಸಿದರು. ಇವರ ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ತಾಯಿಯ ಊರು ಚಿಕ್ಕಮಗಳೂರು ಜಿಲ್ಲೆಯ ಹಿರೇಕೊಡಿಗೆ. ಹೇಮಾವತಿ ಇವರ ಹೆಂಡತಿ. ಇವರ ಕಾವ್ಯನಾಮ ಕುವೆಂಪು.

'ಚಂದ್ರಮಂಚಕೆ ಬಾ ಚಕೋರಿ', 'ನವಿಲು', 'ಪಕ್ಷಿಕಾಶಿ' (ಕವನ ಸಂಕಲನಗಳು). 'ಬೆರಳ್‌ಗೆ ಕೊರಳ್', 'ಶೂದ್ರತಪಸ್ವಿ', 'ಜಲಗಾರ' (ನಾಟಕಗಳು). 'ರಸೋವೈಸಃ', 'ವಿಭೂತಿ ಪೂಜೆ', 'ದ್ರೌಪದಿಯ ಸಿರಿಮುಡಿ' (ವಿಮರ್ಶೆಗಳು). 'ನನ್ನ ದೇವರು ಮತ್ತು ಇತರ ಕತೆಗಳು' (ಸಣ್ಣಕಥೆ). 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು'(ಕಾದಂಬರಿಗಳು). 'ಶ್ರೀ ರಾಮಾಯಣ ದರ್ಶನಂ' (ಮಹಾಕಾವ್ಯ) - ಇವೇ ಮೊದಲಾದ ೮೦ ಕೃತಿಗಳನ್ನು ಕುವೆಂಪು ಅವರು ರಚಿಸಿದ್ದಾರೆ.

ಕುವೆಂಪು ಅವರು ಪದ್ಮಭೂಷಣ (೧೯೫೮), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೫೫), ರಾಷ್ಟ್ರಕವಿ (೧೯೬೪), ಜ್ಞಾನಪೀಠ ಪ್ರಶಸ್ತಿ (೧೯೬೮), ಪಂಪ ಹಾಗೂ ಕರ್ನಾಟಕ ರತ್ನ ಪ್ರಶಸ್ತಿಗಳಿಂದ ಪುರಸ್ಕೃತರು. ಪ್ರಸ್ತುತ ನಾಟಕಾಂಶವನ್ನು ಅವರ **'ನನ್ನ ಗೋಪಾಲ'** ಕೃತಿಯಿಂದ ಆರಿಸಿಕೊಳ್ಳಲಾಗಿದೆ. ಇವರು ದಿನಾಂಕ ೧೧-೧೧-೧೯೯೪ ರಲ್ಲಿ ನಿಧನರಾದರು.

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಇಂಪು** - ಮಧುರ

**ಕರಡಿಗೆ** - ಭರಣಿ; ಪೆಟ್ಟಿಗೆ.

**ಚರಕ** - ರಾಟೆ; ನೂಲು ತೆಗೆಯುವ ಸಾಧನ.

**ತೊಳಗು** - ಪ್ರಕಾಶಿಸು

**ನೋಟ** - ನಾಟಕದ ದೃಶ್ಯ

**ಬವಣೆ** - ಕಷ್ಟ; ತೊಂದರೆ.

**ಬಿತ್ತರ(ದ್ಭ)** - ವಿಸ್ತಾರ(ತ್ಸ)

**ಮಳೆಬಿಲ್ಲು** - ಕಾಮನಬಿಲ್ಲು

**ಯೋಗಿ** - ಯೋಗದಲ್ಲಿ ತೊಡಗಿದ; ಯತಿ.

**ಓಲೆ** - ತಾಳೆಮರದ ಗರಿಯ ಹಾಳೆ; ಕಾಗದ.

**ಕಾದರೆ** - ಹಾದಿನೋಡು; ನಿರೀಕ್ಷಿಸು.

**ತಿಲಕ** - ಹಣೆಯ ಬೊಟ್ಟು

**ನೂತು** - ನೂಲು ತೆಗೆದು

**ಪವಡಿಸು** - ಮಲಗು; ನಿದ್ರಿಸು.

**ಬಳಲು**-ಆಯಾಸ; ಶ್ರಮ.

**ಬೈಗು** - ಸಂಜೆ

**ಮಿರುಗು** - ಪ್ರಕಾಶಿಸು

**ಸಿಲುಕೇ** - ಸಿಗಲಾರೆನು.

©KTBS Not to be republished



ತಾಯಿನಾಡಿಗಾಗಿ ಸಾಯುವುದು ಶ್ರೇಷ್ಠ, ಅದಕ್ಕಿಂತಲೂ ಹೆಚ್ಚಿನದು ತಾಯಿ ನಾಡಿಗಾಗಿ ಜೀವಿಸುವುದು - ಹಂಗೇರಿ ನಾಣ್ಣುಡಿ

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು?

೨. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?

೩. ಗೋಪಾಲನ ಗೆಳೆಯರ ಹೆಸರೇನು?

೪. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು?

೫. ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ?

೬. ಬನದ ಗೋಪಾಲ ಯಾರು? ಕಾಡಿನಲ್ಲಿ ಅವನ ಕೆಲಸವೇನು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಎಳಿಸಿದಳು?

೨. ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು?

೩. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?

೪. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗೋಪಾಲ ಮತ್ತು ಬನದ ಗೋಪಾಲನ ನಡುವೆ ನಡೆದ ಸಂಭಾಷಣೆ ಏನು?

೨. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವೇನು?

೩. ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ?

೪. ಬನದ ಗೋಪಾಲನ ಹಾಡಿನ ಸಾರವನ್ನು ಬರೆಯಿರಿ.

೫. ಗೋಪಾಲನಿಗೆ ಇದ್ದ ಕಷ್ಟವೇನು? ಅದು ಹೇಗೆ ಪರಿಹಾರವಾಯಿತು?

**ಈ) ಸಂದರ್ಭದೊಂದಿಗೆ ವಿವರಿಸಿರಿ.**

೧. ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು.

೨. ಆ ಗೋಪಾಲ ಕೊಡಬೇಕು, ನಾವು ಉಣಬೇಕು.

೩. ಆ ಮಗುವಿಗೆ ಬಡತನದ ಬವಣೆಯೇಕೆ?

೪. ಅಮ್ಮನ ಮಾತು ಸುಳ್ಳಾಗಲಾರದು!

©KTBS Not to be republished

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪ ಬರೆಯಿರಿ.**

ಸಿರಿ, ಬನ, ಮಲ್ಲಿಗೆ, ಸಂಪಿಗೆ, ಹಕ್ಕಿ, ಸಂಜೆ, ಜನುಮ, ಯೋಗಿ, ಭಕ್ತಿ, ಬಿತ್ತರ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಕರುಣೆ, ತುದಿ, ಮುದುಡು, ಸ್ವೀಕರಿಸು, ಬೈಗು, ಬಡತನ, ಅಜ್ಞಾನ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.**

ಬವಣೆ, ಒಲುಮೆ, ಕರುಣೆ, ಲೀಲೆ, ಸಂಪಾದನೆ, ತಂಗಾಳಿ.

**ಈ) ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ, ಸಮಾಸವನ್ನು ಹೆಸರಿಸಿರಿ.**

ತಂಗಾಳಿ, ಹಿಮಮಣಿ, ಗಂಜಿಯುಂಡು, ಲಕ್ಷ್ಮೀಶ, ಹೊಂಬೆಳಕು, ಸ್ನಾನಮಾಡು.

**ಉ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.**

ಕಂಬನಿ, ಕೋಟ್ಯಂತರ, ಲಕ್ಷ್ಮೀಶ, ಕೊಳಲೂದಿ, ಧೈರ್ಯವಾಗಿ, ಹೆದರಿಕೆಯಾದರೆ, ಮೇಲೇಳು.

**ಊ) ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಿರಿ.**

೧. ಗೋಪಾಲನೆಲ್ಲಿ ಹಾಸಿಗೆಯಿಂದ ಇನ್ನೂ ಏಳಲಿಲ್ಲವೋ ಏನೋ

೨. ಕೇಳಲ್ಲಿ ಹಕ್ಕಿಗಳು ಹಾಡುತ್ತ ಹಾರಾಡಿ ಕರೆಯುತ್ತಿವೆ ನಿನ್ನ

೩. ಬನದಲ್ಲಿ ಏನಮ್ಮ ಸೊಗಸು ಏನು ಆನಂದ

## IV. ಸೈದ್ಧಾಂತಿಕ ವ್ಯಾಕರಣ :

### ಕ್ರಿಯಾಪದ :

ಸಾಮಾನ್ಯವಾಗಿ ಒಂದು ಕ್ರಿಯೆಯ ಪೂರ್ಣ ಅರ್ಥವನ್ನು ಕೊಡುವ ಪದಗಳನ್ನು 'ಕ್ರಿಯಾಪದ' ಎಂದು ಕರೆಯಲಾಗುತ್ತದೆ.

**ಉದಾ :** ಮಾಡುತ್ತಾನೆ, ಮಾಡಿದನು, ಮಾಡುವನು, ಮಾಡಲಿ, ಮಾಡನು – ಈ ಎಲ್ಲಾ ಕ್ರಿಯಾಪದಗಳ ಮೂಲರೂಪ 'ಮಾಡು' ಆಗಿದೆ.

ಕ್ರಿಯಾಪದದ ಮೂಲರೂಪವನ್ನು **'ಕ್ರಿಯಾಪ್ರಕೃತಿ'** ಅಥವಾ **'ಧಾತು'** ಎನ್ನುವರು. ಧಾತುಗಳಲ್ಲಿ ಎರಡು ವಿಧ. ಅವುಗಳೆಂದರೆ;



ಮಾತಿನಲ್ಲಿ ವಿನಯ, ನಡತೆಯಲ್ಲಿ ಸ್ಪಷ್ಟತೆ, ಕೃತಿಯಲ್ಲಿ ದೃಢತೆ-ಹೀಗೆ ಮೂರು ಗುಣವಿರುವವರು ಏನನ್ನೂ ಸಾಧಿಸಬಹುದು-ಥಾಮಸ್‌ಫುಲ್ಲರ್

©KTBS Not to be republished

೧. ಮೂಲಧಾತುಗಳು : ಮಾಡು, ತಿನ್ನು, ಹೋಗು, ಬರು, ಓದು, ಓಡು, ಮುಚ್ಚು, ನೋಡು, ಒಪ್ಪು, ಏರು, ಇಳಿ, ಬೀಳು, ಬರೆ, ಹಿಗ್ಗು, ತೂಗು, ಮಲಗು, ಏಳು, ನಡೆ, ಈಜು, ಮುಚ್ಚು, ಬೆಳಗು – ಇತ್ಯಾದಿ.

**೨. ಪ್ರತ್ಯಯಾಂತ ಧಾತು ಅಥವಾ ಸಾಧಿತಧಾತುಗಳು :** ನಾಮಪ್ರಕೃತಿ ಹಾಗೂ ಅನುಕರಣ ಶಬ್ದಗಳ ಮೇಲೆ 'ಇಸು' ಪ್ರತ್ಯಯ ಸೇರಿದಾಗ ಅವು ಪ್ರತ್ಯಯಾಂತ ಧಾತು ಅಥವಾ ಸಾಧಿತ ಧಾತು ಎಂದು ಕರೆಸಿಕೊಳ್ಳುತ್ತವೆ.

| ಉದಾ: | ಪ್ರಕೃತಿ | + | ಪ್ರತ್ಯಯ | = | ಸಾಧಿತ ಧಾತು | – | ಕ್ರಿಯಾಪದ |
|---|---|---|---|---|---|---|---|
| | ಕನ್ನಡ | + | ಇಸು | = | ಕನ್ನಡಿಸು | – | ಕನ್ನಡಿಸಿದನು |
| | ಧಗಧಗ | + | ಇಸು | = | ಧಗಧಗಿಸು | – | ಧಗಧಗಿಸುತ್ತದೆ |
| | ದುಃಖ | + | ಇಸು | = | ದುಃಖಿಸು | – | ದುಃಖಿಸುವನು |

**ಸಕರ್ಮಕ ಮತ್ತು ಅಕರ್ಮಕ ಧಾತುಗಳು :**

ಗಣೇಶನು ಹಣ್ಣನ್ನು ತಿಂದನು. – ಈ ವಾಕ್ಯದಲ್ಲಿ 'ಗಣೇಶನು' ಎಂಬುದು 'ಕರ್ತೃಪದ', 'ಹಣ್ಣನ್ನು' ಎಂಬುದು 'ಕರ್ಮಪದ', 'ತಿಂದನು' ಎಂಬುದು 'ಕ್ರಿಯಾಪದ' ಆಗಿದೆ. ಗಣೇಶನು ಏನನ್ನು ತಿಂದನು? ಎಂದು ಪ್ರಶ್ನಿಸಿದರೆ 'ಹಣ್ಣನ್ನು' ಎಂಬ ಉತ್ತರ ಬರುತ್ತದೆ. ಹೀಗೆ ಕ್ರಿಯಾಪದವನ್ನು ಆಧಾರವಾಗಿಟ್ಟುಕೊಂಡು ಏನನ್ನು ಎಂದು ಪ್ರಶ್ನಿಸಿದಾಗ ಕರ್ಮಪದ ಬರಬೇಕು. ಆದರೆ ಕೆಲವು ಕ್ರಿಯಾಪದಗಳು ಕರ್ಮಪದ ಇಲ್ಲದೆ ಬಳಕೆಯಾಗುತ್ತವೆ. ಉದಾ : ರಹೀಮ ಓಡಿದನು. ಇಲ್ಲಿ ರಹೀಮ ಏನನ್ನು ಓಡಿದನು ಎಂದು ಪ್ರಶ್ನಿಸಿದರೆ ಉತ್ತರ ಸಿಗುವುದಿಲ್ಲ. ಹೀಗಾಗಿ, ಕರ್ಮಪದವನ್ನು ಅಪೇಕ್ಷಿಸುವ ಧಾತುಗಳನ್ನು **'ಸಕರ್ಮಕ ಧಾತುಗಳು'** ಎಂದೂ ಕರ್ಮಪದವನ್ನು ಅಪೇಕ್ಷಿಸದ ಧಾತುಗಳನ್ನು **'ಅಕರ್ಮಕ ಧಾತುಗಳು'** ಎಂದೂ ಕರೆಯಲಾಗುತ್ತದೆ. ಈ ಕೆಳಗಿನ ಉದಾಹರಣೆಗಳನ್ನು ಗಮನಿಸಿ.

**೧. ಸಕರ್ಮಕ ಧಾತುಗಳು :** ರಕ್ಷಿಸು, ಕಟ್ಟು, ಓದು, ಮಾಡು, ಉಣ್ಣು, ಕತ್ತರಿಸು, ತೆರೆ, ಸೇರು, ಬಿಡು – ಈ ಎಲ್ಲಾ ಧಾತುಗಳ ಮುಂದೆ 'ಏನನ್ನು' ಎಂದು ಪ್ರಶ್ನೆ ಹಾಕಿಕೊಂಡರೆ ಯಾವುದಾದರೊಂದು ಉತ್ತರ (ಕರ್ಮಪದ) ಸಿಗುತ್ತದೆ.

**೨. ಅಕರ್ಮಕ ಧಾತುಗಳು :** ಮಲಗು, ಓಡು, ಹುಟ್ಟು, ಹೋಗು, ಏಳು, ಸೋರು, ನಾಚು – ಈ ಎಲ್ಲಾ ಧಾತುಗಳ ಮುಂದೆ 'ಏನನ್ನು' ಎಂದು ಪ್ರಶ್ನೆ ಹಾಕಿಕೊಂಡರೆ ಕರ್ಮಪದ ಇರುವುದಿಲ್ಲ.

© KTBS Not to be republished

**ಪದ್ಯ ಭಾಗ**

# ೧. ಏಣಿ

– ಸುಕನ್ಯಾ ಮಾರುತಿ

**ಪಾಠ ಪ್ರವೇಶ :** ಹೊಸಗನ್ನಡ ಸಾಹಿತ್ಯವನ್ನು ತನ್ನ ಭಿನ್ನ ಭಿನ್ನ ಧೋರಣೆಗಳಿಗೆ ಅನುಗುಣವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಪಂಥಗಳಾಗಿ ವರ್ಗೀಕರಿಸಲಾಗಿದೆ. ಕ್ರಮೇಣ ಸ್ತ್ರೀ ಸಂವೇದನೆ, ದಲಿತ ಸಂವೇದನೆ, ಮುಸ್ಲಿಂ ಸಂವೇದನೆಗಳನ್ನು ಅಭಿವ್ಯಕ್ತಿಸುವಲ್ಲಿ ಕೂಡ ಅದು ತೀವ್ರ ಆಸಕ್ತಿಯನ್ನು ತೋರಿಸಿದೆ. 'ಏಣಿ' ಕವಿತೆಯಲ್ಲಿ ಸ್ತ್ರೀ ಸಂವೇದನೆ ಅಭ್ಯಿವ್ಯಕ್ತಿಯಾಗಿದೆ.

ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯ ಪಡೆದು ಪದವಿ, ಅಧಿಕಾರ, ಕೀರ್ತಿ, ಹಣ, ಗೌರವ, ಯಶಸ್ಸು ಪಡೆದು ವ್ಯಕ್ತಿ ಮೇಲೇರುತ್ತಾನೆ. ಹೀಗೆ ಮೇಲೇರಿದವನಿಗೆ ಅಹಂ ತುಂಬಿಕೊಳ್ಳುತ್ತದೆ. ತನ್ನ ಏಳಿಗೆಗೆ ಕಾರಣರಾದವರನ್ನು ಮರೆಯುತ್ತಾನೆ, ತಿರಸ್ಕರಿಸುತ್ತಾನೆ. ಹಣ, ಅಧಿಕಾರ, ಅಂತಸ್ತುಗಳು ಎಂದಿಗೂ ಶಾಶ್ವತವಲ್ಲ ಎಂಬುದನ್ನು ಅರಿತು ತನ್ನ ಏಳಿಗೆಗೆ ಕಾರಣರಾದವರನ್ನು ಗೌರವಿಸದಿದ್ದರೆ ತಮ್ಮ ವಿಪತ್ತಿಗೆ ತಾವೇ ಕಾರಣರಾಗುತ್ತಾರೆ ಎಂಬುದನ್ನು 'ಏಣಿ' ಕವಿತೆ ಪ್ರತಿಪಾದಿಸುತ್ತದೆ. ಪ್ರಸ್ತುತ ಕವಿತೆಯಲ್ಲಿ ರೂಪಕವಾಗಿ ಬಳಸಿರುವ ಏಣಿ ಹಲವು ಆಯಾಮಗಳಲ್ಲಿ ನಮ್ಮ ಕಲ್ಪನೆಯನ್ನು ವಿಸ್ತರಿಸುತ್ತಾ ಹೋಗುತ್ತದೆ.

ನಾನೊಂದು ಏಣಿ
ಎಷ್ಟೊಂದು ಜನರನ್ನು
ಎತ್ತಿ ಹಿಡಿದಿದ್ದೇನೆ !
ನನ್ನ ಮೇಲೆ ಹತ್ತಿ ಹೋದ
ಕೆಲವರು ನನಗೆ ಕೈ ಬೀಸಿದ್ದಾರೆ,
ನಾನೂ ನೋಡುತ್ತೇನೆ
ಹೇಗೆ ಇಳಿಯುತ್ತಾರೆಂದು.

ಮೇಲಂತಸ್ತು ಶಾಶ್ವತವಲ್ಲ
ಸುರಕ್ಷಿತವೂ ಅಲ್ಲ,
ನಾನು ಬುನಾದಿಯನ್ನೇ
ಕೆಡವುತ್ತೇನೆಂದರೆ:
ಏನು ಮಾಡುತ್ತಾರೆ
ಈ ತ್ರಿಶಂಕುಗಳು.

©KTBS Not to be republished

ಒಂದೊಂದು ಹೆಜ್ಜೆಯ ಭಾರ
ಹೊರುವಾಗ ನಾ
ಪಟ್ಟಪಾಡು ನನಗೇ ಗೊತ್ತು.
ಲೀಲಾಜಾಲವಾಗಿ ಮೇಲೇರಿದ
ಇವರಿಗೆ ಭಾರಹೊತ್ತವರ
ಕಾಳಜಿಯೇ ಇಲ್ಲ.
ಆನೆ ಭಾರ ಹೊತ್ತ ಗಟ್ಟಿನೆಲದಲ್ಲಿ ಕಾಲೂರಿನಿಂತ
ನನಗೆ ಬೀಳುವ ಭಯವಿಲ್ಲ.

ಕಾಲೂರುವ ನೆಲವನ್ನೇ
ತಿರಸ್ಕರಿಸಿದ ಇವರು
ಆಕಾಶದಲ್ಲಿ ಎಷ್ಟು ಹೊತ್ತು
ಹಾರಾಡುತ್ತಾರೆ?
ಮತ್ತೆ ನನ್ನ ಆಸರೆ ಬೇಕೇಬೇಕು.

ಆಗ,
ನಾನು ತಿರಸ್ಕರಿಸಿದರೆ
ಏನು ಮಾಡುತ್ತಾರೆ ಈ ಶಿಖಂಡಿಗಳು?
ಮೇಲೇರಿದ್ದೇನೆಂಬ
ಹಮ್ಮು ಕರಗಿ,
ಭೂಮಿ ಶಾಶ್ವತವೆಂಬ
ಅರಿವು ಮೂಡುವವರೆಗೆ
ನಾನವರಿಗೆ ನಿಲುಕುವುದಿಲ್ಲ.

ನಮ್ರತೆಗೆ ನಾ ಕರಗುತ್ತೇನೆ,
ಬೆಳೆಯ ಬಲ್ಲವರನ್ನು ಮಾತ್ರ
ಎತ್ತಿ ಹಿಡಿಯುತ್ತೇನೆ,
ನಾನೊಂದು ಏಣಿ.



* * * *

©KTBS Not to be republished



ಯಶಸ್ಸಿನ ಮೂಲಭೂತ ತತ್ತ್ವವೇನೆಂದರೆ ಹಿಡಿದ ಕೆಲಸವನ್ನು ಬಿಡದೆ ಮಾಡುವುದು – ವಾಲ್ಟೇರ್

## ಕೃತಿಕಾರರ ಪರಿಚಯ :



**ಸುಕನ್ಯಾ ಮಾರುತಿ** ಅವರು ೧೯೫೬ ರಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು ಎಂಬಲ್ಲಿ ಜನಿಸಿದರು. ಇವರು ದಲಿತ-ಬಂಡಾಯ ಕಾವ್ಯಮಾರ್ಗದ ಪ್ರಮುಖ ಕವಿಗಳಲ್ಲಿ ಒಬ್ಬರು. ಕರ್ನಾಟಕ ವಿಶ್ವವಿದ್ಯಾನಿಲಯದ ಎಂ.ಎ. ಪದವಿ ಪಡೆದು, ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿ ಕೆಲಸ ನಿರ್ವಹಿಸಿದ್ದಾರೆ.

ಇವರು 'ಪರಿಸರದಲ್ಲಿ', 'ಪಂಚಾಗ್ನಿಯ ಮಧ್ಯ', 'ನಾನು-ನನ್ನವರು', 'ತಾಜಮಹಲಿನ ಹಾಡು', 'ಬಿಂಬದೊಳಗಣ ಮಾತು', 'ನಾನೆಂಬ ಮಾಯೆ' ಇತ್ಯಾದಿ ಕವನ ಸಂಕಲನಗಳನ್ನು ಬರೆದಿದ್ದಾರೆ. 'ಏಣಿ' ಕವನವನ್ನು ಅವರ **'ಸಮಗ್ರ ಕವನ ಸಂಕಲನ'** ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಅಭ್ಯಾಸ

## I. ಪದಗಳ ಅರ್ಥ :

**ಆಸರೆ** – ಆಶ್ರಯ

**ಕರಗು** – ಸ್ಪಂದಿಸು

**ತ್ರಿಶಂಕು** – ಇಕ್ಕಟ್ಟಿನಲ್ಲಿ ಸಿಲುಕಿದವ

**ಪಾಡು** – ಅವಸ್ಥೆ; ಸ್ಥಿತಿ.

**ಶಿಖಂಡಿ** – ನಪುಂಸಕ

**ಏಣಿ** – ಮೇಲೇರಲು ಬಳಸುವ ಸಾಧನ; ನಿಚ್ಚಣಿಕೆ.

**ಕಾಳಜಿ** – ಜಾಗರೂಕತೆ; ಆಸಕ್ತಿ; ತುಡಿತ.

**ನಮ್ರತೆ** – ವಿನಯ; ವಿಧೇಯ; ಬಾಗಿದ.

**ಬುನಾದಿ** – ತಳಪಾಯ; ಅಡಿಪಾಯ.

**ಹಮ್ಮು** – ಸೊಕ್ಕು; ಮದ.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಏಣಿ ಜನರಿಗೆ ಮಾಡಿದ ಉಪಕಾರವೇನು?

೨. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು?

೩. ಕವಯತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?

೪. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ?

೫. ಏಣಿಗೆ ಬೀಳುವ ಭಯವಿಲ್ಲ ಏಕೆ?

Not to be republished ©KTBS



ಅದೃಷ್ಟದ ಮೂಲಕ ಜ್ಞಾನ ಪಡೆಯಲು ಸಾಧ್ಯವಿಲ್ಲ; ಆದರೆ ಜ್ಞಾನದ ಮೂಲಕ ಅದೃಷ್ಟವನ್ನು ಪಡೆಯಬಹುದು-ಅಮೇರಿಕಾದ ನಾಣ್ಣುಡಿ

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು?

೨. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

೩. ಮೇಲೇರಿದವನಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ?

೪. ಏಣಿ ತಾನು ಎಂಥವರಿಗೆ ಯಾವರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?

**ಇ) ಸುಮಾರು ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಏಣಿ ಕವಿತೆ ನೀಡುವ ಸಂದೇಶವೇನು?

೨. ಏಣಿ ಹೇಳಿಕೊಳ್ಳುವ ಸಂಕಟ ಹಾಗೂ ಹಾಕುವ ಸವಾಲುಗಳೇನು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು

೨. ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ

೩. ನಾನು ತಿರಸ್ಕರಿಸಿದರೆ ಏನು ಮಾಡುತ್ತಾರೆ ಈ ಶಿಖಂಡಿಗಳು?

೪. ನಮ್ರತೆಗೆ ನಾ ಕರಗುತ್ತೇನೆ.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ತಿರಸ್ಕಾರ, ನಮ್ರತೆ, ಸುರಕ್ಷಿತ, ಕಾಳಜಿ.

**ಆ) ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರು ಬರೆಯಿರಿ.**

ಕೈಬೀಸು, ಮೇಲಂತಸ್ತು, ಆನೆಭಾರ.

**ಇ) ಕೆಳಗೆ ನೀಡಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ತಿರಸ್ಕಾರ, ಶಾಶ್ವತ, ಇಳಿ, ಸುರಕ್ಷಿತ, ಭಾರ, ಭಯ, ಕೆಡವು.

## IV. ಚಟುವಟಿಕೆಗಳು :

೧. ಪತ್ರಿಕೆಗಳಲ್ಲಿ ಬರುವ ಕವಿತೆಗಳನ್ನು ಓದಿರಿ. ಅವು ಗದ್ಯದ ಸಾಲಿಗಿಂತ ಹೇಗೆ ಭಿನ್ನವಾಗಿರುತ್ತವೆ ಎಂಬುದನ್ನು ಗಮನಿಸಿ

೨. 'ಏಣಿ' ವಿಷಯ ಕುರಿತು ಪ್ರಬಂಧ ಬರೆಯಿರಿ.



ಬದುಕನ್ನು ಬೆಳಗಿಸಲು ಪುಸ್ತಕಗಳೇ ದಾರಿದೀಪ – ರವೀಂದ್ರನಾಥ ಠಾಗೋರ್

©KTBS Not to be republished

# ೨. ಬೋಧಿವೃಕ್ಷದ ಹಾಡು

– ಬಸವರಾಜ ಸಬರದ

**ಪಾಠ ಪ್ರವೇಶ :** ಜಗತ್ತಿನ ಸಕಲ ಚರಾಚರಗಳಲ್ಲಿ ಮಾನವನ ಜೀವನ ಅತ್ಯಂತ ಶ್ರೇಷ್ಠವಾದುದು. ಮಾನವನ ಜೀವನ ಸಾರ್ಥಕತೆ ಪಡೆಯಬೇಕಾದರೆ ಮೊದಲು ತನ್ನನ್ನು ತಾನು ಅರಿತುಕೊಳ್ಳಬೇಕು. ಆತ್ಮಸಾಕ್ಷಾತ್ಕಾರ ಹೊಂದಬೇಕು. ನಂತರ ಸಮಾಜದ ಅಂಕುಡೊಂಕುಗಳನ್ನು ತಿದ್ದುವ, ಜನರ ದುಃಖವನ್ನು ಪರಿಹರಿಸುವ ದಿಕ್ಕಿನಲ್ಲಿ ಜೀವನವನ್ನು ಮುಡುಪಾಗಿರಿಸಬೇಕು. ಈ ರೀತಿ ಬಾಳಿಬದುಕಿದವರಲ್ಲಿ ಗೌತಮಬುದ್ಧನು ಒಬ್ಬನು. ಲೌಖಿಕ ಸುಖಭೋಗಗಳಿಂದ ಜೀವನದ ಗುರಿ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತ ಬುದ್ಧನು ಗೃಹಸ್ಥ ಜೀವನವನ್ನು ತ್ಯಜಿಸಿ, ಬದುಕಿನ ಸತ್ಯ ಕಾಣಲು ಕಾಡನ್ನು ಅಲೆದು, ಬೋಧಿವೃಕ್ಷದ ಕೆಳಗೆ ತಪಸ್ಸನ್ನು ಆಚರಿಸಿ, ಮಹಾಜ್ಞಾನಿಯಾಗಿ, ಜೀವನ ಪ್ರೀತಿಯತ್ತ ಸಾಗಿದ ರೀತಿಯೇ ಕವನದ ತಿರುಳಾಗಿದೆ. ಬುದ್ಧನಂತೆಯೇ ಪ್ರತಿಯೊಬ್ಬರೂ ತನ್ನ ತಾನು ಅರಿಯುವುದರೊಂದಿಗೆ ಬದುಕಿನ ನಿಜವಾದ ಅರ್ಥ ತಿಳಿದು, ಜೀವನ ಮೌಲ್ಯಗಳನ್ನು ರೂಢಿಸಿಕೊಂಡು, ಸಮಾಜದಲ್ಲಿ ಒಂದಾಗಿ ಬಾಳಬೇಕು. ಜೀವ ಪ್ರೀತಿಯ ಎದುರು ಎಲ್ಲವೂ ನಶ್ವರ ಎಂಬ ನಿಜ ಸಂಗತಿಯನ್ನು ಬುದ್ಧನ ಜೀವನ ವೃತ್ತಾಂತದ ಮೂಲಕ ಕವಿ ಹೇಳುತ್ತಿದ್ದಾರೆ.

©KTBS Not to be republished

ಸಿದ್ಧಾರ್ಥ ಬುದ್ಧನಾದ ಪರಿಯ ನೀವು ತಿಳಿಯಿರೆ
ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯ ನೀವು ಕೇಳಿರೆ ॥ ಪ ॥

ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು।
ಅರಮನೆಯ ಮೋಹವನ್ನು ಹರಿದುಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು ॥ ೧ ॥

ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು।
ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು ॥ ೨ ॥





ಅನ್ಯಭಾಷೆಯನ್ನು ತೆಗಳುತ್ತಿರುವವನು ತನ್ನ ಭಾಷೆಯಲ್ಲೂ ಅಜ್ಞಾನಿಯಾಗಿರುತ್ತಾನೆ – ಗಯಟೆ

ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು
ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು।
ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆಯಿತು
ಬೆಳ್ಳಕ್ಕಿ ಹಿಂಡುಗಟ್ಟಿ ಬಾನಿಗೇಣಿ ಹಾಕಿತು ॥ ೩ ॥

ಕಾಡತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು
ಗೂಡಿನಲ್ಲಿ ಹಾಡು ಹುಟ್ಟಿ ಹೊಸರಾಗ ಕೇಳಿತು।
ಮಕರಂದ ಸವಿಯಲೆಂದು ದುಂಬಿ ಹೂವ ಸೇರಿತು
ಗಿಡಗಿಡವೂ ಅಪ್ಪಿಕೊಂಡು ಕುಣಿಯುವಂತೆ ಕಂಡಿತು ॥ ೪ ॥

ಕಾಡಿನಿಂದ ಎದ್ದ ಅವನು ನಾಡಿನತ್ತ ಹೊರಟನು
ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು।
ತಪಸಿಗಿಂತ ಜೀವಪ್ರೀತಿ ದೊಡ್ಡದೆಂದು ತಿಳಿದನು
ಬದುಕಿನ ಗೂಢಾರ್ಥವರಿತು ಬುದ್ಧನಾಗಿ ಬಂದನು ॥ ೫ ॥

****

## ಕೃತಿಕಾರರ ಪರಿಚಯ :



**ಡಾ. ಬಸವರಾಜ ಸಬರದ** ಅವರು ದಿನಾಂಕ ೧೯೫೪ ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ಜನಿಸಿದರು. ಇವರು 'ಬಸವೇಶ್ವರ ಮತ್ತು ಪುರಂದರದಾಸರು: ಒಂದು ಸಾಂಸ್ಕೃತಿಕ ಅಧ್ಯಯನ' ಎನ್ನುವ ಪ್ರೌಢ ಪ್ರಬಂಧಕ್ಕೆ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಇವರು ಅಸ್ಪೃಶ್ಯತಾ ನಿವಾರಣೆ, ದೇವದಾಸಿ ವಿಮೋಚನಾ ಹೋರಾಟ, ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ, ದಲಿತ-ಬಂಡಾಯ ಚಳುವಳಿಯ ನೇತಾರರಾಗಿ ಹಲವಾರು ಜನಪರ ಹೋರಾಟದಲ್ಲಿ ಭಾಗಿಯಾಗಿದ್ದಾರೆ.

'ನನ್ನವರ ಹಾಡು', 'ಹೋರಾಟ,' 'ಮೂಡಲಕ ಕೆಂಪು ಮೂಡ್ಯಾವ', 'ನೂರು ಹನಿಗಳು', 'ದನಿಯೆತ್ತಿ ಹಾಡೇನ', 'ಬೆಳದಿಂಗಳು ಬಿಸಿಲಾತು' - ಇವು ಅವರ ಕವನ ಸಂಕಲನಗಳು. 'ಪ್ರತಿರೂಪ', 'ರೆಕ್ಕೆ ಮೂಡಿದಾಗ', 'ನರಬಲಿ', 'ಬೆಳ್ಳಕ್ಕಿ ಸಾಲು' - ಇವು ಅವರು ಬರೆದ ಪ್ರಮುಖ ನಾಟಕಗಳು.

ಇವರಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ಕುವೆಂಪು ಸಾಹಿತ್ಯ ಪುರಸ್ಕಾರ, ಪೆರ್ಲ ಕೃಷ್ಣಭಟ್ಟ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ, ಸಾಹಿತ್ಯ ಶ್ರೀ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಇತ್ಯಾದಿಗಳು ಲಭಿಸಿವೆ. ಪ್ರಸ್ತುತ ಕವನವನ್ನು ಅವರ **'ಪದಕಟ್ಟಿ ಹಾಡೇನ'** ಕವನ ಸಂಕಲನದಿಂದ ಆರಿಸಲಾಗಿದೆ.

©KTBS Not to be republished



ಕಬ್ಬಿಣವು ತುಕ್ಕಿನಿಂದ ನಾಶವಾಗುವಂತೆ ಮಾನವನು ಅಸೂಯೆಯಿಂದ ಹಾಳಾಗುತ್ತಾನೆ - ಟಿ.ಎಸ್.ಫಯಾಸ್

## ಅಭ್ಯಾಸ

### I. ಪದಗಳ ಅರ್ಥ :

**ಅಡವಿ** – ಕಾಡು; ಅರಣ್ಯ; ಕಾನನ.
**ಕೋಡಿ** – ಕೆರೆತುಂಬಿ ಹರಿಯುವುದು.
**ಗೂಢಾರ್ಥ** – ಒಳ ಅರ್ಥ; ರಹಸ್ಯವಾದುದು.
**ಪರಿ** – ರೀತಿ; ಸ್ಥಿತಿ.
**ಬೋಧಿವೃಕ್ಷ** – ಅರಳಿಮರ; ಅಶ್ವತ್ಥವೃಕ್ಷ.
**ಮಡದಿ** – ಪತ್ನಿ; ಹೆಂಡತಿ.
**ಹಿಂಡು** – ಗುಂಪು; ಸಮೂಹ.
**ಏಕಾಂಗಿ** – ಒಬ್ಬಂಟಿ
**ಗುಟುಕು** – ಹಕ್ಕಿಗಳು ತನ್ನ ಮರಿಯ ಬಾಯಿಗೆ ಆಹಾರ ನೀಡುವ ರೀತಿ.
**ತೊರೆದು** – ಬಿಟ್ಟುಬಿಡು
**ಬೆಳ್ಳಿಚುಕ್ಕಿ** – ಬೆಳಗ್ಗೆ ಆಕಾಶದಲ್ಲಿ ಕಾಣುವ ಶುಕ್ರಗ್ರಹ.
**ಮಕರಂದ** – ಹೂವಿನ ರಸ
**ಮೋಹ** – ಆಸೆ
**ಹುತ್ತ** – ಹಾವಿನ ಗೂಡು; ಗೆದ್ದಲು ಮಣ್ಣಿನ ಗೂಡು.

### II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?

೨. ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?

೩. ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು?

೪. ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು?

೫. ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಢಾರ್ಥವೇನು?

೬. ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?

೭. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?

೨. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?

©KTBS Not to be republished

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸಿದ್ಧಾರ್ಥನು ಬುದ್ಧನಾದ ಪರಿ ಹೇಗೆ?

೨. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡುಬಂದಿತು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು.

೨. ಕಾಡತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು

೩. ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು.

## III. ಭಾಷಾಭ್ಯಾಸ :

**ಅ) ಕೆಳಗಿನ ಸಮಾಸ ಪದಗಳನ್ನು ವಿಗ್ರಹವಾಕ್ಯ ಮಾಡಿ, ಸಮಾಸದ ಹೆಸರು ತಿಳಿಸಿರಿ.**

ಮಧ್ಯರಾತ್ರಿ, ಅರಮನೆ, ಹೊಸರಾಗ, ಹಿಂಡುಗಟ್ಟಿ.

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಮೋಹ, ಜೀವಪ್ರೀತಿ, ಗೊತ್ತುಗುರಿ, ಮಹಾಬೆಳಕು.

**ಇ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ.**

ಯುದ್ಧ, ವೀರ, ಅಡವಿ, ಹಕ್ಕಿ.

**ಈ) ಕೆಳಗಿನ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.**

ಹಿಂಡು, ಹೊಳೆ, ತೊರೆ, ಕಾಡು, ಅಲೆ.

## IV. ಚಟುವಟಿಕೆಗಳು :

೧. ಗೌತಮಬುದ್ಧನ ಜೀವನ ಚರಿತ್ರೆಯನ್ನು ಓದಿರಿ.

೨. ಈ ಪದ್ಯದ ೧ ನೇ ಮತ್ತು ೨ ನೇ ಕಂಡಿಕೆಗಳನ್ನು ಕಂಠಪಾಠ ಮಾಡಿರಿ.

೩. ಬದುಕಿನಲ್ಲಿ ಶಾಂತಿಯ ಮಹತ್ವ ಹಾಗೂ ಶಾಂತಿಯನ್ನು ಕಂಡುಕೊಳ್ಳುವ ಬಗೆಯನ್ನು ಕೇಳಿ ತಿಳಿಯಿರಿ.

©KTBS Not to be republished

# ೩. ಸವಿಚೈತ್ರ

– ಬಸವರಾಜ ಸಾದರ

**ಪಾಠ ಪ್ರವೇಶ :** ವರ್ಷದ ಆರಂಭಕ್ಕೆ ಎಲ್ಲ ದಿನಗಳೂ ಶ್ರೇಷ್ಠವೇ. ಪಾಶ್ಚಾತ್ಯರು ಜನವರಿ ಒಂದನ್ನು ಹೊಸವರ್ಷದ ಮೊದಲದಿನ ಎಂದು ಭಾವಿಸಿದರೆ, ಭಾರತೀಯರು ಯುಗಾದಿಗೆ ಮಹತ್ವ ನೀಡುತ್ತಾರೆ. ಯುಗಾದಿ ಹಳತನ್ನು ಮರೆತು, ಹೊಸತನ್ನು ಹೊತ್ತು ತರುವ ಸಂಭ್ರಮದ ದಿನ. ಬದುಕಿನ ಕಷ್ಟ ಸುಖಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಸಂದೇಶವನ್ನು ಬೇವು-ಬೆಲ್ಲ ಹಂಚುವ ಮೂಲಕ ಪರಸ್ಪರ ವಿನಿಮಯ ಮಾಡಿಕೊಳ್ಳುತ್ತೇವೆ. ಯುಗಾದಿಯು ಚಾಂದ್ರಮಾನದ್ದೇ ಇರಲಿ, ಸೌರಮಾನದ್ದೇ ಇರಲಿ, ಅದು ಚೈತ್ರಮಾಸದಲ್ಲೆ ಬರುತ್ತದೆ. ಚೈತ್ರವೆಂದರೆ ವಸಂತ, ವಸಂತನೆಂದರೆ ಋತುಗಳ ರಾಜ. ಈ ಋತುವಿನಲ್ಲಿ ಫಲಪುಷ್ಪಗಳು ಸಮೃದ್ಧವಾಗಿರುತ್ತವೆ. ವಸಂತವು ಕವಿಗಳ ಮೆಚ್ಚಿನ ಕಾಲವೂ ಹೌದು. ವಸಂತದ ಸೊಬಗನ್ನು ಬಣ್ಣಿಸದ ಕವಿಯೇ ಇಲ್ಲ. ಕವಿಗಳ ನಿರೀಕ್ಷೆ, ಸಂದೇಶಗಳು ಒಂದೇ ಆಗಿದ್ದರೂ ಕವಿಕಲ್ಪನೆ, ಪದವಿನ್ಯಾಸಗಳಲ್ಲಿ ಹೊಸತನವಿರುತ್ತದೆ. ಪ್ರಸ್ತುತ ಕವಿತೆಯಲ್ಲೂ ಚೈತ್ರದ ಸೊಬಗನ್ನು ವರ್ಣಿಸಲಾಗಿದೆ.

ಯುಗದ ಆದಿಯು ಬಂತು ಸೊಗದ ಸುಗ್ಗಿಯ ತಂತು
ಜಗಕೆಲ್ಲ ಹೊಸ ಕಳೆಯು ತುಂಬಿತೆಂತು!
ಬಗೆ ಬಗೆಯ ಬಣ್ಣಗಳ ಬರೆದ ಚಿತ್ರದ ಹಾಗೆ
ನೆಲದಮ್ಮ ನವವಧುವೆ ಆದಳಿಂತು!

ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ.

ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು
ಲಗುಬಗೆಯ ದಗದಕ್ಕೆ ಹೊರಟಂತಿದೆ
ಹೊಸತು ಜೀವೋಲ್ಲಾಸ ಚಿಗಿತ ಭಾವವಿಲಾಸ
ನೆಲ ಮುಗಿಲ ವಾಲಗವೆ ನಡೆದಂತಿದೆ.





© KTBS Not to be republished



ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು.

* * * *

## ಕೃತಿಕಾರರ ಪರಿಚಯ :



**ಬಸವರಾಜ ಸಾದರ** ಇವರು ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ೧೯೫೫ ರಂದು ಜನಿಸಿದರು. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದು, ನಂತರ 'ಬಸವರಾಜ ಕಟ್ಟೀಮನಿಯ ಕಾದಂಬರಿಗಳು' ವಿಷಯದ ಮೇಲೆ ಪ್ರೌಢ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಇವರು ಬೆಂಗಳೂರು ಆಕಾಶವಾಣಿ ಕೇಂದ್ರದ ವಿವಿಧ ಭಾರತಿಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರು 'ಸಿಸಿಫಸರ ಸುತ್ತು'(ಕವನ ಸಂಕಲನ), 'ತಪ್ಪಂಡ'(ಕಥಾಸಂಕಲನ), 'ಹೊಸ ಆಲೋಚನೆ'(ವಿಮರ್ಶೆ), 'ಮೃದುವಾಗಿ ಮುಟ್ಟು' (ಪ್ರಬಂಧ) ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಅ.ಭಾ. ಆಕಾಶವಾಣಿ ಸ್ಪರ್ಧೆ ಬಹುಮಾನ, ಜಯತೀರ್ಥ ರಾಜಪುರೋಹಿತ ಸ್ಮಾರಕ ಬಹುಮಾನ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಗಳು ಬಂದಿವೆ. ಇವರ **'ಸಿಸಿಫಸರ ಸುತ್ತು'** ಕವನ ಸಂಕಲನದಿಂದ ಪ್ರಸ್ತುತ ಪದ್ಯವನ್ನು ಆಯ್ದುಕೊಳ್ಳಲಾಗಿದೆ.

©KTBS Not to be republished

**ಟಿಪ್ಪಣಿ :**

**೧. ಬೆಲ್ಲ ಬೇವಿಗೆ ಸೇರಿ :** ಸಂಕ್ರಾಂತಿಯಂದು ಎಳ್ಳು ಬೆಲ್ಲ ಹೇಗೋ ಹಾಗೆಯೇ ಯುಗಾದಿಯಂದು ಬೇವು ಬೆಲ್ಲವನ್ನು ತಿಂದು, ಬರಲಿರುವ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಸಂಕಲ್ಪ ಮಾಡುವ ಆಚರಣೆ.

**೨. ಸಿಸಿಫಸ್ :** ಈತ ಗ್ರೀಕ್ ದೊರೆ. ಪ್ರಾಣಾಪಾಯದಿಂದ ನಾಲ್ಕುಬಾರಿ ಪಾರಾಗಿ, ಮೃತ್ಯುವನ್ನು ಗೆಲ್ಲಲೇಬೇಕೆಂದು ದೈವದ ಮೊರೆಹೋಗುತ್ತಾನೆ. ಆಗ ದೈವವು ಚೂಪಾದ ಬೆಟ್ಟದ ಮೇಲೆ ದೊಡ್ಡ ಬಂಡೆಯನ್ನು ನಿಲ್ಲಿಸು ಎಂದು ಹೇಳುತ್ತದೆ. ಆ ಪ್ರಯತ್ನದಲ್ಲಿ ರಾಜನು ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದಾನೆ. ಸೋತರೂ ಆ ಕಾರ್ಯದಲ್ಲಿ ಈಗಲೂ ತೊಡಗಿದ್ದಾನೆ ಎಂಬುದು ಗ್ರೀಕರ ನಂಬುಗೆ.

## ಅಭ್ಯಾಸ

## I. ಪದಗಳ ಅರ್ಥ :

**ಆದಿ** – ಮೊದಲು
**ಕೊರಡು** – ಒಣ ಮರದ ತುಂಡು.
**ಖಗ** –(ಖ–ಆಕಾಶ, ಗ–ಗಮಿಸುವುದು) ಹಕ್ಕಿ
**ಚೈತನ್ಯ** – ಚಟುವಟಿಕೆ
**ದಗದ** – ಕೆಲಸ
**ಮತ್ತು** – ಮಾದಕತೆ
**ಮುಗುಳು** – ಮೊಗ್ಗು
**ವಾಲಗ** – ಓಲಗ; ವಾದ್ಯ
**ಕಲರವ** – ಮೋಹಕ ಧ್ವನಿ
**ಕೊನರು** – ಚಿಗುರು
**ಚಿಗಿತ** – ಚಿಗುರಿದ
**ತಾರಕ** – ಎತ್ತರದ ಸ್ವರ (ಪಾರು ಮಾಡುವವನು)
**ನೆಲದವ್ವ** – (ನೆಲದ ಅವ್ವ) ಭೂಮಿತಾಯಿ
**ಮುಕ್ತ** – ಬಿಡುಗಡೆ ಹೊಂದಿದ
**ವಧು** – ಮದುಮಗಳು

## II. ಪ್ರಶ್ನೆಗಳು :

**ಅ) ಕೆಳಗೆ ನೀಡಲಾಗಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?

೨. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?

೩. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ?

೪. ಚೈತ್ರದ ಸೊಬಗು ಏನು?

೫. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?



©KTBS Not to be republished

ದಾನಧರ್ಮ ಮಾಡಿ ಬಡವರಾದವರು ಯಾರೂ ಇಲ್ಲ – ಇಟಲಿ ನಾಣ್ಣುಡಿ

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಯುಗದ ಆದಿ ತಂದ ಸಂಭ್ರಮವೇನು?

೨. ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ?

೩. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?

೪. ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಚೈತ್ರದಲ್ಲಾಗುವ ಪ್ರಕೃತಿಯ ಬದಲಾವಣೆಗಳಾವುವು?

೨. ಕವಿ ಯುಗದ ಆದಿಯನ್ನು ಸವಿಚೈತ್ರ ಎಂದು ಏಕೆ ಬಣ್ಣಿಸಿದ್ದಾರೆ?

**ಈ) ಸಂದರ್ಭದೊಡನೆ ವಿವರಿಸಿ.**

೧. ನೆಲದಮ್ಮ ನವವಧುವೆ ಆದಳಿಂತು!

೨. ನೆಲ ಮುಗಿಲ ವಾಲಗವೆ ನಡೆದಂತಿದೆ.

೩. ಎಲ್ಲರೆದೆಗಳ ತುಂಬ ಸವಿಚೈತ್ರವು.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ, ಸಮಾಸದ ಹೆಸರು ತಿಳಿಸಿರಿ.**

ಯುಗಾದಿ, ಮೈಕೊಡವಿ, ಸವಿಚೈತ್ರ. ನೆಲಮುಗಿಲು.

**ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ.**

ಆದಳಿಂತು, ಜೀವೋಲ್ಲಾಸ, ಎಲ್ಲರೆದೆ, ನೆಲದಮ್ಮ.

**ಇ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ.**

ಮುಖ, ಪಕ್ಷಿ, ಬಣ್ಣ, ಖಗ.

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಸಿಹಿ, ಆದಿ, ನೆಲ, ಹೊಸತು, ತುದಿ.

## IV. ಚಟುವಟಿಕೆ :

**೧. ಸವಿಚೈತ್ರ ಪದ್ಯದ ಈ ಕೆಳಗಿನ ಭಾಗಗಳನ್ನು ಕಂಠಪಾಠ ಮಾಡಿರಿ.**

ಕೊರಡ ಕೊನಸಿರಿ.............................. ಕಲರವಕೆ ಮತ್ತೇರಿದೆ.

ಯುಗದ ಹಿಂದಿನ............................ ತುಂಬ ಸವಿಚೈತ್ರವು.





©KTBS Not to be republished

# ೪. ಸದ್ದು ಮಾಡದಿರು !

– ಸಿ. ಪಿ. ಕೃಷ್ಣಕುಮಾರ್

**ಪಾಠ ಪ್ರವೇಶ:** ಆಡಂಬರ, ಪ್ರದರ್ಶನ ಇವುಗಳಿಗೆ ಜನ ಮನಸೋಲುವುದು ಸಾಮಾನ್ಯ. ಸಂಪತ್ತು, ಹೆಸರು, ಕೀರ್ತಿ ಇವುಗಳನ್ನು ಪಡೆಯುವುದೇ ಜೀವನದ ಸಾರ್ಥಕ್ಯವೆಂದು ಬಹಳಷ್ಟು ಮಂದಿ ತಿಳಿದಿದ್ದಾರೆ. ಆದರೆ ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ಯಾವುದೇ ಸದ್ದುಗದ್ದಲವಿಲ್ಲದೆ ತನ್ನೆಲ್ಲಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇರುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿರುವುದು, ಕಾಮನ ಬಿಲ್ಲು ಗೋಚರವಾಗುವುದು, ಪುಷ್ಪವು ಅರಳಿ ಪರಿಮಳ ಸೂಸುವುದು, ಕಾಯಿಗಳು ಮಾಗಿ ರಸಭರಿತ ಹಣ್ಣು ಆಗುವುದು ಇಂತಹ ನೂರಾರು ಅದ್ಭುತ ರಮ್ಯಗಳು ಪ್ರಕೃತಿಯಲ್ಲಿ ನಿತ್ಯ ನಿರಂತರವಾಗಿರುತ್ತವೆ. ಅವು ಎಂದಿಗೂ ತಮ್ಮ ಕಾರ್ಯದ ಬಗ್ಗೆ ಹೇಳಿಕೊಂಡಿದ್ದಿಲ್ಲ. ಆದರೆ ಮಾನವ ಸಣ್ಣ ಕೆಲಸವನ್ನೂ ದೊಡ್ಡದಾಗಿ ತನ್ನಿಂದಲೇ ಸಾಧ್ಯವಾಗಿದ್ದು ಎಂದು ಪ್ರಚಾರಮಾಡಿಕೊಳ್ಳುತ್ತಾನೆ. ಹೀಗಾಗಿ ಮಾನವ ತನ್ನ ಅಹಂ ತೊರೆದು ಶಾಂತಿ, ಸಹನೆ, ಪ್ರೀತಿಗಳಿಂದ ಕರ್ತವ್ಯವನ್ನು ಮೌನವಾಗಿ ಮಾಡಿ ಮುಗಿಸಬೇಕು – ಎಂಬ ಸಂದೇಶ ಇಲ್ಲಿದೆ.

ಸದ್ದು ಮಾಡದೆ ಬಾಳು ಬಾಳೆಲವೊ ಜೀವ;
ಗದ್ದಲದ ಬಿರುದಿರದೆ ಸೇರು ರೇವ!

ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು,
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕಿನೀ ಕರ್ತವ್ಯವನು ಮುಗಿಸು;
ಕೂಗಾಡಿ, ಹಾರಾಡಿ ಫಲವದೇನು?

ಹಸಿಸೌದೆ ಬುಸುಗುಟ್ಟಿ ದನಿಯನೆತ್ತುವುದಲ್ತೆ,
ಕಿಡಿ ಸೋಕೆ ಮದ್ದು ಸಿಡಿದಬ್ಬರಿಪುದು –
ಅಂತಿರದೆ ರವಿಕರಕೆ ಕರಗುವಿಬ್ಬನಿವೊಲಿರು;
ಸಿಡುಕು ಮಿಡುಕನು ತೊರೆದು ಮೌನಿಯಾಗು!

* * * *



ಒಳ್ಳೆಯ ಕೆಲಸವನ್ನು ಮಾಡಲಿಚ್ಛಿಸುವವನು ಅದರಿಂದ ತನಗೇನು ಲಾಭ ಎಂದು ಯೋಚಿಸಬಾರದು – ಎಪಿಕ್ಟಾಟಸ್

©KTBS Not to be republished

## ಕೃತಿಕಾರರ ಪರಿಚಯ :



**ಸಿ.ಪಿ.ಕೆ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ಚಿಕ್ಕನಾಯಕನಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್ ಅವರು ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನ ಹಳ್ಳಿಯಲ್ಲಿ ೧೯೩೯ರಲ್ಲಿ ಜನಿಸಿದರು. ಇವರು 'ನಾಗವರ್ಮನ ಕರ್ನಾಟಕ ಕಾದಂಬರಿ– ತೌಲನಿಕ ಮತ್ತು ವಿಮರ್ಶಾತ್ಮಕ ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಪಿಹೆಚ್.ಡಿ. ಪದವಿ ಪಡೆದಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲಿ ತಮ್ಮ ಕವನಕ್ಕಾಗಿ ಬಿ.ಎಂ.ಶ್ರೀ. ಅವರ ರಜತೋತ್ಸವ ಸುವರ್ಣಪದಕವನ್ನು ಪಡೆದಿದ್ದರು. 'ತಾರಾ ಸುಖ' ಇವರ ಮೊಟ್ಟಮೊದಲ ಕವನ ಸಂಕಲನ. ಸಿಪಿಕೆ ಅವರ ಮುಖ್ಯ ಕೃತಿಗಳೆಂದರೆ – 'ಅನಂತಪೃಥ್ವೀ', 'ಬೊಗಸೆ', 'ಕನ್ನಡ ಚತುರ್ಮುಖ', 'ಕಾವ್ಯಾರಾಧನಾ', 'ಜನಪದ ಪ್ರತಿಭೆ', 'ಪರಿಭಾವನೆ', 'ಸಾಹಿತ್ಯ ತತ್ವಗಳು', 'ಪಾಶ್ಚಾತ್ಯ ಕಾವ್ಯಚಿಂತನ', 'ಕನ್ನಡ ನಾಗಾನಂದ', 'ಕನ್ನಡ ರತ್ನಾವಳಿ' – ಮುಂತಾಗಿ ಸುಮಾರು 300 ಕೃತಿಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯದ ಬಹುಮುಖ ಕೊಡುಗೆಗಾಗಿ ಸಂದ ಪ್ರಶಸ್ತಿಗಳು ಹಲವಾರು. ಮುಖ್ಯವಾಗಿ– ಬಸವ ಸಾಹಿತ್ಯ ಶ್ರೀ, ವಿದ್ವತ್ ಶಿರೋಮಣಿ, ಹನಿಗವನ ಹರಿಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಚುಟುಕ ರತ್ನ ಪ್ರಶಸ್ತಿ, ಇತ್ಯಾದಿ. ಇವರು ೨೦೧೧ ರಲ್ಲಿ ಗಂಗಾವತಿಯಲ್ಲಿ ನಡೆದ ಎಪ್ಪತ್ತೆಂಟನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಕವನವನ್ನು ಅವರ **'ಬೊಗಸೆ'** ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಅಭ್ಯಾಸ

### I. ಪದಗಳ ಅರ್ಥ :

**ಇಬ್ಬನಿ** – ಮಂಜಿನ ಹನಿ

**ಒಲು** (ಅವ್ಯಯ) – ಅಂತೆ

**ತೊರೆ** (ಕ್ರಿ) –ಬಿಡು; ತ್ಯಜಿಸು(ನಾ); ಹೊಳೆ; ನದಿ.

**ಬಿರುದು** – ಪ್ರಶಸ್ತಿ

**ಮಿಡುಕು** – ನಡುಗು

**ರೇವು** – ಬಂದರು; ಹಡಗು ನಿಲ್ಲುವ ಸ್ಥಳ.

**ಅಲ್ತೆ** (ಅವ್ಯಯ) – ಅಲ್ಲವೆ

**ತಿಮಿರ** – ಕತ್ತಲೆ; ಅಜ್ಞಾನ.

**ಧ್ವನಿ**(ತ್ಸ) – ದನಿ(ದ್ಭ).

**ಮದ್ದು** – ಸಿಡಿಯುವ ವಸ್ತು; ಸಿಡಿಮದ್ದು.

**ರವಿಕರ** – ಸೂರ್ಯಕಿರಣ

**ಸೋಂಕು** – ಸೋಕು; ತಾಗು.

©KTBS Not to be republished

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

೧. 'ಸದ್ದು ಮಾಡದಿರು' ಕವಿತೆಯ ಆಕರ ಕೃತಿ ______________

೨. ಸಿಪಿಕೆ ಅವರ ಪೂರ್ಣ ಹೆಸರು ______________

೩. ತಿಮಿರ ಪದದ ಅರ್ಥ ______________

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ತಿಮಿರಕ್ಕೆ ವೈರಿ ಯಾವುದು?

೨. ಕವಿ ಮಾನವನ ಬದುಕನ್ನು ಇಬ್ಬನಿಯಂತೆ ಇರಬೇಕು ಎಂದು ಏಕೆ ಬಯಸುತ್ತಾರೆ?

೩. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು?

೨. ಕೂಗಾಟದ ಬದುಕು ನಿಷ್ಪ್ರಯೋಜಕ ಎಂಬುದಕ್ಕೆ ಕವಿ ನೀಡುವ ನಿದರ್ಶನಗಳಾವುವು?

೩. ಕರ್ಪೂರದ ಕೆಲಸವೇನು? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ?

೪. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸದ್ದು ಮಾಡದಿರು-ಕವಿತೆ ನೀಡುವ ಸಂದೇಶವೇನು?

೨. ಸದ್ದುಮಾಡದೆ ಬಾಳಬೇಕು ಎಂಬುದನ್ನು ಕವಿ ಯಾವ ಯಾವ ನಿದರ್ಶನಗಳ ಮೂಲಕ ತಿಳಿ ಹೇಳಿದ್ದಾರೆ?

೩. ಬದುಕಿನಲ್ಲಿ ಶಾಂತಿ ಮತ್ತು ಸದ್ದು ಇವುಗಳಲ್ಲಿ ಯಾವುದು ಹೆಚ್ಚು ಸುಖ ನೀಡುತ್ತದೆ? ಏಕೆ?

**ಉ) ಸಂದರ್ಭದೊಡನೆ ವಿವರಿಸಿರಿ.**

೧. ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು.

೨. ಸಿಡುಕು ಮಿಡುಕನು ತೊರೆದು ಮೌನಿಯಾಗು.

©KTBS Not to be republished



ಸಮುದ್ರದ ಅಲೆಗಳು ಮತ್ತು ಸಮಯ ಯಾರಿಗಾಗಿಯೂ ಕಾಯುವುದಿಲ್ಲ - ಇಂಗ್ಲೆಂಡಿನ ನಾಣ್ಣುಡಿ

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಬಿರುದಿರದೆ, ದೀಪದೆದುರಿಗೆ, ದನಿಯನೆತ್ತುವುದಲ್ತೆ, ಸಿಡಿದಬ್ಬರಿಸುವುದು, ಅಂತಿರದೆ, ಮೌನಿಯಾಗು, ಕರಗುವಿಬ್ಬನಿವೊಲಿರು.

**ಆ) ಕೆಳಗಿನ ಪದಗಳಿಗೆ ನಾನಾರ್ಥ ಬರೆಯಿರಿ.**

ತೊರೆ, ಮದ್ದು.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಶಾಂತಿ, ಸದ್ದು, ಹಸಿ, ಜೀವ.

## IV. ಚಟುವಟಿಕೆಗಳು :

೧. ಸದ್ದು ಮಾಡದೆ ಮೌನದಿಂದ ಬದುಕಿದವರ ಜೀವನ ಚರಿತ್ರೆ ಓದಿರಿ.
೨. ಬದುಕಿನಲ್ಲಿ ಸುಖ ಶಾಂತಿಯನ್ನು ರೂಢಿಸಿಕೊಳ್ಳುವುದು ಹೇಗೆ? ಶಿಕ್ಷಕರೊಂದಿಗೆ ಚರ್ಚಿಸಿ.
೩. ಈ ಪದ್ಯವನ್ನು ರಾಗವಾಗಿ ಹಾಡಲು ಪ್ರಯತ್ನಿಸಿ.
೪. ಕೆಳಗೆ ನೀಡಲಾಗಿರುವ ಡಿವಿಜಿ ಅವರ ಪದ್ಯದ ಭಾವಾರ್ಥ ತಿಳಿಯಿರಿ.

ಇಳೆಯಿಂದ ಮೊಳಕೆ ಒಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ

©KTBS Not to be republished

# ೫. ಗುರಿ

– ಎಂ. ಗೋಪಾಲಕೃಷ್ಣ ಅಡಿಗ

**ಪಾಠ ಪ್ರವೇಶ :** ಬದುಕಿಗೊಂದು ಗುರಿ ಇಲ್ಲದಿದ್ದರೆ ಚುಕ್ಕಾಣಿ ಇಲ್ಲದ ನೌಕೆಯಂತೆ. ಹೀಗಾಗಿ ಬದುಕಿಗೊಂದು ನಿಶ್ಚಿತ ಗುರಿ ಇರಬೇಕು. ಆ ಗುರಿ ಸಾಧನೆಗೆ ಹಗಲಿರುಳು ಪ್ರಯತ್ನಿಸಬೇಕು. ಆಗ ಬದುಕು ಸಾರ್ಥಕವಾಗುತ್ತದೆ. ಜೀವನದ ಗುರಿಗಳನ್ನು ಹಂತಹಂತವಾಗಿ ಸಾಧಿಸಲು ಪ್ರಯತ್ನಿಸಬೇಕು. ಗುರಿ ಸಾಧನೆಯ ಮಾರ್ಗದಲ್ಲಿ ಹಲವಾರು ಕಷ್ಟ ನಷ್ಟಗಳು ಎದುರಾಗಬಹುದು, ಅವುಗಳಿಗೆ ಧೃತಿಗೆಡದೆ ಆತ್ಮವಿಶ್ವಾಸದಿಂದ ನಿವಾರಿಸಿಕೊಂಡು ಮುಂದೆ ಸಾಗಬೇಕು. ಜೀವನದಲ್ಲಿ ಹಲವಾರು ಗುರಿಗಳನ್ನು ಇಟ್ಟುಕೊಂಡು ಯಶಸ್ಸು ಕಾಣಲು ಸಾಧ್ಯವಿಲ್ಲ. ಉದಾ: ನಾನು ಜೀವನದಲ್ಲಿ ಡಾಕ್ಟರ್, ಇಂಜಿನಿಯರ್, ಲಾಯರ್, ಪೋಲೀಸ್ ಎಲ್ಲವೂ ಆಗುತ್ತೇನೆಂದು ಗುರಿ ಇಟ್ಟುಕೊಂಡರೆ ಸಾಧಿಸಲು ಸಾಧ್ಯವೇ? ಒಂದು ಬಾಣಕ್ಕೆ ಗುರಿ ಒಂದೆ, ದೇಹಕ್ಕೆ ಆತ್ಮ ಒಂದೆ. ಅಂತೆಯೇ ನಮ್ಮ ಜೀವನಕ್ಕೂ ಒಂದೇ ಗುರಿ ಇರಬೇಕು. ಸ್ವಾರ್ಥವನ್ನು ತ್ಯಜಿಸಿ, ದೇಶದ ಅಭಿವೃದ್ಧಿಗೆ, ಸಮಾಜದ ಏಳಿಗೆಗೆ, ಪರರ ಹಿತಕ್ಕೆ ಶ್ರಮಿಸುವ ಹಾಗೂ ನೊಂದವರ ಬದುಕಿಗೆ ಸಹಾಯ ಮಾಡುವ ದಿಸೆಯಲ್ಲಿ ನಮ್ಮ ಬದುಕು ರೂಪಿತಗೊಳ್ಳಬೇಕು. ಸಮಾಜದಿಂದ ಅನುಕೂಲಗಳನ್ನು ಪಡೆದು ಬೆಳೆದ ನಾವು ಅದೇ ಸಮಾಜದ ಹಿತಕ್ಕೆ ದುಡಿಯುವಂತಾಗಬೇಕು.

ಅಳಿಯಾಸೆಗಳ ಸುಳಿಗೆ ಸಿಲುಕಿದೆಲೆ ಮನವೇ
ನೆಲೆಯಿರದೆ ತೊಳಲುವುದು ಮನುಜ ಜೀವನವೇ?
ನನೆಬೇಕು, ಕೊನೆಬೇಕು ನರನ ಬಾಳುವೆಗೆ
ದಿನದ ಗೈಮೆಯ ಹೂವು ಫಲಿಸಿ ಬರುವುದಕೆ.

ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

ಗಾಳಿ ಬಂದೆಡೆ ತಿರುಗುವಾ ಹೇಡಿತನವು
ದಾಳಿ ಬಂದೊಡನೆ ಶರಣೆಂಬ ಹೆಣ್ತನವು
ಬೇಡ. ಹಿಡಿದೊಳ್ದಾರಿಯೊಳು ಕೊನೆಯವರೆಗೆ
ದೂಡು ಬಾಳ್ವೆಯನು ಪೌರುಷದ ಹೊನಲೊಳಗೆ.





©KTBS Not to be republished

ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು.

ನರನೊಳಗೆ ನಾರಾಯಣನ ರೂಪು ಕಂಡು,
ತಿರೆಯೊಳಗೆ ಸುರಪುರದ ಮೈಸಿರಿಯನುಂಡು
ಪರಹಿತಕೆ ಬಳಲುತಿರಲದುವೆ ಜೀವನವು;
ಪೆರತೇನನೆಸಗಿದರು ನಮಗೆ ಲಾಂಛನವು.

* * * *

## ಕೃತಿಕಾರರ ಪರಿಚಯ :



**ಎಂ. ಗೋಪಾಲಕೃಷ್ಣ ಅಡಿಗ** ಅವರು ೧೯೧೮ ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿ ಎಂಬಲ್ಲಿ ಜನಿಸಿದರು. ಕನ್ನಡ ಸಾಹಿತ್ಯವು ನವೋದಯದಿಂದ ನವ್ಯದ ಹಾದಿಯನ್ನು ಹಿಡಿಯುತ್ತಿದ್ದ ಕಾಲದಲ್ಲಿ ಅಡಿಗರು ನವ್ಯ ಪ್ರಕಾರದ ಪ್ರಸಿದ್ಧ ಕವಿಗಳಾಗುತ್ತ ಬೆಳೆದವರು. ಕುವೆಂಪು, ಪು.ತಿ.ನ. ಬೇಂದ್ರೆಯಂತಹ ಹಿರಿಯ ಕವಿಗಳ ಸಾಲಲ್ಲಿ ಗುರುತಿಸಿಕೊಂಡವರು.

'ಭಾವತರಂಗ', 'ಚಂಡೆಮದ್ದಳೆ', 'ಭೂಮಿ ಗೀತ', 'ನಡೆದುಬಂದ ದಾರಿ' ಮೊದಲಾದ ಕವನ ಸಂಕಲನಗಳನ್ನು, 'ಅನಾಥೆ', 'ಆಕಾಶ ದೀಪ' ಎಂಬ ಎರಡು ಕಾದಂಬರಿಗಳನ್ನು ಅಡಿಗರು ರಚಿಸಿದ್ದಾರೆ. ಇವರ 'ಸಮಗ್ರ ಗದ್ಯ'ವು ಕನ್ನಡ ಗದ್ಯಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಗಿದೆ.

ಅಡಿಗರಿಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ದೊರೆತಿವೆ. ಇವರು ಧರ್ಮಸ್ಥಳದಲ್ಲಿ ನಡೆದ ಐವತ್ತೊಂದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಡಿಗರು ೧೯೯೨ ರಲ್ಲಿ ನಿಧನರಾದರು. ಪ್ರಸ್ತುತ ಕವನವನ್ನು ಅವರ **'ಸಮಗ್ರ ಕಾವ್ಯ'** ದಿಂದ ಆರಿಸಲಾಗಿದೆ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

**ಅಂಬುಜ** – ತಾವರೆ (ಅಂಬು – ನೀರು, ಜ – ಜನಿಸಿದ್ದು).
**ಆಳ್ವೆಸ** – ಆಳಿನ ಕೆಲಸ (ಆಳ್+ಬೆಸ=ಆಳ್ವೆಸ. ಆದೇಶಸಂಧಿ)
**ಒಳ್ದಾರಿ** – ಒಳ್ಳೆಯ ದಾರಿ
**ತಿರೆ** (ದ್ಭ) – ಭೂಮಿ; ಸ್ಥಿರಾ (ತ್ಸ).
**ಪೆರತು** – ಬೇರೆ
**ಬಾಂದಳ** – ಆಕಾಶ
**ಮಿಸುಪ** – ಹೊಳೆಯುವ
**ಸುರಪುರ** – ದೇವಲೋಕ
**ಅಳಿಯಾಸೆ** – ಕೀಳಾಸೆ; ಈಡೇರದ ಆಸೆ.
**ಬೆಸನ** (ದ್ಭ) – ವ್ಯಸನ (ತ್ಸ); ಕೆಲಸ.
**ಗೈಮೆ** – ದುಡಿಮೆ
**ನನೆ ಕೊನೆ** – ಅರಳಲಿರುವ ಮೊಗ್ಗು.
**ಬಸ** (ದ್ಭ) – ವಶ (ತ್ಸ)
**ಮಸಗು** – ವಿಜೃಂಭಿಸು
**ಲಾಂಛನ** – ಗುರುತು; ಚಿಹ್ನೆ
**ಹೊನಲು** – ಪ್ರವಾಹ; ಹರಿವ ಹೊಳೆ.

### II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದುದನ್ನು ಆರಿಸಿ ಪೂರ್ಣಗೊಳಿಸಿರಿ.**

೧. ಮನುಷ್ಯನ ದುಡಿಮೆಗೆ ಫಲ ದೊರೆಯಬೇಕಾದರೆ ನಿರ್ದಿಷ್ಟ ____________ ಇರಬೇಕು.
ಅ) ಗುರಿ ಆ) ಆಸೆ ಇ) ಬಯಕೆ ಈ) ಉತ್ಸಾಹ

೨. ಜೀವನದಲ್ಲಿ ಗಾಳಿ ಬಂದೆಡೆ ತಿರುಗುವುದು __________
ಅ) ಸಿರಿತನ ಆ) ಬಡತನ ಇ) ಹೇಡಿತನ ಈ) ಧೀರತನ

೩. ಅಡಿಗರಿಗೆ 'ಕಬೀರ್ ಸಮ್ಮಾನ್' ಪ್ರಶಸ್ತಿಯನ್ನು ____________ ರಾಜ್ಯ ನೀಡಿತು.
ಅ) ಕರ್ನಾಟಕ ಆ) ಕೇರಳ ಇ) ಮಧ್ಯಪ್ರದೇಶ ಈ) ತಮಿಳುನಾಡು

೪. 'ಹೆಗ್ಗುರಿ' ಇದು ____________ ಸಮಾಸವಾಗಿದೆ.
ಅ) ತತ್ಪುರುಷ ಆ) ದ್ವಿಗು ಇ) ಬಹುವ್ರೀಹಿ ಈ) ಕರ್ಮಧಾರಯ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ?
೨. ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?
೩. ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು?
೪. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?





©KTBS Not to be republished

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ನಮ್ಮ ಬದುಕು ಕೆಸರಿನ ಕಮಲದಂತಿರಬೇಕು ಏಕೆ?

೨. ಅಡಿಗರು ಯಾವುದನ್ನು ಹೇಡಿತನ ಹಾಗೂ ಹೆಣ್ತನ ಎಂದು ಕರೆದಿದ್ದಾರೆ?

೩. ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಏಕೆ?

೪. ಜೀವನದಲ್ಲಿ ಒಂದೇ ಗುರಿ ಇರಬೇಕು ಎಂಬುದಕ್ಕೆ ಅಡಿಗರು ನೀಡುವ ನಿದರ್ಶನಗಳಾವುವು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆಶಿಸಿದ್ದಾರೆ?

೨. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ?

೩. ಗುರಿ ಪದ್ಯದ ಸಾರಾಂಶ ಬರೆಯಿರಿ.

**ಉ) ಸಂದರ್ಭದೊಡನೆ ವಿವರಿಸಿರಿ.**

೧. ದಾಳಿಬಂದೊಡನೆ ಶರಣೆಂಬ ಹೆಣ್ತನವು.

೨. ಒಂದು ಜೀವನಕೇಕೆ ಹಲವು ಸಾಧ್ಯಗಳು?

೩. ಪರಹಿತಕೆ ಬಳಲುತಿರಲದುವೆ ಜೀವನವು.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಬಿಡಿಸಿ, ಸಂಧಿಯನ್ನು ಹೆಸರಿಸಿರಿ.**

ಅಳಿಯಾಸೆ, ದೇಹದೊಳಾತ್ಮ, ಜೀವನಕೇಕೆ, ಹಿಡಿದೊಳ್ದಾರಿ, ಹಗಲಿರುಳು, ಶರಣೆಂಬೆ.

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಧ್ಯೇಯ, ಪರಹಿತ, ಗೈಮೆ, ಮೈಸಿರಿ.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಆಸೆ, ಪರಹಿತ, ಇರುಳು, ಹೇಡಿ.

## IV. ಚಟುವಟಿಕೆ :

೧. 'ಕೆಸರೊಳಿದ್ದರು ......... ಸಾರ್ಥತೆಗೆ'

'ಒಂದು ಬಾಣಕೆ ......ಹೋರಾಡು ಹಗಲಿರುಳು' –ಈ ಪದ್ಯ ಭಾಗಗಳನ್ನು ಕಂಠಪಾಠ ಮಾಡಿರಿ.

೨. 'ನನ್ನ ಜೀವನದ ಗುರಿ' ಈ ವಿಷಯ ಕುರಿತು ಪ್ರಬಂಧ ಬರೆಯಿರಿ.



ಪಶ್ಚಾತ್ತಾಪ ಪಡದವರನ್ನು ಕ್ಷಮಿಸುವುದೆಂದರೆ ನೀರಿನ ಮೇಲೆ ಚಿತ್ರ ಬರೆದಂತೆ – ಜಪಾನಿನ ನಾಣ್ಣುಡಿ

©KTBS Not to be republished

# ೬. ಮೂಡಲ್ ಕುಣಿಗಲ್ ಕೆರೆ

**– ಜನಪದಗೀತೆ**

**ಪಾಠ ಪ್ರವೇಶ :** ಓದು ಬರೆಹವನ್ನು ಅರಿಯದ ನಮ್ಮ ಹಳ್ಳಿಯ ಜನ ತಮ್ಮ ಬದುಕಿನ ಅನುಭವಗಳನ್ನೇ ಕಟ್ಟಿ ಹಾಡಿದ್ದಾರೆ. ಅದು ಜನಪದ ಸಾಹಿತ್ಯವೆಂದು ಮನೆ ಮಾತಾಗಿದೆ. ಕವಿ ಯಾರೆಂದು ತಿಳಿಯದೆ, ಜನರ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಜನಪದ ಸಾಹಿತ್ಯವು ಹರಿದು ಬಂದಿದೆ. ಈ ಜನಪದ ಸಾಹಿತ್ಯದಲ್ಲಿ ಜೀವನ ಪ್ರೀತಿ ಎಲ್ಲೆಡೆ ತುಂಬಿರುವುದನ್ನು ಕಾಣಬಹುದು. ಜನಪದ ಸಾಹಿತ್ಯವನ್ನು ರಚಿಸಿದವರು ಅನಾಮಧೇಯ ಶ್ರೀಸಾಮಾನ್ಯರು. ಆದರೆ ಅವರ ಭಾವ ಶ್ರೀಮಂತಿಕೆ ಮಾತ್ರ ಅಸಾಮಾನ್ಯವಾದುದು. ಇಂದು ಆಧುನಿಕ ಜೀವನ ವಿಧಾನದಿಂದಾಗಿ ಮಕ್ಕಳು ಜಾನಪದ ಸಂಗೀತ, ಕಥೆ, ಗೀತೆಯ ಸೊಗಡಿನಿಂದ ವಂಚಿತರಾಗುತ್ತಿದ್ದಾರೆ. ಈ ಕೊರತೆಯನ್ನು ತುಂಬಿಕೊಡುವುದು ಇಂದಿನ ಅಗತ್ಯವಾಗಿದೆ.

ಜಲ ಸಂಸ್ಕೃತಿ ಜನಪದ ಬದುಕಿನ ಅವಿಭಾಜ್ಯ ಅಂಗ. ಸಕಾಲಕ್ಕೆ ಮಳೆ ಬಂದು, ಕೆರೆ ಬಾವಿಗಳು ತುಂಬಿ ತುಳುಕಿದರೆ ನಾಡು ಸಂಪದ್ಭರಿತವಾಗಿರುತ್ತದೆ. ನೀರು ತುಂಬಿರುವ ಕೆರೆಗಳೆಂದರೆ ಜನಪದರಿಗೆ ತುಂಬಾ ಪ್ರೀತಿ. ತುಂಬಿದ ಕೆರೆಗಳ ಬಗ್ಗೆ ಅವರು ಹಾಡುಕಟ್ಟಿ ನಲಿದಿದ್ದಾರೆ. ಮೈಮನ ಮರೆತು ಕುಣಿದಿದ್ದಾರೆ. ಮದಗದ ಕೆರೆ, ಕುಣಿಗಲ್ ಕೆರೆ ಇವು ಜನಪದರ ಪ್ರೀತಿಗೆ ಪಾತ್ರವಾದ ವಿಶಿಷ್ಟ ಕೆರೆಗಳು. ಅವರ ಭಾವನೆಗಳಿಗೆ ಹಿಡಿದ ಕನ್ನಡಿಯಾಗಿ ಈ ಜನಪದ ಗೀತೆ ಮೂಡಿ ಬಂದಿದೆ. ನಾಗರೀಕತೆ ಬೆಳೆದಂತೆ ಕೆರೆಗಳು ನಾಶವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಈ ಗೀತೆ ಹೆಚ್ಚು ಮಹತ್ವ ಪಡೆದುಕೊಂಡಿದೆ.

©KTBS Not to be republished

ಮೂಡಲು ಕುಣಿಗಲು ಕೆರೆ ನೋಡೋರ್‍ಗೊಂದ್ಯೆಭೋಗ
ಮೂಡಿಽ ಬರ್ತಾನೆ ಚೆಂದಿರಽಮಾ । ತಾನಂದಾನೋ
ಮೂಡಿಽ ಬರ್ತಾನೆ ಚೆಂದಿರಽಮಾ ॥ ॥ ೧ ॥

ಅಂತಂತ್ರಿಸಿ ನೋಡೋರ್‍ಗೆ ಎಂಥಾ ಕುಣಿಗಲ್ ಕೆರೆ
ಸಂತೇ ಹಾದೀಲಿ ಕಲುಕಟ್ಟೆ । ತಾನಂದಾನೋ
ಸಂತೇ ಹಾದೀಲಿ ಕಲುಕಟ್ಟೆ ॥ ॥ ೨ ॥

ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲು ಕೆರೆ
ಭಾವಾ ತಂದಾನೆ ಬಣ್ಣದ ಸೀರೆ । ತಾನಂದಾನೋ
ಭಾವಾ ತಂದಾನೆ ಬಣ್ಣದ ಸೀರೆ ॥ ॥ ೩ ॥



ಕಾರ್ಯಮಾಡುವಾಗ ದಕ್ಷನಾಗಿರು; ಮಾತನಾಡುವಾಗ ಎಚ್ಚರದಿಂದಿರು; ಯೋಚಿಸುವಾಗ ದೂರದೃಷ್ಟಿಯಿಂದಿರು – ಮಾರ್ಕ್ಸ್



ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲು ಕೆರೆ
ಅಂದಾ ನೋಡಲು ಶಿವ ಬಂದ್ರು । ತಾನಂದಾನೋ
ಅಂದಾ ನೋಡಲು ಶಿವ ಬಂದ್ರು ॥ ॥ ೪ ॥

ಅಂದಾ(ನೇ) ನೋಡಲು ಶಿವ ಬಂದ್ರು ಶಿವಮಗ್ಗಿ
ಕಬ್ಬಕ್ಕಿ ಬಾಯ ಬಿಡುತಾವೆ । ತಾನಂದಾನೋ
ಕಬ್ಬಕ್ಕಿ ಬಾಯ ಬಿಡುತಾವೆ ॥ ॥ ೫ ॥

ಕಬ್ಬಕ್ಕಿ(ನೇ) ಬಾಯ ಬಿಡುತಾವೆ ಇಬ್ಬೀಡ
ಗಬ್ಬದ್ ಹೊಂಬಾಳೆ ನಡುಗ್ಯಾವೆ । ತಾನಂದಾನೋ
ಗಬ್ಬದ್ ಹೊಂಬಾಳೆ ನಡುಗ್ಯಾವೆ ॥ ॥ ೬ ॥

ಹಾಕೋಕೊಂದಾರುಗೋಲು ನೂಕೋಕೊಂದೂರುಗೋಲು
ಬೊಬ್ಬೆ ಹೊಡೆದವೆ ಬಾಳೆಮೀನು । ತಾನಂದಾನೊ
ಬೊಬ್ಬೆ ಹೊಡೆದವೆ ಬಾಳೆಮೀನು ॥ ॥ ೭ ॥

ಬೊಬ್ಬೆ(ನೇ) ಹೊಡೆದವು ಬಾಳೆs ಮೀನ್ ಕೆರೆಯಾಗೆ
ಗುಬ್ಬಿ ಸಾರಂಗ ನಗುತಾವೆ । ತಾನಂದಾನೊ
ಗುಬ್ಬಿ ಸಾರಂಗ ನಗುತಾವೆ ॥ ॥ ೮ ॥

* * * *

Not to be republished ©KTBS

ಜನಪದ ಸಾಹಿತ್ಯವನ್ನು ರಚಿಸಿದವರು ಶ್ರೀಸಾಮಾನ್ಯರು. ಆದರೆ ಅವರ ಭಾವಶ್ರೀಮಂತಿಕೆ ಅಸಾಮಾನ್ಯವಾದುದು. ಈ ಜನಪದ ಗೀತೆಯನ್ನು ಮತಿಘಟ್ಟ ಕೃಷ್ಣಮೂರ್ತಿಯವರು ಸಂಗ್ರಹಿಸಿರುವ **'ಕನ್ನಡ ಜನಪದ ಸಾಹಿತ್ಯ ಭಂಡಾರ'** ಸಂಪುಟ–೧ ಇದರಿಂದ ಆರಿಸಿಕೊಳ್ಳಲಾಗಿದೆ.

## ಟಿಪ್ಪಣಿ :

೧. **ಕುಣಿಗಲ್** : ತುಮಕೂರು ಜಿಲ್ಲೆಯ ತಾಲ್ಲೂಕು ಕೇಂದ್ರ. ಬೆಂಗಳೂರಿನಿಂದ ೭೪ ಕಿ.ಮೀ. ದೂರದಲ್ಲಿ ಈ ಕೆರೆ ಇದೆ. ಜನಪದ ಗೀತೆ ಕೆರೆಗಳ ಉಳಿವಿನ ಬಗ್ಗೆ ಗಮನ ಸೆಳೆಯುತ್ತದೆ. ಜನಪದ ಗೀತೆಯಲ್ಲಿ ಮೂಡಿ ಬಂದಿರುವ ಕುಣಿಗಲ್ ಕೆರೆಯು ೧೫ ಮೈಲಿ ಸುತ್ತಳತೆಯನ್ನು ಹೊಂದಿದೆ.

ಉತ್ತರ ದೇಶದಿಂದ ಬಂದು ಇಲ್ಲಿ ಸ್ನಾನಮಾಡಿ ಕುಷ್ಠರೋಗವನ್ನು ಕಳೆದುಕೊಂಡ ನೃಂಗನೆಂಬ ಚಕ್ರವರ್ತಿ ಕಟ್ಟಿಸಿದನೆಂದು ಸ್ಥಳಪುರಾಣ ಹೇಳುತ್ತದೆ. ಕೆರೆಯ ಏರಿಯ ಮೇಲೆ ಹೊಯ್ಸಳರ ಕಾಲದ ಪ್ರಾಚೀನ ಸೋಮೇಶ್ವರ ದೇವಾಲಯವಿದೆ. ಇತ್ತೀಚೆಗೆ ಹೇಮಾವತಿ ಜಲಾಶಯದಿಂದ ಈ ಕೆರೆಗೆ ನೀರನ್ನು ಹರಿಸಲಾಗುತ್ತಿದೆ.

೨. **ಭಾವ ತಂದಾನು ಬಣ್ಣದ ಸೀರೆ** : ಕೆರೆಗಳು ತುಂಬಿದಾಗ ಬಾಗಿನ ಅರ್ಪಿಸುವ ವಾಡಿಕೆ ಈಗಲೂ ಇದೆ. ಈ ಸಂದರ್ಭದಲ್ಲಿ ಪೂಜಾ ಸಾಮಗ್ರಿಗಳೊಂದಿಗೆ ಸೀರೆ, ಕುಪ್ಪಸ ಹಾಗೂ ಹಣ್ಣು ಹಂಪಲುಗಳನ್ನು ಮೊರದಲ್ಲಿಟ್ಟು ನೀರಿಗೆ ಬಿಡಲಾಗುತ್ತದೆ. ಕೆರೆ ತುಂಬಿದ ಖುಷಿಗೆ ಭಾವನು ಬಣ್ಣದ ಸೀರೆಯನ್ನು ಬಾಗಿನ ಅರ್ಪಿಸಲು ತಂದಿರುವುದನ್ನು ಇಲ್ಲಿ ನೆನೆಯಲಾಗಿದೆ.

೩. **ಹೊಂಬಾಳೆ ನಡುಗ್ಯಾವ** : ಕೆರೆಯ ನೀರುಂಡು ದಷ್ಟಪುಷ್ಟವಾಗಿ ಬೆಳೆದು ನಿಂತ ಬಾಳೆಯ ಗಿಡಗಳು ಗಾಳಿಗೆ ಹೊಯ್ದಾಡುವ ಪರಿಯನ್ನು ನಡುಗ್ಯಾವ ಎಂದು ಹೇಳಲಾಗಿದೆ.

೪. **ಕಬ್ಬಕ್ಕಿ ಬಾಯಿ ಬಿಡುತಾವೆ** : ಕಬ್ಬಕ್ಕಿ ಜಲಚರಗಳನ್ನು ತಿನ್ನಲು ಆಸೆ ಪಡುವುದು; ಹಾತೊರೆಯುವುದು.

೫. **ಹಾಕೋಕೊಂದಾರುಗೋಲು ನೂಕೋಕೊಂದೂರುಗೋಲು** : ಕೃಷಿಕರ ಉಪಕಸುಬಾದ ಮೀನುಗಾರಿಕೆ ಬದುಕಿನ ಊರುಗೋಲು. ದೋಣಿ ಸಾಗಲು ಹುಟ್ಟು ಹಾಕಬೇಕು, ಅದೇರೀತಿ ಮೀನುಗಾರಿಕೆ ಬದುಕಿನ ಊರುಗೋಲಾಗಿದೆ. ಕೆರೆ ಉಪ ಕಸುಬುಗಳಿಗೆ ದಾರಿ ಮಾಡಿಕೊಟ್ಟಿದೆ.

೬. **ಬೊಬ್ಬೆ ಹೊಡೆದಾವೆ ಬಾಳೆಮೀನು** : ಬಲೆಯಲ್ಲಿ ಸಿಲುಕಿಕೊಂಡ ಮೀನುಗಳನ್ನು ನೀರಿನಿಂದ ಮೇಲಕ್ಕೆತ್ತಿದಾಗ ನೆಗೆದಾಡುವ ಪರಿಯನ್ನು ಬೊಬ್ಬೆ ಹೊಡೆದಾವೆ ಎಂದು ವರ್ಣಿಸಲಾಗಿದೆ.





©KTBS Not to be republished

೭. **ಗುಬ್ಬಿಸಾರಂಗ ನಗುತಾವೆ** : ಕೆರೆ ತುಂಬಿದಾಗ ಸಹಜವಾಗಿ ಸುತ್ತಲ ಪರಿಸರ ಹಸಿರಿನಿಂದ ಸಮೃದ್ಧವಾಗಿರುತ್ತದೆ. ಹಸಿರು ಇರುವಲ್ಲಿ ಗುಬ್ಬಿ, ಸಾರಂಗಗಳು ನಗುನಗುತ ಸಂಭ್ರಮದಿಂದ ಬದುಕುವುದನ್ನು ಗುಬ್ಬಿ ಸಾರಂಗ ನಗುತಾವೆ ಎಂದು ಬಣ್ಣಿಸಲಾಗಿದೆ.

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಮೂಡಲು** – ಪೂರ್ವದಿಕ್ಕು

**ಊರುಗೋಲು** – ಹುಟ್ಟು (ದೋಣಿ ನಡೆಸುವ ಸಾಧನ)

**ಕಬ್ಬಕ್ಕಿ** –ಜಲಚರಗಳನ್ನು ತಿನ್ನುವ ಪಕ್ಷಿ

**ಬಾಳೆಮೀನು** – ಒಂದು ಜಾತಿ ಮೀನು.

**ಸಾರಂಗ** – ಜಿಂಕೆ

**ಐಭೋಗ** – ವೈಭವ, ಸುಖ

**ಚೆಂದಿರಾಮ** – ಚಂದಿರ

**ಅಂತಂತ್ರಿಸಿ** – ನೀಳವಾಗಿ ನೋಡುವುದು.

### II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ?

೨. ಕುಣಿಗಲ್ ಕೆರೆ ಹೇಗೆ ಬಾಗಿದೆ?

೩. ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?

೪. ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?

೫. ಕೆರೆಯಲ್ಲಿ ಯಾವ ಮೀನುಗಳಿದ್ದವು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು?

೨. ಕಬ್ಬಕ್ಕಿಗಳು ಯಾವಾಗ ಬಾಯಿ ಬಿಡುತ್ತವೆ?

೩. ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕುಣಿಗಲ್ ಕೆರೆ ಜೀವಸಂಕುಲಕ್ಕೆ ಆಶ್ರಯವಾಗಿರುವುದನ್ನು ಗೀತೆಯಲ್ಲಿ ಯಾವ ರೀತಿ ವರ್ಣಿಸಲಾಗಿದೆ?

೨. ಮೂಡಲ್ ಕುಣಿಗಲ್ ಕೆರೆ ಜನಪದ ಗೀತೆಯ ಭಾವಾರ್ಥವನ್ನು ಬರೆಯಿರಿ.

©KTBS Not to be republished

ಈ) ಸಂದರ್ಭದೊಡನೆ ವಿವರಿಸಿರಿ.

೧. "ಭಾವ ತಂದಾನೆ ಬಣ್ಣದ ಸೀರೆ".

೨. "ಕಬ್ಬಕ್ಕಿ ಬಾಯ ಬಿಡುತಾವೆ".

೩. "ಬೊಬ್ಬೆ ಹೊಡೆದಾವೆ ಬಾಳೆ ಮೀನು".

## III. ಭಾಷಾಭ್ಯಾಸ :

ಅ) ಕೆಳಗಿನ ಸಮಾಸ ಪದಗಳನ್ನು ವಿಗ್ರಹವಾಕ್ಯ ಮಾಡಿ, ಸಮಾಸದ ಹೆಸರು ತಿಳಿಸಿರಿ.

ಊರುಗೋಲು, ಹೊಂಬಾಳೆ, ಕಬ್ಬಕ್ಕಿ.

ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

ಬಾಯಿಬಿಡು, ಬೊಬ್ಬೆಹೊಡೆ, ಐಭೋಗ.

ಇ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ.

ಯೋಗಿ, ಹಕ್ಕಿ, ಸೀರೆ, ಬಣ್ಣ.

ಈ) ಕೆಳಗಿನ ಪದಗಳಿಗೆ ಗ್ರಾಂಥಿಕ ರೂಪಗಳನ್ನು ಬರೆಯಿರಿ.

ಬರ್ತಾನೆ, ನೋಡಾಲು, ಬಿಡುತಾವೆ, ಕೆರೆಯಾಗೆ.

ಉ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧) ಪೂರ್ವ | ಅ) ಪಡುವಣ |
| ೨) ಪಶ್ಚಿಮ | ಆ) ತೆಂಕಣ |
| ೩) ಉತ್ತರ | ಇ) ಮೂಡಣ |
| ೪) ದಕ್ಷಿಣ | ಈ) ಕೊಂಕಣ |
| | ಉ) ಬಡಗಣ |

## IV. ಚಟುವಟಿಕೆಗಳು :

೧. ಈ ಜನಪದ ಗೀತೆಯನ್ನು ರಾಗವಾಗಿ ಹಾಡಲು ಕಲಿಯಿರಿ.

೨. ನಿಮ್ಮ ಊರಿನಲ್ಲಿ ಹಿರಿಯರು ಹೇಳುವ ಜನಪದ ಗೀತೆ, ಕಥೆ, ಗಾದೆ ಮುಂತಾದುವನ್ನು ಸಂಗ್ರಹಿಸಿ ನಿಮ್ಮ ಶಾಲೆಯ ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಿ.

೩. ನಿಮ್ಮ ಊರಿನ ಹತ್ತಿರದ ಕೆರೆಗೆ ಭೇಟಿ ನೀಡಿ ಅದರ ಬಗೆಗೆ ಮಾಹಿತಿ ಸಂಗ್ರಹಿಸಿರಿ.

೪. ಕೆರೆಗಳ ಮಹತ್ವ ಹಾಗೂ ಅವುಗಳ ಉಳಿವಿಗೆ ನಿಮ್ಮ ಸಲಹೆಗಳನ್ನು ನೀಡಿರಿ.





© KTBS Not to be republished

# ೭. ವಚನಗಳು

–ಬಸವಣ್ಣ, ಸೊನ್ನಲಿಗೆಯಸಿದ್ಧರಾಮ, ಅಕ್ಕಮಹಾದೇವಿ

**ಪಾಠ ಪ್ರವೇಶ :** ವಿಶ್ವದ ಸಾಹಿತ್ಯಕ, ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ೧೨ ನೇ ಶತಮಾನ ಚಿರಸ್ಮರಣೀಯವಾದುದು. ಅದಕ್ಕೆ ಕಾರಣರಾದವರು ಬಸವಾದಿ ಶಿವಶರಣರು. ಜಾತಿ, ಮತ, ದೇಶ, ಭಾಷೆ, ಪ್ರಾಂತ್ಯಗಳ ಸಂಕೋಲೆಯನ್ನು ಕಿತ್ತೆಸೆದು ವಿಶ್ವಮಾನವತೆಯನ್ನು ವಚನಕಾರರು ಸಾರಿದರು. ಸಮಾಜದ ಎಲ್ಲಾ ವರ್ಗದ ಸ್ತ್ರೀ ಪುರುಷರು ತಮ್ಮ ಆಡು ಮಾತುಗಳಲ್ಲೇ ವಚನಗಳನ್ನು ಹೇಳಿದುದು–ಕೇಳಿದುದು–ಬರೆದುದು ವಿಶ್ವದ ಯಾವುದೇ ಭಾಗದ ಸಾಹಿತ್ಯ ಚರಿತ್ರೆಯಲ್ಲಿಲ್ಲದ ವಿಸ್ಮಯ. ವಚನಕಾರರು ಮೂಢನಂಬಿಕೆಗಳನ್ನು ಖಂಡಿಸುತ್ತ, ಸರ್ವಸಮಾನತೆಯ ಭಾವವನ್ನು ಬಿತ್ತುತ್ತ, ಕಾಯಕ ತತ್ತ್ವವನ್ನು ಎತ್ತಿಹಿಡಿದು, ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದರು. ವರ್ಗರಹಿತ, ವರ್ಣರಹಿತ ಸಮಾಜವನ್ನು ಕಟ್ಟಬಯಸಿದರು. ಜನಸಾಮಾನ್ಯರಲ್ಲಿ ವೈಚಾರಿಕತೆಯನ್ನು ಬೆಳೆಸುವಲ್ಲಿ ವಚನಕಾರರ ವಿಚಾರಧಾರೆಗಳು ಸರ್ವಕಾಲಕ್ಕೂ ಸರ್ವಜನರಿಗೂ ದಾರಿದೀಪವಾಗಿವೆ.

©KTBS Not to be republished

ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ.

**– ಬಸವಣ್ಣ**

ವೇಷ ಧರಿಸಿ ಫಲವೇನಯ್ಯ
ವೇಷದಂತಾಚರಣೆ ಇಲ್ಲದನ್ನಕ್ಕ
ವೇದಾಂತವನೋದಿ ಫಲವೇನಯ್ಯ
ಬ್ರಹ್ಮ ತಾನಾಗದನ್ನಕ್ಕ
ನಾನಾ ಕೆರೆಯ ತೋಡಿ ಫಲವೇನಯ್ಯ
ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ

**– ಸೊನ್ನಲಿಗೆಯಸಿದ್ಧರಾಮ**

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**– ಅಕ್ಕಮಹಾದೇವಿ**

* * * *

## ಕೃತಿಕಾರರ ಪರಿಚಯ :



**ಬಸವಣ್ಣ** : ಭಕ್ತಿಭಂಡಾರಿ ಬಸವಣ್ಣನವರು ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು. ಇವರ ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಇವರು ಕಳಚೂರಿಯ ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಮಂತ್ರಿ ಆಗಿದ್ದರು. ವಿಶ್ವದ ಮೊಟ್ಟಮೊದಲ ಸಂಸತ್ತು ಎಂಬ ಖ್ಯಾತಿ ಪಡೆದ 'ಅನುಭವ ಮಂಟಪ'ದ ರೂವಾರಿಗಳು. 'ಕಾಯಕವೇ ಕೈಲಾಸ' ಎಂದು ಸಾರಿ, ಜನರನ್ನು ದುಡಿದು ಬದುಕುವ ಪಥದಲ್ಲಿ ಮುನ್ನಡೆಸಿದರು. ಬಸವಣ್ಣನವರ ಸುಮಾರು ೧೫೦೦ ವಚನಗಳು ಪ್ರಸ್ತುತದಲ್ಲಿ ಲಭ್ಯವಿವೆ. ಇವರ ವಚನಗಳ ಅಂಕಿತ – **ಕೂಡಲಸಂಗಮದೇವ.**



**ಸೊನ್ನಲಿಗೆಯ ಸಿದ್ಧರಾಮ** : ಬಸವಣ್ಣನವರ ಸಮಕಾಲೀನರಾದ ಸಿದ್ಧರಾಮರ ಊರು ಸೊನ್ನಲಿಗೆ. ಇವರ ತಂದೆ ಮುದ್ದುಗೌಡ, ತಾಯಿ ಸುಗ್ಗವ್ವೆ. ಕರ್ಮದಲ್ಲಿ ನಂಬುಗೆಯಿರಿಸಿದವನು, ಅಲ್ಲಮಪ್ರಭುವಿನಿಂದಾಗಿ ಜ್ಞಾನಯೋಗದ ಮೆಟ್ಟಿಲೇರಿ ಶಿವಜ್ಞಾನ ಸಂಪನ್ನನಾದ ವಚನಕಾರ. ಅಲ್ಲಮಪ್ರಭುಗಳ ದರ್ಶನ ಮತ್ತು ಮಾರ್ಗದರ್ಶನದಿಂದ ಅನುಭವ ಮಂಟಪದ ಒಬ್ಬ ಸಕ್ರಿಯ ಚಿಂತಕರಾಗಿದ್ದರು. ಇವರ ವಚನಗಳ ಅಂಕಿತ– **ಕಪಿಲಸಿದ್ಧ ಮಲ್ಲಿಕಾರ್ಜುನ.**

©KTBS Not to be republished



**ಅಕ್ಕಮಹಾದೇವಿ :** ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿದ್ದ ಬಹುದೊಡ್ಡ ಶಿವಶರಣೆ. ಈಕೆ ಶಿವಮೊಗ್ಗ ಜಿಲ್ಲೆಯ ಉಡುತಡಿ ಎಂಬಲ್ಲಿ ಜನಿಸಿದರು. ಕನ್ನಡ ಸಾಹಿತ್ಯದ ಮೊದಲನೆಯ ಕವಯಿತ್ರಿ. ಈಕೆ ಸಂಪ್ರದಾಯಗಳನ್ನು ಧಿಕ್ಕರಿಸಿ ಅಲೌಕಿಕ ನೆಲೆಯಲ್ಲಿ ನಿಂತ ದಿಟ್ಟ ಮಹಿಳೆ. ಅಲ್ಲಮನಿಂದ **'ವೈರಾಗ್ಯನಿಧಿ'** ಎಂದು ಕರೆಯಿಸಿಕೊಂಡವಳು. ಈಕೆಯ ವಚನಗಳು ಭಕ್ತಿ, ವೈರಾಗ್ಯ, ಜ್ಞಾನ ಸಂಪನ್ನವಾಗಿದ್ದರೂ ಕಾವ್ಯ ಸೌಂದರ್ಯದಿಂದ ಮೋಹಕವಾಗಿವೆ. ಚೆನ್ನಮಲ್ಲಿಕಾರ್ಜುನನನ್ನೇ ಪತಿಯೆಂದು ನಂಬಿ, ಶ್ರೀಶೈಲದ ಕದಳಿ ಬನದಲ್ಲಿ ಐಕ್ಯಳಾದವಳು. **'ಚೆನ್ನಮಲ್ಲಿಕಾರ್ಜುನ'** ಎಂಬುದು ಅಕ್ಕಮಹಾದೇವಿಯ ವಚನಗಳ ಅಂಕಿತ.

## ಅಭ್ಯಾಸ

## I. ಪದಗಳ ಅರ್ಥ :

**ಅಗಲು** – ಊಟದ ತಟ್ಟೆ
**ಅನ್ನಕ್ಕ** – ತನಕ
**ಬಾನ** – ಅನ್ನ
**ಹಯನು** – ಹಾಲು; ಹಾಲಿಗೆ ಸಂಬಂಧಿಸಿದ್ದು.

## II. ಪ್ರಶ್ನೆಗಳು :

**ಅ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಸರಿಯಾಗಿ ಹೊಂದಿಸಿ ಬರೆಯಿರಿ :**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧) ಬಸವಣ್ಣ | ಅ) ಕಪಿಲಸಿದ್ಧ ಮಲ್ಲಿಕಾರ್ಜುನ |
| ೨) ಸಿದ್ಧರಾಮ | ಆ) ಗುಹೇಶ್ವರ |
| ೩) ಅಕ್ಕಮಹಾದೇವಿ | ಇ) ಕೂಡಲಸಂಗಮದೇವ |
| | ಈ) ಚೆನ್ನಮಲ್ಲಿಕಾರ್ಜುನ |

©KTBS Not to be republished

ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ?

೨. ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?

೩. ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?

೪. ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ?

೫. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?

೬. ಅಕ್ಕಮಹಾದೇವಿಯು ತನ್ನ ಬದುಕು ಯಾವಾಗ ಫಲದಾಯಕ ಆಗುತ್ತದೆಂದು ಹೇಳುತ್ತಾಳೆ?

ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?

೨. 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' – ಈ ಮಾತಿನ ಅರ್ಥ ವೈಶಿಷ್ಟ್ಯವೇನು?

ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಬಸವಣ್ಣನವರು ಜನರ ಮೌಢ್ಯತೆಯನ್ನು ಯಾವ ರೀತಿ ಖಂಡಿಸಿದ್ದಾರೆ?

೨. ಬಾಹ್ಯ ಹಾಗೂ ಆಂತರಿಕ ನಡವಳಿಕೆಗಳಲ್ಲಿ ಸಾಮ್ಯತೆ ಇರಬೇಕೆಂದು ಸಿದ್ಧರಾಮನು ತನ್ನ ವಚನದಲ್ಲಿ ಹೇಗೆ ಪ್ರತಿಪಾದಿಸಿದ್ದಾನೆ?

೩. ಅಕ್ಕಮಹಾದೇವಿ ತನ್ನ ಬದುಕು ಫಲದಾಯಕವಾಗುವುದನ್ನು ಯಾವ ನಿದರ್ಶನಗಳೊಂದಿಗೆ ಸಮರ್ಥಿಸುತ್ತಾಳೆ?

ಉ) ಸಂದರ್ಭದೊಡನೆ ವಿವರಿಸಿರಿ.

೧. ನೀರ ಕಂಡಲ್ಲಿ ಮುಳುಗುವರಯ್ಯ

೨. ವೇದಾಂತವನೋದಿ ಫಲವೇನಯ್ಯಾ

೩. ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ

©KTBS Not to be republished

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.**

ಕಾಡು, ಕೆರೆ, ಅಗಲು, ತೊರೆ, ಎತ್ತು.

**ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ.**

ವೇಷದಂತಾಚರಣೆ, ವೇದಾಂತವನೋದಿ, ಗುಣವಿಲ್ಲ.

**ಇ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ.**

ಬ್ರಹ್ಮ, ಪುಣ್ಯ, ಜ್ಞಾನ.

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಗಳನ್ನು ಬರೆಯಿರಿ.**

ಮುಳುಗು, ಬತ್ತು, ಫಲ, ಪುಣ್ಯ, ದಯೆ, ಜ್ಞಾನ.

## IV. ಚಟುವಟಿಕೆಗಳು :

೧. ಇಲ್ಲಿ ನೀಡಿರುವ ಬಸವಣ್ಣ ಮತ್ತು ಅಕ್ಕಮಹಾದೇವಿ ಇವರ ವಚನಗಳನ್ನು ಕಂಠಪಾಠ ಮಾಡಿರಿ.

೨. ವಚನಕಾರರ ಹೆಸರು ಹಾಗೂ ಅವರ ಅಂಕಿತನಾಮಗಳನ್ನು ಸಂಗ್ರಹಿಸಿ ಬರೆಯಿರಿ.

೩. ಆಧುನಿಕ ವಚನಕಾರರ ವಚನಗಳನ್ನು ಸಂಗ್ರಹಿಸಿ, ನೀವೂ ಅದೇ ರೀತಿ ಬರೆಯಲು ಪ್ರಯತ್ನಿಸಿ.

©KTBS Not to be republished

# ೮. ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

– **ಕುಮಾರವ್ಯಾಸ** (ಗದುಗಿನ ನಾರಣಪ್ಪ)

**ಪಾಠ ಪ್ರವೇಶ :** ಕನ್ನಡ ಸಾಹಿತ್ಯಕ್ಕೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಭಾಷೆಯ ದೃಷ್ಟಿಯಿಂದ ಕನ್ನಡ ಸಾಹಿತ್ಯವನ್ನು ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡವೆಂದು ಗುರುತಿಸಲಾಗಿದೆ. ನಡುಗನ್ನಡದ ಶ್ರೇಷ್ಠ ಕಾವ್ಯಗಳಲ್ಲಿ ಕುಮಾರವ್ಯಾಸನು ರಚಿಸಿದ 'ಗದುಗಿನ ಭಾರತ' ಬಹು ಜನಪ್ರಿಯವಾದುದು. ವ್ಯಾಸ ಮಹಾಭಾರತದ ಕಥೆಯನ್ನು ಆಧಾರವಾಗಿಟ್ಟುಕೊಂಡು ಕುಮಾರವ್ಯಾಸನು ಇಡೀ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾನೆ. ಈ ಕಾವ್ಯದ ಕೆಲವು ಪದ್ಯಗಳನ್ನು ನಿಮಗಿಲ್ಲಿ ಪರಿಚಯಿಸಿದೆ.

ಮಹಾಭಾರತದಲ್ಲಿ 'ಉತ್ತರನ ಪೌರುಷ' ಒಂದು ಸ್ವಾರಸ್ಯಕರ ಪ್ರಸಂಗ. ಈ ಪ್ರಸಂಗವನ್ನು ಕುಮಾರವ್ಯಾಸ ತನ್ನ ಕಾವ್ಯದಲ್ಲಿ ರಸಪೂರ್ಣವಾಗಿ ಚಿತ್ರಿಸಿದ್ದಾನೆ. ಶೌರ್ಯವಿಲ್ಲದೆ ಬಡಾಯಿ ಕೊಚ್ಚಿಕೊಳ್ಳುವವರನ್ನು ಉತ್ತರಕುಮಾರನೆಂದು ಕರೆಯುತ್ತಾರೆ. 'ಉತ್ತರನ ಪೌರುಷ ಒಲೆಯ ಮುಂದೆ, ನಿನ್ನ ಪೌರುಷ ಎಲೆಯ ಮುಂದೆ' ಎನ್ನುವ ಗಾದೆ ಈ ಹಿನ್ನೆಲೆಯಲ್ಲಿಯೇ ಹುಟ್ಟಿಕೊಂಡಿದೆ. ಬರಿಯ ಬಾಯಿ ಬಡಿವಾರ ತೋರಿ, ನಗೆಪಾಟಲಿಗೆ ಒಳಗಾಗುವ ಬದಲು ಕಾರ್ಯಮಾಡಿ ಶೂರರೆನಿಸಿಕೊಳ್ಳಬೇಕು ಎನ್ನುವುದು ಇಲ್ಲಿಯ ಆಶಯವಾಗಿದೆ.

**ಕಥಾ ಸಂದರ್ಭ :** ಪಾಂಡವರು ಹನ್ನೆರಡು ವರ್ಷ ವನವಾಸವನ್ನು ಪೂರೈಸಿ, ವಿರಾಟರಾಜನ ಮತ್ಸ್ಯ ದೇಶದಲ್ಲಿ ವೇಷ ಮರೆಸಿಕೊಂಡು ಒಂದು ವರ್ಷದಿಂದ ಅಜ್ಞಾತವಾಸ ನಡೆಸುತ್ತಿರುತ್ತಾರೆ. ಈ ಸಂದರ್ಭದಲ್ಲಿ ಭೀಮನಿಂದ ಕೀಚಕನ ವಧೆ ಆಗುತ್ತದೆ. ಈ ವಿಚಾರ ದುರ್ಯೋಧನನಿಗೆ ತಿಳಿದು, ಪಾಂಡವರನ್ನು ಪತ್ತೆಹಚ್ಚುವ ಸಲುವಾಗಿ ವಿರಾಟರಾಜನ ಮೇಲೆ ಧಾಳಿ ನಡೆಸಿ, ಆತನ ಗೋವುಗಳನ್ನು ಅಪಹರಿಸುತ್ತಾನೆ. ಆಗ ವಿರಾಟನ ಮಗನಾದ ಉತ್ತರಕುಮಾರನು 'ನನ್ನ ಸಾಮರ್ಥ್ಯಕ್ಕೆ ತಕ್ಕನಾದ ಒಬ್ಬ ಒಳ್ಳೆಯ ಸಾರಥಿ ಸಿಕ್ಕಿದ್ದರೆ, ಕುರು ಸೈನ್ಯವನ್ನು ಬಗ್ಗುಬಡಿದು ಗೋವುಗಳನ್ನು ಬಿಡಿಸಿ ತರುತ್ತಿದ್ದೆ.....' ಎಂದು ಚಡಪಡಿಸುತ್ತ ಹೆಂಗಳೆಯರ ಮುಂದೆ ಜಂಭಕೊಚ್ಚಿಕೊಳ್ಳುತ್ತಾನೆ. ಆಗ ಸೈರಂಧ್ರಿಯು ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನನನ್ನು ಸಾರಥಿಯಾಗಲು ಒಪ್ಪಿಸುತ್ತಾಳೆ. ಅರ್ಜುನನ ಸಾರಥ್ಯದಲ್ಲಿ ರಥವು ರಣರಂಗದತ್ತ ಮುನ್ನುಗ್ಗಿದಾಗ, ಉತ್ತರಕುಮಾರನು ಕೌರವ ಸೇನೆಯನ್ನು ನೋಡಿ ಹೆದರುತ್ತ ರಥದಿಂದ ಇಳಿದು ಓಡಲು ಯತ್ನಿಸುತ್ತಾನೆ. ಆತನಿಗೆ ಧೈರ್ಯತುಂಬಿ ಅರ್ಜುನ ತಾನೇ ಯುದ್ಧಕ್ಕೆ ನಿಲ್ಲುತ್ತಾನೆ. ಉತ್ತರನು ರಣರಂಗದಲ್ಲಿ ಕುರುಸೇನೆ ನೋಡಿ ಹೆದರುತ್ತಾ ಹೀಗೆ ಹೇಳುತ್ತಾನೆ.....

©KTBS Not to be republished

ಕಡೆಗೆ ಹಾಯವು ಕಂಗಳೀ ಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ
ಪೊಡವಿಯೀದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ ॥ ೧ ॥

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ॥ ೨ ॥



©KTBS Not to be republished

ಮನದಲೊಡಲೊಡೆವಂತೆ ನಗುತಲ
ರ್ಜುನನು ಗಜರಿದನೆಲವೊ ಸಭೆಯಲಿ
ವನಜಮುಖಿಯರ ಮುಂದೆ ಸೊರಹಿದೆ ಬಾಯ್ಗೆ ಬಂದಂತೆ
ಅನುವರದೊಳೇನಾಯ್ತು ರಿಪುವಾ
ಹಿನಿಯನಿರಿಯದೆ ನಾಡ ನರಿಯವೊ
ಲೆನಗೆ ನೀ ಹಲುಗಿರಿಯೆ ಬಿಡುವೆನೆ ಕಾದು ನಡೆಯೆಂದ ॥ ೩ ॥

ಧುರದಲೋಡಿದ ಪಾತಕವ ಭೂ
ಸುರರು ಕಳೆದಪರಶ್ವಮೇಧವ
ಧರಣಿಯಲಿ ಪ್ರತ್ಯಕ್ಷವಾಗಿಯೆ ಮಾಡಬಹುದೆಮಗೆ
ಸುರರ ಸತಿಯರನೊಲ್ಲೆವೆಮಗೆ
ಮ್ಮರಮನೆಯ ನಾರಿಯರೆ ಸಾಕೆ
ಮ್ಮರಸುತನವೆಮಗಿಂದ್ರ ಪದವಿಯು ಬಿಟ್ಟುಕಳುಹೆಂದ ॥ ೪ ॥

* * * *

## ಕೃತಿಕಾರರ ಪರಿಚಯ :



**ಕುಮಾರವ್ಯಾಸನ** (ನಾರಣಪ್ಪ) ಊರು ಗದುಗಿನ ಕೋಳಿವಾಡ. ಈತನ ಕಾಲ ಸುಮಾರು ೧೪೩೦. ಕುಮಾರವ್ಯಾಸನು **'ಕರ್ಣಾಟ ಭಾರತ ಕಥಾಮಂಜರಿ'** ಅಥವಾ **'ಗದುಗಿನ ಭಾರತ'** ಎಂಬ ಶ್ರೇಷ್ಠಕಾವ್ಯವನ್ನು ಬರೆದಿದ್ದಾನೆ. 'ಐರಾವತ' ಕೃತಿಯೂ ಇವನದೆಂದು ಹೇಳಲಾಗಿದೆ. ವ್ಯಾಸರು ಸಂಸ್ಕೃತದಲ್ಲಿ ರಚಿಸಿರುವ 'ಮಹಾಭಾರತ'ವನ್ನು ನಾರಣಪ್ಪನು ಕನ್ನಡದಲ್ಲಿ ಬರೆದವನಾದುದರಿಂದ ಕುಮಾರವ್ಯಾಸನೆಂಬ ಅಭಿದಾನವನ್ನು ಹೊಂದಿದ್ದಾನೆ. ಕಾವ್ಯದ ಉದ್ದಕ್ಕೂ ರೂಪಕಾಲಂಕಾರವನ್ನು ಬಹಳವಾಗಿ ಬಳಸಿದವನಾದುದರಿಂದ ಈತನನ್ನು **'ರೂಪಕ ಸಾಮ್ರಾಜ್ಯ ಚಕ್ರವರ್ತಿ'** ಎಂದು ಕರೆಯಲಾಗುತ್ತದೆ. 'ಗದುಗಿನ ಭಾರತ' ಭಾಮಿನಿ ಷಟ್ಪದಿಯಲ್ಲಿದೆ. ಪ್ರಸ್ತುತ ಪದ್ಯವನ್ನು 'ಗದುಗಿನ ಭಾರತ'ದಿಂದ ಆಯ್ದುಕೊಂಡಿದೆ.

©KTBS Not to be republished



ಪುಸ್ತಕಗಳನ್ನು ಸರಿಯಾಗಿ ಬಳಸಿದರೆ ನಮ್ಮ ಬಾಳನ್ನು ಬೆಳಗುತ್ತವೆ – ಹಾ.ಮಾ. ನಾಯಕ

**ಟಿಪ್ಪಣಿಗಳು :**

**೧. ಅಶ್ವಮೇಧ :** ಕುದುರೆಯನ್ನು ಬಲಿಕೊಟ್ಟು ಮಾಡುವ ಯಾಗ. ಹಿಂದೆ ಶ್ರೀರಾಮಚಂದ್ರನು ಮತ್ತು ಪಾಂಡವರು ಈ ಯಾಗ ಮಾಡಿದ್ದರು. ಯಾಗ ನಿರ್ವಹಣೆಗಾಗಿ ಅಪಾರ ಸಂಪತ್ತು ಖರ್ಚಾಗುತ್ತಿದ್ದುದರಿಂದ ಯಾಗದ ಅಶ್ವವನ್ನು ಒಂದು ವರ್ಷ ದೇಶ ಸಂಚಾರಕ್ಕೆ ಬಿಡುತ್ತಿದ್ದರು. ಕುದುರೆಯನ್ನು ಕಟ್ಟದೆ ಗೌರವಿಸಿದವರು ಮತ್ತು ಕುದುರೆಯನ್ನು ಕಟ್ಟಿ ಯುದ್ಧಮಾಡಿ ಸೋತವರು ಅಪಾರ ಸಂಪತ್ತನ್ನು ಕುದುರೆಯ ರಾಜನಿಗೆ ನೀಡಬೇಕಾಗಿತ್ತು. ಸಾಮಾನ್ಯವಾಗಿ ಮಹಾಶೂರರೇ ಈ ಯಾಗವನ್ನು ಕೈಗೊಳ್ಳುತ್ತಿದ್ದುದರಿಂದ ಅವರಿಗೇ ಜಯಪ್ರಾಪ್ತಿಯಾಗುತ್ತಿತ್ತು.

**೨. ಇಂದ್ರಪದವಿ :** ನೂರು ಯಾಗಗಳನ್ನು ಮಾಡಿದವರಿಗೆ ಈ ಪದವಿ ಸಿಗುತ್ತದಂತೆ.

## ಅಭ್ಯಾಸ

## I. ಪದಗಳ ಅರ್ಥ :

### ಪದ್ಯ – ೧.

**ಕಡೆ** – ಕೊನೆ. **ಹಾಯವು** – ದಾಟದು; ತಾಗದು. **ಬಲಗಡಲು** – ಬಲ + ಕಡಲು (ಆದೇಶ ಸಂಧಿ). **ಬಲವೆಂಬಕಡಲು** (ಕರ್ಮಧಾರಯ ಸಮಾಸ). **ಬಲ** – ಸೈನ್ಯ. **ಕಡಲು** – ಸಮುದ್ರ. **ಮನವೀಸಾಡಲಾರದು** – (ಮನವು + ಈಸಾಡಲು + ಆರದು) ಮನವು ಈಜಲಾರದು. **ಒಡಲುವಿಡಿದಿರಲೇನ** – ಒಡಲು + ಪಿಡಿ – ಒಡಲುವಿಡಿ (ಅದೇಶ ಸಂಧಿ). ಒಡಲು + ಪಿಡಿದು + ಇರಲು + ಏನು – ದೇಹವನ್ನು ಹೊಂದಿ ಇರುವಾಗ ಏನನ್ನು. **ಪೊಡವಿ (ದ್ಭ)** – ಪೃಥ್ವಿ (ತ್ಸ); ಭೂಮಿ. **ಈದುದೋ** – ಹೆತ್ತಿದೆಯೋ; ಮರಿಹಾಕಿದೆಯೋ. **ಮೋಹರ** – ಸೈನ್ಯ. **ಮೃಡ** – ಶಿವ. **ಕಾದಿಗೆಲಿದೆವು** – ಯುದ್ಧಮಾಡಿ ಗೆದ್ದಂತೆಯೇ.

### ಪದ್ಯ – ೨.

**ಸಂವರಿಸಿ** – ಸಜ್ಜುಗೊಳಿಸಿ. ಒಟ್ಟುಗೂಡಿಸಿ. **ಮುಂಜೆರಗು** – ಸೆರಗ + ಮುಂದು (ಅಂಶಿ ಸಮಾಸ) ಮುಂ + ಸೆರಗು – ಮುಂಜೆರಗು (ಆದೇಶ ಸಂಧಿ). **ನಿಟ್ಟೋಟ** – ನಿಡಿದು ಓಟ (ಕರ್ಮಧಾರಯ ಸಮಾಸ). **ಬಿಟ್ಟಮಂಡೆ** – ಕೂದಲು ಕೆದರಿದ ತಲೆ.

©KTBS Not to be republished

**ಪದ್ಯ – ೩.**

**ಮನದಲೊಡಲೊಡೆವಂತೆ** – ಮನದಲಿ + ಒಡಲು + ಒಡೆವಂತೆ, **ಒಡಲು** – ದೇಹ, ಶರೀರ. **ಗಜರು** – ಗದರಿಸು. **ವನಜ** – ಜಲದಲ್ಲಿ ಜನಿಸಿದ್ದು; ತಾವರೆ. **ವನಜಮುಖಿ** – ತಾವರೆಯಂತೆ ಮುಖ ಉಳ್ಳವಳು. **ಸೊರಹು** – ಬಾಯಿಗೆ ಬಂದಂತೆ ಹೇಳು. **ಅನುವರದೊಳೇನಾಯ್ತು** –ಅನುವರದೊಳು + ಏನು + ಆಯ್ತು. **ಅನುವರ** – ಯುದ್ಧ. **ರಿಪು** – ಶತ್ರು. **ವಾಹಿನಿ** – ಸೈನ್ಯ. **ಹಲುಗಿರಿಯೆ** –ಹಲು + ಕಿರಿಯೆ (ಆದೇಶ ಸಂಧಿ). **ನಾಡ ನರಿ** – ಊರಿನ ನರಿ ; ಅಂಜುಬುರುಕ ನರಿ.

**ಪದ್ಯ – ೪.**

**ಧುರದಲೋಡಿದ** –ಧುರದಲಿ + ಓಡಿದ. **ಧುರ** – ಯುದ್ಧ. **ಪಾತಕ** – ಪಾಪ. **ಧರಣಿ** – ಭೂಮಿ. **ಭೂಸುರರು** – ಭೂಮಿಯ ಸುರರು (ಷಷ್ಠಿ ತತ್ಪುರುಷ ಸಮಾಸ); ಬ್ರಾಹ್ಮಣರು. **ಸುರರ ಸತಿ** – ದೇವಸ್ತ್ರೀ; ಅಪ್ಸರೆ. **ಸತಿಯರನೊಲ್ಲೆವೆಮಗೆಮ್ಮರಮನೆಯ** – ಸತಿಯರನು + ಒಲ್ಲೆವು + ಎಮಗೆ + ಎಮ್ಮ + ಅರಮನೆಯ. **ಸಾಕೆಮ್ಮರಸುತನವೆಮಗಿಂದ್ರ.** – ಸಾಕು + ಎಮ್ಮ + ಅರಸು ತನವು + ಎಮಗೆ + ಇಂದ್ರ. **ಇಂದ್ರಪದವಿ** – ಇಂದ್ರನ ಪದವಿ (ಷಷ್ಠಿ ತತ್ಪುರುಷ ಸಮಾಸ).

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?
೨. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?
೩. ಧುರಕ್ಕೆ ಬೆನ್ನುಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?
೪. ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?
೫. ಉತ್ತರನಿಗೆ ಇಂದ್ರಪದವಿಯು ಏಕೆ ಬೇಕಿಲ್ಲ?
೬. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಶತ್ರುಬಲಕೆ 'ನಮೋ' ಎಂದು ಉತ್ತರನು ಏಕೆ ಹೇಳಿದನು?
೨. ಒಡಲು ಒಡೆವಂತೆ ಅರ್ಜುನನು ಮನದಲಿ ನಗಲು ಕಾರಣವೇನು?
೩. 'ಕಾದುನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು?
೪. ಯುದ್ಧವನ್ನು ಮಾಡದೆಯೆ ಸುಖಪಡಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು?



ಓದು ಒಕ್ಕಾಲು ಬುದ್ಧಿ ಮುಕ್ಕಾಲು – ಗಾದೆ

Not to be republished ©KTBS

**ಇ) ಸುಮಾರು ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

೨. ಅರ್ಜುನ ಮತ್ತು ಉತ್ತರನ ಗುಣ ಸ್ವಭಾವಗಳಲ್ಲಿ ಯಾವ ವ್ಯತ್ಯಾಸಗಳು ಕಂಡುಬರುತ್ತವೆ?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಶಿವ ಶಿವ ಕಾದಿಗೆಲಿದೆವು.

೨. ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ.

೩. ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ.

೪. ಎಮ್ಮರಮನೆಯ ನಾರಿಯರೆ ಸಾಕು.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಸೈನ್ಯ, ಹೆಣ್ಣು, ಯುದ್ಧ, ಭೂಮಿ, ಶಿವ.

**ಆ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ.**

ಪೊಡವಿ, ಮುಖ, ಅದ್ಭುತ,

**ಇ) ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ, ಸಮಾಸದ ಹೆಸರು ಬರೆಯಿರಿ.**

ಅರಮನೆ, ವನಜಮುಖಿ, ನಿಟ್ಟೋಟ, ಬಲಗಡಲು.

**ಈ) ಕೆಳಗಿನ ಅಲಂಕಾರಿಕ ಪದಗಳನ್ನು ಸಮನ್ವಯಗೊಳಿಸಿ ಅಲಂಕಾರದ ಹೆಸರು ತಿಳಿಸಿರಿ.**

ವನಜಮುಖಿ, ನಾಡನರಿ, ಬಲಗಡಲು.

## IV. ಚಟುವಟಿಕೆಗಳು :

೧. ಈ ಪದ್ಯ ಭಾಗದ ೧ ನೇ ಮತ್ತು ೨ ನೇ ಕಂಡಿಕೆಗಳನ್ನು ಕಂಠಪಾಠ ಮಾಡಿರಿ.

೨. ಕುಮಾರವ್ಯಾಸ ಭಾರತದ ವಿರಾಟಪರ್ವ ಭಾಗದಿಂದ ಆಯ್ದ ಈ ಪದ್ಯಗಳ ನಡುವೆ ಇನ್ನೂ ಕೆಲವು ಪದ್ಯಗಳು ಇವೆ. ಅವುಗಳ ಸ್ವಾರಸ್ಯವನ್ನು ಓದಿ ತಿಳಿಯಿರಿ.

೩. 'ಗಮಕ' ಎಂಬುದು ಹಳಗನ್ನಡದ ಕಾವ್ಯಗಳನ್ನು ರಾಗವಾಗಿ ವಾಚಿಸುವ ವಿಶಿಷ್ಟ ಶೈಲಿ. ಗಮಕ ವಾಚನಕ್ಕೆ ಭಾಮಿನಿ ಷಟ್ಪದಿ ಅತ್ಯಂತ ಸೂಕ್ತವಾದುದು. ನೀವು ಗಮಕ ವಾಚನದ ಅಡಕ ಮುದ್ರಿಕೆ (ಸಿ.ಡಿ) ಗಳನ್ನು ಸಂಗ್ರಹಿಸಿ, ಅದರಂತೆ ಹಾಡುವುದನ್ನು ಕಲಿಯಿರಿ.

* * * * *

©KTBS Not to be republished

# ಛಂದಸ್ಸು

ವ್ಯಾಕರಣವು ಗದ್ಯ ಪದ್ಯಗಳೆರಡಕ್ಕೂ ಸಂಬಂಧಿಸಿದರೆ, ಛಂದಸ್ಸು ಕೇವಲ ಪದ್ಯಗಳಿಗೆ ಸಂಬಂಧಿಸಿದೆ. ಒಂದು ಗೊತ್ತಾದ ಸಾಲುಗಳ (ಪಾದಗಳ) ನಿಯಮದಿಂದ ಬರೆದವುಗಳೇ ಪದ್ಯಗಳು. ಪದ್ಯಗಳು ಸಾಲುಗಳಿಂದಲೂ, ಸಾಲುಗಳು ಪ್ರಾಸ, ಯತಿ, ಗಣಗಳ ನಿಯಮಗಳಿಂದಲೂ ಕೂಡಿರುತ್ತವೆ. ಅವುಗಳನ್ನು ಸಂಕ್ಷಿಪ್ತವಾಗಿ ತಿಳಿಯೋಣ.

**೧. ಪ್ರಾಸ :** ಪದ್ಯದ ಪ್ರತಿಯೊಂದು ಸಾಲಿನ ಒಂದನೆಯ ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ರೀತಿಯ ವ್ಯಂಜನಾಕ್ಷರಗಳು ಬರುವುದನ್ನು ಪ್ರಾಸ ಎನ್ನುತ್ತಾರೆ. ಈ ಪ್ರಾಸವು ಪಾದದ ಕೊನೆಯ ಎರಡು ಸ್ವರಾಕ್ಷರಗಳ ನಡುವೆಯೂ ಬರಬಹುದು.

**ಉದಾ :** ಕಡೆಗೆ ಹಾಯವು ಕಂಗಳೀ ಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ

ಈ ಮೇಲಿನ ಪದ್ಯದ ಪ್ರತಿ ಪಾದದ ಆರಂಭದಲ್ಲಿ ಬಂದಿರುವ **'ಡ್'** ಅಕ್ಷರ ಪ್ರಾಸವಾಗಿದೆ. ಪ್ರಾಸಾಕ್ಷರದ ಹಿಂದೆ ಹ್ರಸ್ವ ಸ್ವರವಿದ್ದರೆ ಎಲ್ಲಾ ಸಾಲುಗಳಲ್ಲಿ ಹ್ರಸ್ವ ಸ್ವರವೂ, ದೀರ್ಘ ಸ್ವರವಿದ್ದರೆ ಎಲ್ಲಾ ಕಡೆ ದೀರ್ಘ ಸ್ವರವು, ಅನುಸ್ವಾರ ವಿಸರ್ಗಗಳಿದ್ದರೆ ಎಲ್ಲಾ ಕಡೆ ಅನುಸ್ವಾರ ವಿಸರ್ಗಗಳು ಬಂದಿರಬೇಕು. ಪ್ರಾಸದಲ್ಲಿ ಸಿಂಹಪ್ರಾಸ, ಗಜಪ್ರಾಸ, ವೃಷಭಪ್ರಾಸ, ಅಜಪ್ರಾಸ, ಶರಭಪ್ರಾಸ ಹಾಗೂ ಹಯಪ್ರಾಸ ಎಂಬುದಾಗಿ ಆರು ವಿಧಗಳಿವೆ. ಪ್ರಸ್ತುತ ಪದ್ಯದಲ್ಲಿ ಬಂದಿರುವ ಪ್ರಾಸಾಕ್ಷರಗಳನ್ನು ಗುರುತಿಸಿ ಬರೆಯಿರಿ.

**೨. ಯತಿ :** ಪದ್ಯಗಳನ್ನು ಓದುವಾಗ ಅರ್ಥಕ್ಕನುಸಾರ ಅನುಸರಿಸುವ ನಿಲುಗಡೆಯನ್ನು 'ಯತಿ' ಎಂದು ಕರೆಯಲಾಗುತ್ತದೆ. ಕನ್ನಡದ ಕವಿಗಳು ಪ್ರಾಸಕ್ಕೆ ಪ್ರಾಧಾನ್ಯತೆ ನೀಡಿ ಯತಿಯನ್ನು ಅಲಕ್ಷಿಸಿದ್ದಾರೆ. ಹೀಗಾಗಿ ಹಳಗನ್ನಡದ ಪದ್ಯಗಳನ್ನು ಓದುವುದು ಸ್ವಲ್ಪ ಕಷ್ಟವೆನಿಸುತ್ತದೆ.

**೩. ಗಣ :** ಗಣ ಎಂದರೆ ಗುಂಪು, ಸಮೂಹ ಎಂದು ಅರ್ಥ. ಪದ್ಯದ ಪ್ರತಿಯೊಂದು ಸಾಲಿನಲ್ಲೂ ಮಾತ್ರೆ, ಅಕ್ಷರ ಮತ್ತು ಅಂಶಗಳ ಲೆಕ್ಕದಲ್ಲಿ ಗಣಗಳನ್ನು ವಿಂಗಡಿಸಲಾಗುತ್ತದೆ. ಗಣ ವಿಂಗಡಿಸುವ ಮೊದಲು ಪ್ರಸ್ತಾರ ಹಾಕುವುದನ್ನು ತಿಳಿದಿರಬೇಕು. ಪದ್ಯದ ಅಕ್ಷರಗಳಿಗೆ 'ಲಘು' 'ಗುರು' ಗುರುತಿಸುವುದನ್ನು **'ಪ್ರಸ್ತಾರ'**, ಅಥವಾ **'ಮಾತ್ರೆಗಳ ಲೆಕ್ಕಾಚಾರ'** ಎನ್ನುತ್ತೇವೆ. ಮೊದಲಿಗೆ 'ಲಘು' 'ಗುರು' ಹಾಕುವ ಕ್ರಮವನ್ನು ತಿಳಿದುಕೊಳ್ಳೋಣ.

©KTBS Not to be republished

ಒಂದು ಮಾತ್ರಾಕಾಲದಲ್ಲಿ ಉಚ್ಚಾರ ಮಾಡಲಾಗುವ ಅಕ್ಷರಗಳನ್ನು **'ಲಘು'** (U) ಎಂತಲೂ, ಎರಡು ಮಾತ್ರಾ ಕಾಲದಲ್ಲಿ ಉಚ್ಚಾರ ಮಾಡಲಾಗುವ ಅಕ್ಷರಗಳನ್ನು **'ಗುರು'** (–) ಎಂತಲೂ ಕರೆಯಲಾಗುತ್ತದೆ.

**'ಲಘು' (U) ಚಿಹ್ನೆಯನ್ನು ಗುರುತಿಸಬೇಕಾದ ಅಕ್ಷರಗಳು :**

U U U U U U
೧. ಹ್ರಸ್ವಸ್ವರಗಳ ಮೇಲೆ : ಅ ಇ ಉ ಋ ಎ ಒ

U U U U U U U U U
೨. ಹ್ರಸ್ವಸ್ವರಗಳಿಂದ ಕೂಡಿದ ಗುಣಿತಾಕ್ಷರಗಳ ಮೇಲೆ : ಕ ಕಿ ಕು ಕೃ ಕೆ ಕೊ ಚ ಟು ಸಿ

**'ಗುರು' (–) ಚಿಹ್ನೆಯನ್ನು ಗುರುತಿಸಬೇಕಾದ ಅಕ್ಷರಗಳು :**

– – – – – – –
೧. ದೀರ್ಘ ಸ್ವರಗಳ ಮೇಲೆ : ಆ ಈ ಊ ಏ ಐ ಓ ಔ

– – – – – – –
೨. ದೀರ್ಘಸ್ವರಗಳಿಂದ ಕೂಡಿದ ಗುಣಿತಾಕ್ಷರಗಳ ಮೇಲೆ : ಕಾ ಕೀ ಕೂ ಕೇ ಕೈ ಕೋ ಕೌ

– – – – – –
೩. ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರಗಳ ಮೇಲೆ : ಅಂ ತಃ ಸಂ ನಿಂ ಚಃ ಕೋಂ

–U –U –UU –UU
೪. ಒತ್ತಕ್ಷರದ ಹಿಂದಿನ ಅಕ್ಷರದ ಮೇಲೆ : ಕಲ್ಲು ಮಣ್ಣು ಕನ್ನಡ ಮೆತ್ತಗೆ

– – – – –
೫. ವ್ಯಂಜನಾಕ್ಷರದ ಹಿಂದಿನ ಅಕ್ಷರದ ಮೇಲೆ : ನಿಲ್ ಕಣ್ ನೀರ್ ಮೇಣ್ ಪೆಣ್

೬. ಷಟ್ಪದಿ ಪದ್ಯಗಳಲ್ಲಿ ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆಂದು ಭಾವಿಸಬೇಕು.

## ಛಂದಸ್ಸಿನ ವಿಧಗಳು :

## ೧. ಮಾತ್ರಾಗಣ ಛಂದಸ್ಸು :

ಮೂರು, ನಾಲ್ಕು, ಐದು ಮಾತ್ರೆಗಳ ಲೆಕ್ಕಾಚಾರದಲ್ಲಿ ಗಣ ವಿಂಗಡಿಸುವುದನ್ನು **'ಮಾತ್ರಾಗಣ ಛಂದಸ್ಸು'** ಎಂದು ಕರೆಯುತ್ತೇವೆ. ಕಂದ, ರಗಳೆ, ಷಟ್ಪದಿ ಇವು ಮಾತ್ರಾಗಣ ಛಂದಸ್ಸಿಗೆ ಒಳಪಡುವ ಪದ್ಯ ಜಾತಿಗಳು.

©KTBS
Not to be republished

## ೨. ಅಕ್ಷರಗಣ ಛಂದಸ್ಸು :

ಮಾತ್ರೆಗಳನ್ನು ಲೆಕ್ಕಹಾಕದೆ ಮೂರು ಅಕ್ಷರಗಳಿಗೆ ಗಣ ವಿಂಗಡಿಸುವುದನ್ನು **'ಅಕ್ಷರಗಣ ಛಂದಸ್ಸು'** ಎನ್ನುತ್ತೇವೆ. ಖ್ಯಾತ ಕರ್ನಾಟಕಗಳು (ವೃತ್ತ ಜಾತಿಯ ಪದ್ಯಗಳು) ಅಕ್ಷರಗಣ ಛಂದಸ್ಸಿಗೆ ಒಳಪಡುತ್ತವೆ.

## ೩. ಅಂಶಗಣ ಛಂದಸ್ಸು :

ಅಂಶಗಳ ಲೆಕ್ಕದಲ್ಲಿ ಗಣವಿಂಗಡಣೆ ಮಾಡುವುದನ್ನು **'ಅಂಶಗಣ'** ಎಂದು ಕರೆಯುತ್ತೇವೆ.

ಇಲ್ಲಿ ಮಾತ್ರಾಗಣ ಛಂದಸ್ಸಿಗೆ ಒಳಪಡುವ ಷಟ್ಪದಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದೆ. ಇವುಗಳನ್ನು ತಿಳಿಯುವ ಮೊದಲು ಪ್ರಸ್ತಾರ ಹಾಕುವುದನ್ನು ಹೆಚ್ಚು ಹೆಚ್ಚು ಅಭ್ಯಾಸ ಮಾಡಿರಿ.

## ಷಟ್ಪದಿಗಳು :

'ಷಟ್ಪದಿ' ಎಂದರೆ ಆರು ಸಾಲುಗಳಿರುವ ಪದ್ಯ. (**ಷಟ್** – ಆರು, **ಪದಿ** – ಪಾದ; ಸಾಲು). ಷಟ್ಪದಿಗಳಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂಬುದಾಗಿ ಆರು ವಿಧಗಳಿವೆ. ಷಟ್ಪದಿಯಲ್ಲಿ ೧, ೨, ೪ ಮತ್ತು ೫ ನೇ ಸಾಲುಗಳು ಮಾತ್ರೆ ಮತ್ತು ಗಣಗಳ ಲೆಕ್ಕಾಚಾರದಲ್ಲಿ ಸಮವಾಗಿರುತ್ತವೆ. ಅದೇರೀತಿ ೩ ಮತ್ತು ೬ ನೇ ಸಾಲುಗಳು ಮಾತ್ರೆ ಮತ್ತು ಗಣಗಳ ಲೆಕ್ಕಾಚಾರದಲ್ಲಿ ಸಮವಾಗಿದ್ದು, ಮೇಲೊಂದು ಹೆಚ್ಚುವರಿ 'ಗುರು' ಹೊಂದಿರುತ್ತದೆ. ಈ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆಂದು ಭಾವಿಸಬೇಕು. ಪದ್ಯದ ಮೊದಲ ಮೂರು ಸಾಲುಗಳನ್ನು ಪೂರ್ವಾರ್ಧ ಎಂತಲೂ ನಂತರದ ಮೂರು ಸಾಲುಗಳನ್ನು ಉತ್ತರಾರ್ಧ ಎಂತಲೂ ಕರೆಯುತ್ತೇವೆ. ಪದ್ಯದ ಪೂರ್ವಾರ್ಧ ಮತ್ತು ಉತ್ತರಾರ್ಧದ ಸಾಲುಗಳ ಗಣ ವಿನ್ಯಾಸ ಒಂದೇ ತೆರನಾಗಿರುತ್ತದೆ. ಈ ಲಕ್ಷಣಗಳು ಸಾಮಾನ್ಯವಾಗಿ ಎಲ್ಲಾ ಷಟ್ಪದಿಗಳಿಗೂ ಅನ್ವಯಿಸುತ್ತವೆ.

ಇಲ್ಲಿ ನಿಮಗೆ **'ಭಾಮಿನಿ ಷಟ್ಪದಿ'** ಪದ್ಯದ ಲಕ್ಷಣವನ್ನು ಮಾತ್ರ ಪರಿಚಯಿಸಲಾಗಿದೆ.

| | | | |
|---|---|---|---|
| – U | – U U | U U U | U U UU |
| ಎಂದೊ | ಡರ್ಜುನ | ನಗುತ | ರಥವನು |

| | | | |
|---|---|---|---|
| – U | – – | U U U | – UU |
| ಮುಂದೆ | ನಾಲ್ಕೆಂ | ಟಡಿಯ | ನೂಕಲು |

| | | | | | | |
|---|---|---|---|---|---|---|
| – U | – – | U U U | UU– | U U U | – U U | – |
| ಕೊಂದ | ನೀಸಾ | ರಥಿಯೆ | ನುತಸಂ | ವರಿಸಿ | ಮುಂಜೆರ | ಗ |

©KTBS Not to be republished

**ಭಾಮಿನಿ ಷಟ್ಪದಿಯ ಲಕ್ಷಣಗಳು :**

೧. ಆರು ಪಾದಗಳುಳ್ಳ ಪದ್ಯ. (ಮೇಲಿನ ಉದಾಹರಣೆಯಲ್ಲಿ ಪದ್ಯದ ಪೂರ್ವಾರ್ಧ ಮಾತ್ರ ನೀಡಲಾಗಿದೆ. ಇದರಂತೆಯೇ ಉತ್ತರಾರ್ಧದ ಸಾಲುಗಳು ಇರುತ್ತವೆ.)

೨. ೧, ೨, ೪ ಮತ್ತು ೫ ನೆಯ ಸಾಲುಗಳು ಸಮವಾಗಿದ್ದು ಮೂರು–ನಾಲ್ಕು ಮಾತ್ರೆಯ ನಾಲ್ಕು ಗಣಗಳಿರುತ್ತವೆ.

೩. ೩ ಮತ್ತು ೬ ನೆಯ ಸಾಲುಗಳು ಸಮವಾಗಿದ್ದು ಮೂರು–ನಾಲ್ಕು ಮಾತ್ರೆಯ ಆರು ಗಣಗಳಿರುತ್ತವೆ. ಹಾಗೂ ಮೇಲೊಂದು ಗುರುವಿನಿಂದಲೂ ಕೂಡಿರುತ್ತದೆ.

೪. ಭಾಮಿನಿ ಷಟ್ಪದಿಯಲ್ಲಿ 'U _ U' ಈ ರೀತಿ ಮಧ್ಯೆ ಗುರು ಇರುವ ಗಣ ಬರಬಾರದು.

## ಅಲಂಕಾರ

ಕವಿಗಳು ಬರೆದ ಕಾವ್ಯಮಯ ಭಾಷೆಯಲ್ಲಿನ ಶಬ್ದ, ಅರ್ಥ, ವೈಚಿತ್ರ್ಯಗಳನ್ನು ತಿಳಿಸುವ ಶಾಸ್ತ್ರಕ್ಕೆ ಅಲಂಕಾರವೆಂದು ಹೆಸರು. ಅಲಂಕಾರದಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂದು ಎರಡು ವಿಧ.

**೧. ಶಬ್ದಾಲಂಕಾರ :** ಶಬ್ದಗಳ ಚಮತ್ಕಾರದಿಂದ ಕಾವ್ಯದ ಸೊಬಗು ಹೆಚ್ಚಿಸುವಂತಹ ಕುಶಲತೆಗೆ ಶಬ್ದಾಲಂಕಾರ ಎಂದು ಹೆಸರು.

**ಉದಾ :** ೧. ಬಲ್ಲವನೆ ಬಲ್ಲ ಬೆಲ್ಲದ ರುಚಿಯ.

೨. ಎಳೆಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಆಶಿಸಿ ಬಂದವು.

**೨. ಅರ್ಥಾಲಂಕಾರ :** ಅರ್ಥಚಮತ್ಕಾರದಿಂದ ಕಾವ್ಯದ ಸೊಬಗನ್ನು ಹೆಚ್ಚಿಸಿದ್ದರೆ, ಅವುಗಳಿಗೆ ಅರ್ಥಾಲಂಕಾರ ಎನ್ನುವರು. ಅರ್ಥಾಲಂಕಾರದಲ್ಲಿ ಹಲವು ವಿಧಗಳಿವೆ. ನೀವು ಈ ಕೆಳಗಿನ ಎರಡು ವಿಧಗಳನ್ನು ತಿಳಿದರೆ ಸಾಕು.

**ಅ) ಉಪಮಾಲಂಕಾರ :** ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ. ಇಲ್ಲಿ ಹೋಲಿಕೆಗಳನ್ನು 'ಉಪಮಾನ' ಎಂತಲೂ, ಯಾವುದಕ್ಕೆ ಹೋಲಿಕೆ ಕೊಡುವೆವೋ ಅದನ್ನು 'ಉಪಮೇಯ' ಎಂದೂ ಕರೆಯಲಾಗುತ್ತದೆ. ಉಪಮಾನ ಮತ್ತು ಉಪಮೇಯಗಳ ನಡುವೆ ಸಂಬಂಧ ಕಲ್ಪಿಸುವ ಶಬ್ದಗಳನ್ನು 'ಉಪಮಾವಾಚಕ' ಎನ್ನುತ್ತೇವೆ. ಈ ಮುಂದಿನ ಉದಾಹರಣೆಯನ್ನು ಗಮನಿಸಿ.



**ಹಸಿದು ಉಣ್ಣುವುದು ಪ್ರಕೃತಿ, ಹಸಿಯದೇ ಉಣ್ಣುವುದು ವಿಕೃತಿ.**

©KTBS Not to be republished

**ಉದಾ :** ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ.

| | |
|---|---|
| ಉಪಮಾನ | – ಚಂದ್ರ |
| ಉಪಮೇಯ | – ಮಗುವಿನ ಮುಖ |
| ಉಪಮಾವಾಚಕ | – ಅಂತೆ |
| ಸಮಾನ ಧರ್ಮ | – ಚಂದ್ರ ಮತ್ತು ಮಗುವಿನ ಮುಖದಲ್ಲಿರುವ ಮನೋಹರತೆ |

**ಆ) ರೂಪಕಾಲಂಕಾರ :** ಒಂದು ಮತ್ತೊಂದರಂತೆ ಇದೆ ಎಂದು ಹೇಳದೆ, ಹೋಲಿಸುವ ವಸ್ತುಗಳೆರಡೂ ಒಂದೇ ಎಂದು ವರ್ಣಿಸುವುದನ್ನು ರೂಪಕಾಲಂಕಾರ ಎನ್ನುತ್ತಾರೆ. ಇಲ್ಲಿ ಉಪಮಾನ ಮತ್ತು ಉಪಮೇಯಗಳ ನಡುವೆ ಭೇದ ಇರುವುದಿಲ್ಲ. (ಅಭೇದ ಕಲ್ಪನೆ).

**ಉದಾ :** ಸೀತೆಯ ಮುಖಕಮಲ ಅರಳಿತು.

ಉಪಮಾನ – ಕಮಲ

ಉಪಮೇಯ – ಸೀತೆಯ ಮುಖ

ಇಲ್ಲಿ ಸೀತೆಯ ಮುಖವನ್ನು ಕಮಲಕ್ಕೆ ಹೋಲಿಸಲಾಗಿದೆಯಾದರೂ ಸೀತೆಯ ಮುಖ ಮತ್ತು ಕಮಲ ಬೇರೆಬೇರೆ ಎಂದು ಹೇಳಲಾಗಿಲ್ಲ.

©KTBS Not to be republished

## ರಚನೆ :

# ಪತ್ರ ಲೇಖನ

ದೂರವಾಣಿ, ಮಿಂಚಂಚೆ, ಗಣಕಯಂತ್ರ ಮುಂತಾದ ಆಧುನಿಕ ಸೌಲಭ್ಯಗಳಿಂದ ಪತ್ರ ಸಂಸ್ಕೃತಿ ಸ್ವಲ್ಪಮಟ್ಟಿಗೆ ದೂರವಾಗಿದೆ. ಕೈಬರೆಹದ ಪತ್ರವು ನೀಡುವ ಆತ್ಮೀಯತೆ, ಆಪ್ತತೆ ಮತ್ತು ಭಾವ ಸಂಬಂಧಿ ಸಂವೇದನೆಗಳು ಮಾಯವಾಗಿವೆ. ಪತ್ರರಚನೆಯಲ್ಲಿ ಒಂದು ಸೊಗಸಿದೆ, ಅಭಿರುಚಿಯ ಅನಾವರಣ ಇದೆ, ಶಿಸ್ತು ಇದೆ, ಆನಂದ ಇದೆ, ಸೃಜನಶೀಲತೆಗೆ ಅವಕಾಶ ಇದೆ.

ಇಂದು ಪತ್ರದ ಮೂಲಕವೇ ಹೇಳಬೇಕೆಂಬ ಅಗತ್ಯ ಏನೂ ಇಲ್ಲ, ನಿಜ. ಈ ಬದಲಾವಣೆಯನ್ನು ಒಪ್ಪಿಕೊಳ್ಳೋಣ. ಆದರೆ ಪತ್ರ ರಚನೆಯೇ ಬೇಡ ಎನ್ನುವ ಹಾಗಿಲ್ಲ. ಅರ್ಜಿ, ಬೇಡಿಕೆ, ಮನವಿ, ಮಾಹಿತಿ ಇತ್ಯಾದಿಗಳು ಕಂಪ್ಯೂಟರ್‌ನಲ್ಲಿ ಸಿದ್ಧಗೊಂಡು ಸಾಮಾನ್ಯ ಅಂಚೆ, ಮಿಂಚಂಚೆ, ಫ್ಯಾಕ್ಸ್‌ಗಳ ಮೂಲಕ ರವಾನೆಯಾಗುತ್ತಿವೆ. ಆದರೆ, ಕೈಯಲ್ಲಿ ಬರೆಯಬೇಕಿಲ್ಲ ಅಷ್ಟೆ.

ನಮ್ಮ ರಾಜ್ಯದ ಆಡಳಿತ ಭಾಷೆ ಕನ್ನಡ. ಹೀಗಾಗಿ ಸರಕಾರಿ ಪತ್ರಗಳು, ಮನವಿಗಳು ಕನ್ನಡದಲ್ಲೇ ಇರಬೇಕಾಗುತ್ತದೆ. ಜನಸಾಮಾನ್ಯರ ವ್ಯವಹಾರಗಳು ಹೆಚ್ಚಾಗಿ ಕನ್ನಡದಲ್ಲೇ ಇರುವುದರಿಂದ ಕನ್ನಡದಲ್ಲಿ ಪತ್ರ ರಚಿಸುವ ಸಾಮಾನ್ಯ ಜ್ಞಾನ ನಮಗೆ ಇರಲೇಬೇಕಾಗುತ್ತದೆ.

ಕಳೆದ ತರಗತಿಗಳಲ್ಲಿ ನೀವು ಪತ್ರ ರಚನೆಯ ಸ್ವರೂಪ ಮತ್ತು ಅದರ ವಿವಿಧ ಹಂತಗಳನ್ನು ತಿಳಿದಿದ್ದೀರಿ. ಬಂಧುಗಳಿಗೆ, ಸ್ನೇಹಿತರಿಗೆ ಬರೆಯುವ ಪತ್ರದಲ್ಲಿ ಆತ್ಮೀಯತೆ ಇರುತ್ತದೆ. ಅದು ಮನಮುಟ್ಟುವಂತೆ ಇರುತ್ತದೆ. ಅಂತಹ ಪತ್ರಗಳನ್ನು ಖಾಸಗೀ ಪತ್ರಗಳು ಎಂದು ಕರೆಯುತ್ತೇವೆ.

ಮನವಿ ಪತ್ರಗಳಲ್ಲಾದರೆ ಸೌಜನ್ಯದೊಂದಿಗೆ ನಿಖರವಾದ ಮಾಹಿತಿ, ನೇರ ನಿರೂಪಣೆ, ವಸ್ತುನಿಷ್ಠತೆ ಇರುತ್ತದೆ. ತನಗೂ, ಸಾರ್ವಜನಿಕರಿಗೂ ಉಪಯೋಗವಾಗುವಂತಹ ಎಲ್ಲಾ ರೀತಿಯ ಪತ್ರಗಳನ್ನು ವ್ಯಾವಹಾರಿಕ ಪತ್ರಗಳು ಎಂದು ಕರೆಯುತ್ತೇವೆ.

ಇಲ್ಲಿ ನಿಮಗೆ ಖಾಸಗಿ ಮತ್ತು ವ್ಯಾವಹಾರಿಕ ಪತ್ರಗಳಿಗೆ ತಲಾ ಒಂದು ಉದಾಹರಣೆಯನ್ನು ನೀಡಲಾಗಿದೆ. ನೀವು ಅವುಗಳನ್ನು ಗಮನಿಸಿ ಪತ್ರ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿರಿ.

©KTBS Not to be republished

## ವ್ಯವಹಾರಿಕ ಪತ್ರ

**ಇವರಿಂದ,** ದಿನಾಂಕ ೧೦-೦೧-೧೭

ತನುಜ ಎಸ್. ಎಂ.
೧೦ ನೇ ತರಗತಿ,
ಸರ್ಕಾರಿ ಪ್ರೌಢಶಾಲೆ,
ಗುಬ್ಬಿಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಇವರಿಗೆ,**

ಅಧ್ಯಕ್ಷರು,
ಗ್ರಾಮ ಪಂಚಾಯಿತಿ, ಗುಬ್ಬಿಹಳ್ಳಿ.
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಮಾನ್ಯರೇ,**

**ವಿಷಯ:** ನಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ.

ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಮ್ಮ ಊರಿನ ಬೀದಿ ದೀಪಗಳು ಕೆಲವು ದಿನಗಳಿಂದ ಕೆಟ್ಟುಹೋಗಿವೆ. ಇದರಿಂದ ರಸ್ತೆಯಲ್ಲಿ ರಾತ್ರಿ ಹೊತ್ತು ಮುದುಕರು, ಹೆಣ್ಣುಮಕ್ಕಳು ಹಾಗೂ ಮಕ್ಕಳು ಏಕಾಂಗಿಯಾಗಿ ಸಂಚರಿಸಲು ಭಯಪಡುವಂತಾಗಿದೆ. ಹೀಗಾಗಿ, ಜನಪರ ಕಾಳಜಿ ಹೊಂದಿರುವ ತಾವು ಈ ಕೂಡಲೇ ನಮ್ಮ ಗ್ರಾಮದ ಬೀದಿ ದೀಪಗಳನ್ನು ಸರಿಪಡಿಸಿ ಜನರಿಗಾಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕೆಂದು ಗ್ರಾಮಸ್ಥರ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ತನುಜ ಎಸ್. ಎಂ.)

©KTBS Not to be republished

# ಖಾಸಗಿ ಪತ್ರ

ಇವರಿಂದ, ದಿನಾಂಕ ೨೫-೦೬-೧೭

ಮಮತ ಕೆ. ಎಲ್.

೧೦ ನೇ ತರಗತಿ, 'ಬಿ' ವಿಭಾಗ,

ವಿನಾಯಕ ಪ್ರೌಢಶಾಲೆ, ಗೌರಿಬಿದನೂರು.

ಪ್ರೀತಿಯ ತಂದೆಯವರಿಗೆ ನಿಮ್ಮ ಮಗಳು ಮಾಡುವ ನಮಸ್ಕಾರಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನಿಮ್ಮ ಯೋಗಕ್ಷೇಮದ ವಿಚಾರವಾಗಿ ಪತ್ರವನ್ನು ಬರೆಯಿರಿ. ಇಲ್ಲಿ ಈಗ ವಿಪರೀತ ಮಳೆ ಬರುತ್ತಿದೆ. ಮಳೆಯ ವಾತಾವರಣ ತುಂಬಾ ಹರ್ಷದಾಯಕವಾಗಿದೆ. ಎಲ್ಲೆಡೆ ಹಸಿರು ಕಂಗೊಳಿಸುತ್ತಿದೆ. ಈ ನಡುವೆ ನಮ್ಮ ನಿತ್ಯದ ಶಾಲಾ ಚಟುವಟಿಕೆಗಳು ಯಾವ ತೊಂದರೆಯೂ ಇಲ್ಲದಂತೆ ನಡೆಯುತ್ತಿವೆ. ಕಳೆದ ವಾರ ಮಾಸಿಕ ಪರೀಕ್ಷೆಗಳು ನಡೆದಿದ್ದವು. ಆ ಪರೀಕ್ಷೆಯಲ್ಲಿ ನಾನು ತರಗತಿಗೆ ದ್ವಿತೀಯ ಸ್ಥಾನವನ್ನು ಪಡೆದಿದ್ದೇನೆ. ಮುಂದಿನ ಪರೀಕ್ಷೆಯಲ್ಲಿ ಇನ್ನು ಸ್ವಲ್ಪ ಪ್ರಯತ್ನ ಮಾಡಿದಲ್ಲಿ ನೀನು ಪ್ರಥಮ ಸ್ಥಾನವನ್ನು ಪಡೆದೇ ಪಡೆಯುತ್ತೀಯ ಎಂದು ನನ್ನ ಗುರುಗಳು ಹೇಳಿದರು. ನಾನು ಅವರ ಮಾರ್ಗದರ್ಶನದಂತೆ ವ್ಯಾಸಂಗವನ್ನು ಮಾಡಿ, ಶಾಲೆಗೆ ಹಾಗೂ ನಿಮಗೆ ಕೀರ್ತಿಯನ್ನು ತರುತ್ತೇನೆ.

೧೦ ನೇ ತರಗತಿಯ ಫಲಿತಾಂಶ ನಮ್ಮ ಮುಂದಿನ ವ್ಯಾಸಂಗಕ್ಕೆ ದಾರಿದೀಪವಾಗುವುದರಿಂದ ಶಾಲಾ ಶಿಕ್ಷಕರು ತುಂಬಾ ಕಾಳಜಿವಹಿಸಿ ಪಾಠಗಳನ್ನು ಮಾಡುತ್ತಿದ್ದಾರೆ. ನಾವೂ ಕೂಡ ಶ್ರದ್ಧೆವಹಿಸಿ ಕಲಿಯುತ್ತಿದ್ದೇವೆ. ಒಳ್ಳೆಯ ಶಾಲೆ ಹಾಗೂ ಗುರುಗಳನ್ನು ಪಡೆದ ನಾವು ನಿಜಕ್ಕೂ ಧನ್ಯರು.

ಮನೆಯಲ್ಲಿ ನನ್ನ ಪ್ರೀತಿಯ ಅಮ್ಮ ಮತ್ತು ಅಣ್ಣನಿಗೆ ನನ್ನ ನಮಸ್ಕಾರಗಳನ್ನು ತಿಳಿಸಿರಿ.

ನಿಮ್ಮ ಪ್ರೀತಿಯ

(ಮಮತ ಕೆ. ಎಲ್.)

**ಇವರಿಗೆ,**

ಶ್ರೀ ಬಸವರಾಜ ಕೆ. ಎಲ್.

ಮನೆ ನಂ – ೧೧೯೪, ಬನಶಂಕರಿ ನಿಲಯ,

ರಾಜಕುಮಾರ್ ರಸ್ತೆ, ತುಮಕೂರು.

©KTBS Not to be republished



**ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.**

# ಪ್ರಬಂಧ ರಚನೆ

ಪ್ರಬಂಧ ಎನ್ನುವುದು ಆಂಗ್ಲ ಸಾಹಿತ್ಯದ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ರೂಪುಪಡೆದ ಗದ್ಯ ಪ್ರಕಾರ. ಆಂಗ್ಲ ಭಾಷೆಯಲ್ಲಿರುವ Essay ಎನ್ನುವುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಪ್ರಬಂಧ' ಅಥವಾ 'ನಿಬಂಧ' ಎಂದು ಕರೆಯಲಾಗುತ್ತದೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಮಾಹಿತಿ ಸಂಗ್ರಹಿಸಿ, ವಿವರವಾಗಿ, ಅರ್ಥವತ್ತಾಗಿ, ಆಕರ್ಷಕವಾಗಿ ಬರೆದರೆ 'ಪ್ರಬಂಧ' ಎನ್ನಲಾಗುತ್ತದೆ.

'ಪ್ರಬಂಧ' ಎಂದರೆ 'ಚೆನ್ನಾಗಿ ಕಟ್ಟು' ಎಂದು ಅರ್ಥ. ಯಾವುದೇ ಬಗೆಯ ಪ್ರಬಂಧ ಲೇಖನವಾದರೂ ಅಲ್ಲಿ ಬಳಸಿರುವ ಭಾಷೆ ಸರಳವಾಗಿರಬೇಕು. ಸಂಕ್ಷಿಪ್ತವಾಗಿ ನಿಖರವಾಗಿರಬೇಕು. ವಿಷಯಕ್ಕೆ ಅನುಗುಣವಾಗಿ ಉದಾಹರಣೆ, ನುಡಿಗಟ್ಟು, ಗಾದೆ ಹಾಗೂ ಪ್ರಸಿದ್ಧರ ಹೇಳಿಕೆಗಳನ್ನು ಸಂದರ್ಭಾನುಸಾರ ಬಳಸಿ ಬರೆಯಬೇಕು. ಇದರಿಂದ ಪ್ರಬಂಧದ ಮೌಲ್ಯವು ಹೆಚ್ಚುತ್ತದೆ. ಜೊತೆಗೆ ಲೇಖನ ಚಿಹ್ನೆಗಳನ್ನು ಸರಿಯಾದ ರೀತಿಯಲ್ಲಿ ಬಳಸಬೇಕು. ಬರೆವಣಿಗೆಯಲ್ಲಿ ಕಾಗುಣಿತ ದೋಷಗಳಿಲ್ಲದಂತೆ ಎಚ್ಚರವಹಿಸಬೇಕು. ಪ್ರಬಂಧ ರಚಿಸುವಾಗ ಈ ಕೆಳಗಿನ ಹಂತಗಳನ್ನು ಅನುಸರಿಸಿರಿ.

**ಪ್ರಬಂಧ ರಚನೆಯ ಹಂತಗಳು :**

**೧. ಪೀಠಿಕೆ :** ಪ್ರಬಂಧದ ಆರಂಭದಲ್ಲಿ ವಿಷಯದ ಸಮಗ್ರತೆ ಹಾಗೂ ಮಹತ್ವವನ್ನು ತಿಳಿಸುವ ವಿಚಾರಗಳನ್ನು ಚಿಕ್ಕದಾಗಿ, ಚೊಕ್ಕವಾಗಿ ಪ್ರಸ್ತಾಪಿಸಬೇಕು. ಅದು ಪ್ರಬಂಧ ಓದುವವರಿಗೆ ಪ್ರೇರಣೆ ನೀಡುವಂತಿರಬೇಕು.

**೨. ವಿಷಯ ವಿವರಣೆ :** ಪ್ರಬಂಧದ ಮುಖ್ಯ ವಿಚಾರಗಳನ್ನು ಅಗತ್ಯ ಶೀರ್ಷಿಕೆ ಹಾಗೂ ಉಪ ಶೀರ್ಷಿಕೆಗಳನ್ನು ನೀಡಿ ವಿವರಿಸಬೇಕು. ವಿಷಯವನ್ನು ಕ್ರಮಬದ್ಧವಾಗಿ ಸಂಯೋಜಿಸಿರಬೇಕು.

**೩. ಮುಕ್ತಾಯ ಅಥವಾ ಉಪಸಂಹಾರ :** ಅಂತ್ಯದಲ್ಲಿ ಪ್ರಬಂಧದ ಒಟ್ಟು ಸಾರವನ್ನು ಸಂಕ್ಷಿಪ್ತವಾಗಿ ಕಟ್ಟಿಕೊಡಬೇಕು. ಜೊತೆಗೆ ನಿಮ್ಮ ಅಭಿಪ್ರಾಯ ಹಾಗೂ ತೀರ್ಮಾನಗಳನ್ನೂ ಸ್ಪಷ್ಟಪಡಿಸಬೇಕು. ಪೀಠಿಕೆಯಂತೆ ಮುಕ್ತಾಯವು ಅರ್ಥಪೂರ್ಣವೂ ಆಕರ್ಷಕವೂ ಆಗಿರಬೇಕು.

ನಿಮಗೆ ಪರೀಕ್ಷೆಯಲ್ಲಿ ಮೂರು ವಿಷಯಗಳನ್ನು ಕೊಟ್ಟು ಯಾವುದಾದರೂ ಒಂದು ವಿಷಯದ ಮೇಲೆ ಪ್ರಬಂಧ ಬರೆಯುವಂತೆ ಸೂಚಿಸಲಾಗುತ್ತದೆ. ಪ್ರಬಂಧದಲ್ಲಿ ನೀವು ವಿಷಯವನ್ನು ಯಾವರೀತಿ ಜೋಡಿಸಿದ್ದೀರಿ, ನಿರೂಪಣೆ, ಶೈಲಿ, ಭಾಷೆಯ ಶುದ್ಧತೆ ಇತ್ಯಾದಿಗಳನ್ನು ಗಮನಿಸಲಾಗುತ್ತದೆ. ಆದುದರಿಂದ ಪ್ರಬಂಧ ರಚನೆಯ ಮೂರು ಹಂತಗಳನ್ನು ಗಮನದಲ್ಲಿಟ್ಟುಕೊಂಡು ಬರೆಯಬೇಕು. ನೀವು ಯಾವ ವಿಷಯ ನೀಡಿದರೂ ಅಚ್ಚುಕಟ್ಟಾಗಿ ಪ್ರಬಂಧ ಬರೆಯಲು ಸಮರ್ಥರಾಗಬೇಕು.

****

©KTBS Not to be republished

# ಗಾದೆಗಳ ವಿಸ್ತರಣೆ

'ಗಾದೆ' ಎನ್ನುವುದು ಹೇಳಿಕೆಯ ರೂಪದಲ್ಲಿ ಬಳಕೆಯಾಗುವ ಮಾತು. ಅದು ಹಲವರ ಅನುಭವಗಳ ಮಾತು, ಲೋಕೋಕ್ತಿ, ಜಾಣನುಡಿ ಎಂದು ಹೇಳಬಹುದು. ಗಾದೆಯ ಮಾತಿನಲ್ಲಿ ತಿಳಿವಳಿಕೆಯಿದೆ, ನೀತಿ ಇದೆ, ನಗೆಚಾಟಿಯಿದೆ, ಒಳಿತು ಕೆಡುಕುಗಳ ಸೂಕ್ಷ್ಮತೆಗಳಿವೆ. ಹೀಗಾಗಿಯೇ ವೇದ ಸುಳ್ಳಾದರೆ ಗಾದೆ ಸುಳ್ಳಾಗದು ಎಂಬ ಮಾತಿದೆ.

ಗಾದೆಗಳು ಜೀವನದ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಜ್ಞಾನಭಂಡಾರದಲ್ಲಿ ಅವುಗಳ ಪಾತ್ರ ಬಹು ದೊಡ್ಡದು. ಗಾದೆಗಳಿಗೆ ಕಾಲ ದೇಶಗಳ ಮಿತಿಯಿಲ್ಲ. ಅವು ಎಲ್ಲಾ ಕಾಲ ದೇಶಗಳಿಗೂ ಅನ್ವಯವಾಗುವ ಸತ್ಯಗಳು. ಸಾವಿರ ಪದಗಳಲ್ಲಿ ಹೇಳಬಹುದಾದ ವಿಚಾರಗಳನ್ನು ಒಂದು ಗಾದೆ ಹೇಳುತ್ತದೆ. ಹೀಗಾಗಿ ಗಾದೆಗಳು ಕನ್ನಡ ಸಾಹಿತ್ಯದ ಅತ್ಯಮೂಲ್ಯ ಆಸ್ತಿ ಎನ್ನಬಹುದು. ಈ ಸಂಪತ್ತನ್ನು ಉಳಿಸಿಕೊಂಡು ಬೆಳೆಸಿಕೊಂಡು ನಾವು ಹೋಗಬೇಕಾಗಿದೆ.

ನಮ್ಮ ಮಾತು ಮತ್ತು ಬರೆವಣಿಗೆಯಲ್ಲಿ ಸಮಯೋಚಿತವಾಗಿ ಗಾದೆ ಬಳಸುವುದರಿಂದ ಸಾಹಿತ್ಯ ಸೌಂದರ್ಯ ಹೆಚ್ಚುವುದಲ್ಲದೆ, ಹೇಳಬೇಕೆಂದಿರುವ ವಿಷಯವನ್ನು ಮನಮುಟ್ಟುವಂತೆ ರಸವತ್ತಾಗಿ ಹೇಳಲು ಸಾಧ್ಯವಾಗುತ್ತದೆ. ಗಾದೆಗಳ ಸಂಗ್ರಹಣೆ ಒಂದು ಉತ್ತಮ ಹವ್ಯಾಸವಾಗಿದೆ. ಗಾದೆಗಳ ಅಂತರಾರ್ಥವನ್ನು ಬಿಡಿಸಿ, ವಿವರಿಸಿ ಹೇಳುವುದನ್ನು 'ಗಾದೆ ವಿಸ್ತರಣೆ' ಎನ್ನಲಾಗುತ್ತದೆ. ನೀವು ಗಾದೆ ವಿಸ್ತರಿಸುವುದನ್ನು ಕಲಿಯಬೇಕು. ಗಾದೆಗಳನ್ನು ವಿಸ್ತರಣೆ ಮಾಡುವುದರಿಂದ ನಮ್ಮ ಭಾಷೆ, ಚಿಂತನೆ ಹಾಗು ಅನುಭವಗಳು ಶ್ರೀಮಂತವಾಗುತ್ತವೆ.

**ಗಾದೆಗಳ ವಿಸ್ತರಣೆಯಲ್ಲಿ ಗಮನಿಸಬೇಕಾದ ಅಂಶಗಳು :**

೧. ಗಾದೆಯ ಹೊರ ಅರ್ಥವನ್ನು ಮೊದಲು ವಿವರಿಸಬೇಕು.
೨. ಗಾದೆಯ ಅಂತರಾರ್ಥ ಯಾವ ವಿಚಾರಗಳಿಗೆ ಸಂಬಂಧಿಸಿದೆ ಎಂಬುದನ್ನು ವಿವರಿಸಬೇಕು.
೩. ಗಾದೆ ಒಳಗೊಂಡಿರುವ ಸತ್ಯ ಹಾಗೂ ಮೌಲ್ಯಗಳನ್ನು ಸ್ಪಷ್ಟಪಡಿಸಬೇಕು.
೪. ಗಾದೆಯ ವಿಚಾರಗಳಿಗೆ ಪೂರಕವಾಗುವ ಕಥೆ ಇಲ್ಲವೆ ಘಟನೆಗಳನ್ನು ಉದಾಹರಿಸಬೇಕು.
೫. ಗಾದೆಗಳನ್ನು ವಿಸ್ತರಿಸುವಾಗ ಸಮಾನ ಅರ್ಥವನ್ನು ನೀಡುವ ಇನ್ನಿತರ ಗಾದೆಗಳನ್ನು ಹೆಸರಿಸಬೇಕು.
೬. ಗಾದೆಯ ಮೂಲಕ ನಾವು ಕಲಿಯಬೇಕಾದ ಅಥವಾ ತಿಳಿದುಕೊಳ್ಳಬೇಕಾದ ನೀತಿಯನ್ನು ಕೊನೆಯಲ್ಲಿ ಸ್ಪಷ್ಟಪಡಿಸಬೇಕು.

* * * * *

©KTBS Not to be republished

**ಪೂರಕ ಓದು**

# ೧. ಕಳ್ಳರ ಗುರು

– ಬೆಟಗೇರಿ ಕೃಷ್ಣಶರ್ಮ

"ಒಂದು ವಾರ ಮುಗಿದು ಹೋಯಿತು.... ಮನೆಯಲ್ಲ ಸೂರೆ ಹೋಗಿ! ಮನೆಯಲ್ಲಿ ಒಂದು ಕಾಸೂ, ಒಂದು ಕಾಳೂ ಉಳಿಯದಂತೆ ಇದ್ದುದೆಲ್ಲವನ್ನೂ ಕಳ್ಳರು ದೋಚಿಕೊಂಡು ಹೋದರು! ಈ ಊರ ಹೊರಗಿನ ಮನೆ ಬೇಡವೆಂದು ನಾನು ಸಾರಿಸಾರಿ ಹೇಳಿದೆ – ನೀವೇನು ಕೇಳಲಿಲ್ಲ."

"ಹೋಗಲಿ ಬಿಡು ರತ್ನ ! ನಮ್ಮಲ್ಲಿ ಅವು ಇಲ್ಲದೆ ಇದ್ದರೆ ಅವರು ಒಯ್ಯುತ್ತಿದ್ದರು – ಹೇಗೆ? ಹಣ, ಹೊನ್ನು – ಇವುಗಳ ಸಂಗ್ರಹ ಬೇಡವೆಂದರೆ ನೀನು ಕೇಳುವುದಿಲ್ಲ. ನಮ್ಮ ಈ ವೈದ್ಯಕ ವೃತ್ತಿ ದುಡ್ಡು ಗಳಿಸಬೇಕಾದುದಲ್ಲ!. ಕೇವಲ ಸಮಾಜದ ಕ್ಷೇಮ ಸಾಧನೆಗಾಗಿ ಇರುವುದು. ಸಮಾಜದಿಂದ ನಮಗೆ, ಬದುಕಿ ಇರುವ ಮಟ್ಟಿಗೆ ಏನಾದರೂ ದೊರೆತರೆ ಸಾಕು!"

"ಏನು ದೊರೆಯುವುದು ಸಮಾಜದಿಂದ? ಕಳುವಾದ ದಿನದಿಂದ ಒಂದು ಕಾಸಿನ ಪ್ರಾಪ್ತಿಯಿಲ್ಲ. ತವರು ಮನೆಯಿಂದ ತಂದ ನನ್ನ ಚಿನ್ನದ ಒಡವೆಗಳೂ ಹೋದವು. ಎಲ್ಲವೂ ಕಳೆದು ಹೋಯಿತು. ಇನ್ನು ಬದುಕುವ ಬಗೆ ಹೇಗೆ?"

"ಎಲ್ಲವೂ ಎಲ್ಲಿ ಹೋಗಿದೆ ರತ್ನಾ? ಔಷಧಿಯ ಕುಪ್ಪಿಗೆಗಳಿಗೆ ಕಳ್ಳರು ಕೈಹಚ್ಚಿಲ್ಲ. ನನ್ನ ವೈದ್ಯಕ ಪ್ರಾವಿಣ್ಯವನ್ನಂತೂ ಯಾರೂ ಕದ್ದೊಯ್ಯಲಾರರು."

"ಏನು ಪ್ರಾವಿಣ್ಯವೋ ಏನೋ! ನಾಳೆಯ ಮಧ್ಯಾಹ್ನದ ಊಟಕ್ಕೆ ತತ್ವಾರ ಬಂದು ಕುಳಿತಿದೆ."

"ಡಣ್..... ಡಣ್......!!" ದೂರದ ಗಡಿಯಾರದಲ್ಲಿ, ರಾತ್ರಿಯ ಹತ್ತು ಗಂಟೆ ಬಾರಿಸಿದುದು ಕೇಳಿಸಿತು. ವೈದ್ಯರ ಮನೆಯ ಮುಂಬಾಗಿಲು ಇಕ್ಕಿದ್ದಿತು. ಕಿರುಮನೆಯಲ್ಲಿ ಕುಳಿತುಕೊಂಡು ವೈದ್ಯರು, ವೈದ್ಯರ ಹೆಂಡತಿ ಮಾತನಾಡುತ್ತಿದ್ದರು. ಮೊಗಸಾಲೆಯಲ್ಲಿ ಮಲಗಿದ ಚಿದಂಬರ ಮಾವ, ಗಾಢನಿದ್ರೆಯಲ್ಲಿ ಗೊರಕೆ ಹೊಡೆಯುತ್ತಿದ್ದರು.

ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ, ದಟ್ಟವಾದ ಕತ್ತಲೆಯು ವೈದ್ಯರ ಕುಟೀರವನ್ನು ಮುತ್ತಿ ನಿಂತಿದೆ. ಊರ ಕಡೆಯಿಂದ ನಾಯಿಗಳ ಬೊಗಳಾಟ ಕೇಳುತ್ತಲಿದೆ. ಕಾಡಿನ ಕಡೆಯಿಂದ ನರಿಗಳ ಊಳಾಟ ಕಿವಿಗೆ ಬೀಳುತ್ತಲಿದೆ. ಕುಟೀರದ ಸುತ್ತಮುತ್ತಲಿನ ಮರಗಳ ಮೇಲೆ ಇರುಳು ಹಕ್ಕಿಗಳ ಹಾರಾಟ, ಕಿರುಚಾಟ – ಆಗಾಗ ನಡೆದು, ವಾತಾವರಣದ ನಿಶ್ಯಬ್ದತೆಯನ್ನು ಕೆಡಿಸುತ್ತಲಿದೆ.





©KTBS Not to be republished

ಇದ್ದಕ್ಕಿದ್ದಂತೆ ವೈದ್ಯರ ಕಿವಿಗೆ ಹೊರಗಿನಿಂದ ಕೂಗು ಕೇಳಿಸಿತು.

"ಸ್ವಾಮಿಯವರೇ ......... ವೈದ್ಯರೇ!"

ವೈದ್ಯರು ತಟ್ಟನೆ ಎದ್ದು ಬಂದು ಮುಂಬಾಗಿಲನ್ನು ತೆರೆದರು; ಗೊರವೆ ಕಟ್ಟಿಗೆಯ ಪಂಜನ್ನು ಕೈಯಲ್ಲಿ ಹಿಡಿದುಕೊಂಡು ನಿಂತ ಇಬ್ಬರು ಮನುಷ್ಯರನ್ನು ನೋಡಿದರು. ಇಬ್ಬರಿಗೂ ಕಪ್ಪಗಿನ ದಪ್ಪನೆಯ ದೇಹ, ತಲೆಯ ಮೇಲೆ ಅಸ್ತವ್ಯಸ್ತವಾದ ಕೂದಲಿನ ಬೆಳೆಯಿದೆ. ಗಿಡ್ಡಚಣ್ಣವನ್ನು ತೊಟ್ಟಿದ್ದಾರೆ. ಮೈಮೇಲೆ ಕರಿಯ ಕಂಬಳಿಯನ್ನು ಹೊದ್ದುಕೊಂಡಿದ್ದಾರೆ. ವೈದ್ಯರು ಅರೆ ನಿಮಿಷ ದಿಟ್ಟಿಸಿನೋಡಿ ಹೇಳಿದರು : "ಇಂದು ನಿಮಗೆ ಏನೂ ಸಿಗುವಂತಿಲ್ಲ. ಒಂದು ವಾರದ ಹಿಂದೆಯೆ ಕಳುವಾಗಿ, ಎಲ್ಲವೂ ಬರಿಯ ಮನೆಯಾಗಿದೆ. ಒಂದು ಹಿಡಿ ಕಾಳು ಕೂಡ ಮನೆಯಲ್ಲಿ ಇಲ್ಲ!"

ಬಂದವರಲ್ಲಿ ಒಬ್ಬನೆಂದ : "ನಾವು ಕಳುವಿಗೆ ಬಂದವರಲ್ಲ ಸ್ವಾಮಿ! ಮದ್ದಿಗಾಗಿ ಬಂದಿದ್ದೇವೆ!"

"ಮದ್ದಿಗಾಗಿಯೇ? ಯಾರಿಗಾಗಿ ಮದ್ದು?" ವೈದ್ಯರು ಕೇಳಿದರು.

"ನಮ್ಮ ಯಜಮಾನರ ಮಗನಿಗೆ ಬುದ್ಧಿ! ಒಬ್ಬನೆ ಒಬ್ಬ ಮಗ ಅವರಿಗೆ. ಈಗ ಐದಾರು ದಿನಗಳಿಂದ ಉರಿಬಂದು ಮಲಗಿದ್ದಾನೆ. ಇಂದಂತೂ ಬಹಳ ಸಂಕಟ ಅವಗೆ. ಹೇಗಾದರೂ ಮಾಡಿ ತಮ್ಮನ್ನು ಕರೆದುಕೊಂಡು ಬರಬೇಕೆಂದು ನಮ್ಮ ಯಜಮಾನರು ಹೇಳಿದರು. ಅದಕ್ಕಾಗಿಯೇ ಈಗ ಓಡುತ್ತೋಡುತ್ತಲೇ ಇಲ್ಲಿಗೆ ಬಂದಿದ್ದೇವೆ. ತಾವು ಬರಬೇಕು ಬುದ್ಧಿ!" ಬಂದವರಲ್ಲಿ ಒಬ್ಬ ಮೊರೆಯ ಧ್ವನಿಯಲ್ಲಿ ಹೇಳಿದ.

"ಯಾರು ನಿಮ್ಮ ಯಜಮಾನ?"

"ಬೇಡರ ಹಳ್ಳಿಯ ಭೀಮನಾಯಕ ಬುದ್ಧಿ!"

ಬೆರಗಿನ ಧ್ವನಿಯಲ್ಲಿ ವೈದ್ಯರು ಕೇಳಿದರು : "ಆ ಕಳ್ಳರ ಹಿರಿಯ ಭೀಮನಾಯಕನೇ!"
ತಡವರಿಸುವ ಧ್ವನಿಯಲ್ಲಿ ಒಬ್ಬ ನುಡಿದ.

"ಹೌದು ಬುದ್ಧೀ ಆತ..... ಕಳ್ಳರ ಹಿರಿಯ..... ಅಹುದು! ಆದರೆ ತಾವು ಈಗ ಬರಲೇ ಬೇಕು ಬುದ್ಧೀ! ಒಬ್ಬನೇ ಒಬ್ಬ ಮಗ ಬುದ್ಧೀ! ಮಗನೆಂದರೆ ಆತನಿಗೆ ಜೀವ, ಪ್ರಾಣ ಬುದ್ಧೀ".





©KTBS Not to be republished

ವೈದ್ಯರು ಒಂದು ನಿಮಿಷ ನಿಂತು ಯೋಚಿಸಿದರು. ಆಮೇಲೆ "ಈಗ ಬಂದೆ ಸ್ವಲ್ಪ ತಡೆಯಿರಿ" ಎಂದು ಹೇಳಿ ಒಳಗೆ ಹೋದರು. ಹೊರಡುವ ಸಿದ್ಧತೆ ಮಾಡಿಕೊಂಡು ಬಾಗಿಲನ್ನು ಹಾಕಿಕೊಳ್ಳುವಂತೆ ಹೆಂಡತಿಗೆ ಹೇಳಿ ಹೊರಗೆ ಬಂದರು. "ಸರಿ! ಎಲ್ಲಿಗೆ ಹೋಗೋಣ? ನಡೆಯಿರಿ!" ಎಂದು ನಡೆದರು.

ಕತ್ತಲೆಯ ನಟ್ಟಿರುಳು, ಕಾಡಿನ ದಾರಿ. ಯಮದೂತರಂತಹ ಈ ಬೇಡರು ಹಿಡಿದ ಪಂಜಿನ ಮಂಜು ಬೆಳಕಿನಲ್ಲಿ ವೈದ್ಯರು ನಡೆದಿದ್ದರು. ದಾರಿಯ ಇಕ್ಕಡೆಗಳಲ್ಲಿಯೂ ಯಾವ ಯಾವುವೋ ಪ್ರಾಣಿಗಳು ಸರಸರ ಸಪ್ಪಳಮಾಡುತ್ತಾ ಸರಿದು ಹರಿದು ಹೋಗುತ್ತಿದ್ದವು. ಆಗ ವೈದ್ಯರ ಮನಸ್ಸಿನಲ್ಲಿ ಏನೇನೋ ಭಾವನೆಗಳು ಮೂಡುವುವು: "ಇವರು ನನ್ನನ್ನು ಕರೆದೊಯ್ಯುವುದರಲ್ಲಿ ಮೋಸವೇನೂ ಇಲ್ಲವಷ್ಟೆ? ಬೇಡ ಬೇಡವೆಂದರು ಪೊಲೀಸರು ನಮ್ಮ ಮನೆಯ ಕಳುವನ್ನು ಶೋಧಿಸುವ ಕೆಲಸ ಕೈಗೊಂಡಿದ್ದಾರೆ. ನನ್ನ ಒಡವೆ ವಸ್ತುಗಳೊಂದಿಗೆ ನನ್ನನ್ನೂ ಇಲ್ಲದಂತೆ ಮಾಡಬೇಕೆಂದು ವಿಚಾರವಿದೆಯೋ ಏನೋ! ಹಾಗಾದರೆ, ರತ್ನಳ ಗತಿಯೇನೂ?.... 'ಓ, ನಾಗರಹಾವು!' ಎಂದು ಒಬ್ಬ ಕೂಗಿದಾಗ, ವೈದ್ಯರು ಎಚ್ಚರಗೊಂಡವರಾಗಿ ನೋಡಿದರು. ಎರಡು ಮೊಳ ಅಂತರದಲ್ಲಿಯೆ ಒಂದು ನಾಗರಹಾವು– ಎರಡು ಮಾರು ಉದ್ದದ ತನ್ನ ದೇಹವನ್ನು ಸರಿಸುತ್ತ ಮುಂದುವರಿಯುತ್ತಲಿದೆ. ಮೂವರು ನಿಂತು ನೋಡಿದರು. ಹಾವು ತನ್ನಪಾಡಿಗೆ ತಾನು ಹರಿದು ಹೋಯಿತು. ಮೂವರೂ ಮತ್ತೆ ಮುಂದೆ ಸಾಗಿದರು. ಮತ್ತೆ ವೈದ್ಯರ ತಲೆಯಲ್ಲಿ ಯೋಚನೆ ಎದ್ದಿತು: "ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸದು. ಮನುಷ್ಯ? ಮನುಷ್ಯ ಸುಮ್ಮನೆ ಬಿಡುವನೆ? ಅವನ ಆಸೆಯ ಹಾವು ಯಾರೂ ಕೆಣಕದಿದ್ದರು ಎಲ್ಲರನ್ನು ಕಡಿಯುವುದು! ಕಳ್ಳನನ್ನು ಮೊದಲುಮಾಡಿ ಸಾಮ್ರಾಟನವರೆಗೆ ಎಲ್ಲರಿಗೂ ಆಸೆ! ಎಲ್ಲರಿಗೂ ಸ್ವಾರ್ಥ–ಲೋಭ! ನಮ್ಮ ರತ್ನಳಿಗೆ ಏಕೆ ಇರಬಾರದು– ತನ್ನ ಒಡವೆ–ವಸ್ತುಗಳ ಲೋಭ? ಅವಳೂ ಲೋಕದ ಮನುಷ್ಯರಲ್ಲಿ ಒಬ್ಬಳಲ್ಲವೆ........? ಇನ್ನು ನನ್ನ ರತ್ನಳಿಗೆ ನಾನಾದರು ಮರಳಿ ದೊರೆಯುತ್ತೇನೋ ಇಲ್ಲವೋ........."

ಕಾಡಿನ ಸೀಳು ದಾರಿ ಮುಗಿದು ಮೂವರು ಒಂದು ಕಿರುವಳ್ಳಿಯ ಬಳಿಗೆ ಬಂದರು. ನಾಯಿಗಳು ಬೊಗಳತೊಡಗಿದವು. ವೈದ್ಯರ ಹೃದಯ ಡವಡವಿಸತೊಡಗಿತ್ತು. ನಡೆಯುವಾಗ ಅಡಿಗಳು ನಡುಗುತ್ತಿದ್ದವು. ಮೂವರೂ ಕೂಡಿ ಒಂದು ಮನೆಯ ಬಳಿ ಬಂದರು ಇದ್ದುದರಲ್ಲಿಯೆ ದೊಡ್ಡ ಮನೆಯದು. ವೈದ್ಯರು ಮನೆಯಲ್ಲಿ ಕಾಲಿರಿಸುವುದೇ ತಡ; ಭೀಕರಾಕೃತಿಯ ಮನುಷ್ಯನೊಬ್ಬ ಎದುರುಗೊಂಡು ಬಂದ. ವೈದ್ಯರ ಎದೆ ಜುಮ್ಮೆಂದಿತು. ಬಂದ ಮನುಷ್ಯ ವೈದ್ಯರ ಪಾದಗಳನ್ನು ಗಟ್ಟಿಯಾಗಿ ಹಿಡಿದು ಹೇಳಿದ; "ಸ್ವಾಮಿ, ದೇವರು ಬಂದ ಹಾಗೆ ತಾವು ಬಂದಿರಿ. ದಯೆಯಿಟ್ಟು ನನ್ನ ಮಗನನ್ನು ನನಗೆ ಬದುಕಿಸಿಕೊಡಿರಿ!"

ವೈದ್ಯರು ಮೈದಡವುತ್ತ ಅವನನ್ನು ಮೇಲಕ್ಕೆತ್ತಿ ನೋಡಿದರು. ಆ ವಿಕಾರ ಮೂರ್ತಿಯ ಮುಖದ ಮೇಲೆ ನೆಲೆ ನಿಂತ ಕರುಣೆಯ ರೂಪವನ್ನು ಗುರುತಿಸಿದರು. ಹಾಗೆಯೇ ಅವನ ಕೈಹಿಡಿದುಕೊಂಡು, ಮಗುವು ಮಲಗಿದ್ದ ಕಿರುಮನೆಗೆ ಹೋದರು. ಮಿನುಗುವ ದೀಪದ ಮಂದ ಪ್ರಕಾಶದಲ್ಲಿ ಹಾಸಿಗೆಯಲ್ಲಿ

©KTBS Not to be republished



ದಕ್ಷತೆಯು ವ್ಯಕ್ತಿಯನ್ನು ಎತ್ತರಕ್ಕೇರಿಸುತ್ತದೆ.

ಬಿದ್ದು ತಳಮಳಿಸುವ ಮಗುವನ್ನು ನೋಡಿದರು. ಪಕ್ಕದಲ್ಲಿಯೇ ಕುಳಿತ ಮಗುವಿನ ತಾಯಿ ಬಿಕ್ಕಿಬಿಕ್ಕಿ ಅಳುತ್ತಲಿದ್ದಾಳೆ.

ಮಗುವಿನ ಬುಡದಲ್ಲಿ ಹಾಸಿದ್ದ ಹಾಸಿಗೆ ತಮ್ಮ ಮನೆಯದೆಂಬುದು ವೈದ್ಯರಿಗೆ ಗೊತ್ತಾಗಲಿಕ್ಕೆ ಬಹಳಕಾಲ ಬೇಕಾಗಲಿಲ್ಲ. ಮಗುವಿನ ಕಾಲಬಳಿಯಲ್ಲಿಯೇ ತಂದೆ ಬಂದು ಕುಳಿತ. ಹೆಂಡತಿಯ ಕಡೆಗೆ ಕಳವಳದ ನೋಟದಿಂದ ನೋಡುತ್ತ ಅವನು ಕಂಬನಿಗರೆಯತೊಡಗಿದ. ವೈದ್ಯರ ಮನಸ್ಸಿನಿಂದ ಹಾಸಿಗೆಯ ವಿಷಯ ಹಾರಿಹೋಯಿತು. ತಾವು ಕಳ್ಳರ ಮನೆಯಲ್ಲಿ ಕುಳಿತಿರದೆ, ತಾಯಿ-ತಂದೆತನದ ಎರಡು ಕರುಣಾ ಹೃದಯಗಳೆದುರು ಕುಳಿತಿದ್ದೇನೆ ಎಂಬ ಭಾವನೆ ಅವರ ಹೃದಯದಲ್ಲಿ ಜಾಗೃತವಾಯಿತು.

ವೈದ್ಯರು ಮಗುವಿನ ನಾಡಿಯನ್ನು ಹಿಡಿದು ನೋಡಿದರು. ಜ್ವರದ ರೀತಿಯನ್ನು ಪರೀಕ್ಷಿಸಿ ಗುರುತಿಸಿದರು. ಹೆದರಬೇಡಿರೆಂದು ತಾಯ್ತಂದೆಗಳಿಗೆ ಹೇಳಿ, ಔಷಧಿಯ ಮಾತ್ರೆಯನ್ನು ಮಗುವಿಗೆ ಕುಡಿಸಿದರು. ನಾಲ್ಕೈದು ನಿಮಿಷಗಳಲ್ಲಿಯೆ ಮಗು ಅರೆಗಣ್ಣು ಮುಚ್ಚಿ ಮಲಗಿಕೊಂಡಿತು.

ವೈದ್ಯರಿಗೆ ಯಾವುದೋ ಸೊಪ್ಪು ಬೇಕಾಯಿತು. ಅದು ಬೇರೆಯವರಿಗೆ ಹೇಗೆ ಗೊತ್ತಾಗ ಬೇಕು? ಕತ್ತಲೆಯ ರಾತ್ರಿ ಬೇರೆ. ಪಂಜಿನವರೊಂದಿಗೆ ತಾವೇ ಕಾಡಿಗೆ ಹೋದರು. ಕಲ್ಲು ಎಡುವುತ್ತ, ಮುಳ್ಳುಗಳನ್ನು ತುಳಿಯುತ್ತ ಕಾಡಿನ ತುಂಬಾ ಅಡ್ಡಾಡಿದರು. ಬೇಕಾದ ಸೊಪ್ಪು ಕಣ್ಣಿಗೆ ಕಂಡಾಗ ಚಿಕ್ಕ ಮಕ್ಕಳಂತೆ ಕುಣಿದಾಡಿದರು. ಮರಳಿ ಮನೆಗೆ ಬಂದಾಗ ಮನೆಯಲ್ಲಿ ಕರುಣಾಕ್ರಂದನ ನಡೆದಿತ್ತು. ಮಗುವಿನ ತಂದೆತಾಯಿಗಳು ಕಾತರ ಭಾವದಿಂದ ಮಗುವಿನ ಕೈಕಾಲುಗಳನ್ನು ತಿಕ್ಕುತ್ತಿದ್ದರು. ವೈದ್ಯರು ಬಂದು ನೋಡಿದರು. ತಂದೆತಾಯಿಗಳಿಗೆ ಸಮಾಧಾನವನ್ನು ಹೇಳಿ ತಾವು ತಂದ ಸೊಪ್ಪಿನ ರಸದೊಂದಿಗೆ ಮತ್ತೊಂದುಸಲ ಔಷಧಿಯನ್ನು ಕುಡಿಸಿದರು. ಕುಪ್ಪಿಯಲ್ಲಿದ್ದ ಒಂದು ಲೇಹವನ್ನು ಹಣೆಯ ತುಂಬ ಬಳಿದರು. ಮಗು ಮತ್ತೆ ಕಣ್ಣುಮುಚ್ಚಿ ಬಿದ್ದುಕೊಂಡಿತು.

ಮೂರು-ನಾಲ್ಕು ನಿಮಿಷ ಮೌನದಲ್ಲಿ ಸರಿದವು. ಬಳಿಕ ವೈದ್ಯರು ಭೀಮನಾಯಕನನ್ನು ಕೇಳಿದರು; "ನನ್ನನ್ನು ಕರೆಯುವಂತೆ ನಿನಗೆ ಯಾರು ಹೇಳಿದರು?"

"ಪಟ್ಟಣದಲ್ಲಿರುವ ಯಾವ ಡಾಕ್ಟರರೂ, ಇಲ್ಲಿ ಬಂದು ನೋಡಿ ಹೋಗಲಿಕ್ಕೆ ಒಪ್ಪಲಿಲ್ಲ! ಇಂತಹ ಮಗುವನ್ನು ಅಲ್ಲಿಗೇ ಕರೆದುಕೊಂಡು ಹೋಗುವುದು ಹೇಗೆ? ನಿಮ್ಮ ಮನೆಯ ತುಂಬ ಮದ್ದುಗಳಿದ್ದದ್ದು ನನಗೆ ಗೊತ್ತಿತ್ತು. ಅದಕ್ಕಾಗಿ, ನಿಮ್ಮನ್ನೇ ಕರೆದುಕೊಡು ಬರುವಂತೆ ನಮ್ಮ ಜನರಿಗೆ ಹೇಳಿದೆ!!"

ವೈದ್ಯರೆಂದರು; "ಒಳ್ಳೆದು ಮಾಡಿದಿ. ಇದೊಂದು ದಿನ ಹೋಗಿದ್ದರೆ, ನಿಮ್ಮ ಮಗು ನಿಮಗೆ





©KTBS Not to be republished

ದಕ್ಕುತ್ತಿದ್ದಿಲ್ಲ. ದೇವರು ನನಗೂ ಒಳ್ಳೆಯ ಬುದ್ಧಿಕೊಟ್ಟು, ನಾನೂ ಹೊರಟು ಬಂದೆ. ನೋಡು ಭೀಮಣ್ಣಾ ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ; ಕಾಯುವ ಕೆಲಸಕ್ಕಾಗಿ ಮನಮುಟ್ಟಿ ದುಡಿಯುವವರಿಗೆ ದೇವರ ಸಹಾಯ ಇದ್ದೇ ಇರುತ್ತದೆ."

'ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ.....' ಎಂಬ ಮಾತುಗಳು ಭೀಮನಾಯಕನ ಹೃದಯವನ್ನು ತಟ್ಟಿದವು. ಆಗ ಅವನ ಮನದೊಳಗೊಂದು ಭಾವನೆ ಮೊರೆದೆದ್ದಿತು; "ನಾನೂ ಕಾಯುವ ಕೆಲಸ–ಎಂದು? ಯಾವುದನ್ನು ಮಾಡಿದ್ದೇನೆ? ಇಲ್ಲವೇ ಇಲ್ಲವೆಂದಮೇಲೆ, ದೇವರು ನಮಗೆ ಹೇಗೆ ಸಹಾಯ ಮಾಡುತ್ತಾನೆ?"

ಆಗಲೆ ಮಗುವು ಕಣ್ಣು ತೆರೆದು ಮೆಲುದನಿಯಲ್ಲಿ 'ಅಪ್ಪಾ!' ಎಂದು ಕರೆಯಿತು. ತಾಯಿತಂದೆಗಳಿಬ್ಬರೂ ಆತುರ – ಸಂಭ್ರಮಗಳಿಂದ ಮಗುವನ್ನು ನೋಡಿ ಮೈದಡವಿದರು. ಮಗುವು ನಿಚ್ಚಳವಾಗಿ ಕಣ್ಣು ತೆರೆದಿತ್ತು. ಮಗುವಿನ ಮೈ ಬೆವರಿನಿಂದ ನೆನೆದಿತ್ತು. ತಾಯಿ ನಡುಗುವ ಧ್ವನಿಯಲ್ಲಿ ಹೇಳಿದಳು; "ಮಗುವಿನ ಮೈಗೆ ಬೆವರು ಬಂದಿದೆ"

ವೈದ್ಯರು ಸಂತೃಪ್ತ ಭಾವದಲ್ಲಿ ಗದ್ಗದಿಸುತ್ತಾ ಹೇಳಿದರು; "ದೇವರು ದಯಾಶಾಲಿ, ಆತ ಕೆಡುಕನ್ನೆಂದೂ ಮಾಡನು!" ಮತ್ತೊಂದು ಸಲ ಔಷಧಿಯನ್ನು ಕುಡಿಸುತ್ತಿರುವಾಗ ಬೆಳಗಿನ ಕೋಳಿ ಕೂಗಿತು.

"ತಾಯೀ, ಇನ್ನು ಮೇಲೆ ಇವನು ನಿಮ್ಮ ಮಗ; ಹೆದರುವ ಕಾರಣವೇನೂ ಇನ್ನು ಉಳಿಯಲಿಲ್ಲ!" ಎಂದು ಹೇಳುತ್ತಿರುವಾಗ, ಆ ತಾಯಿ ತಂದೆಗಳಿಬ್ಬರೂ ವೈದ್ಯರನ್ನು ಕೃತಜ್ಞತೆಯ ದೃಷ್ಟಿಯಿಂದ ಮೀಯಿಸುತ್ತಿದ್ದರು. ಆಗ ವೈದ್ಯರು ಆ ಎಡೆಯಲ್ಲಿ ಭೀಕರಾಕಾರದ ಬೇಡರನ್ನು ಕಾಣದೆ, ಮನುಷ್ಯತ್ವದ ಮೂರ್ತಿಗಳನ್ನು ಕಾಣುತ್ತಿದ್ದರು.

ಬೆಳಗಾಗುತ್ತಲೇ ವೈದ್ಯರು ಮನೆಗೆ ಹೊರಟರು. ಆಗ ಭೀಮನಾಯಕ ವೈದ್ಯರ ಕಾಲಮೇಲೆ ಬಿದ್ದು ಹೇಳಿದ; "ಆ ಕಾಣದ ದೇವರು ಇದ್ದಾನೋ ಇಲ್ಲವೋ! ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು! ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ!"

ಮರುದಿವಸ ಅಮವಾಸ್ಯೆಯ ತಮೋರಾತ್ರಿ. ಹತ್ತು ಗಂಟೆಯ ಸಮಯವಾಗಿದೆ. ವೈದ್ಯರ ಮನೆಯ ಮುಂಬಾಗಿಲು ಇನ್ನೂ ತೆರೆದೇ ಇದೆ. ಮೊಗಸಾಲೆಯಲ್ಲಿಯೆ ಗಂಡಹೆಂಡತಿ ಮಾತನಾಡುತ್ತಾ ಕುಳಿತಿದ್ದಾರೆ. ಹೆಂಡತಿ ನುಡಿದಳು; "ನಿಮ್ಮ ವೈದ್ಯಕ ಪ್ರಾವೀಣ್ಯಕ್ಕೆ ದೊರೆಯುವ ಪ್ರತಿಫಲ ತಿಳಿದಂತಾಯಿತು; ಕಾಲತುಂಬಾ ನೆಟ್ಟ ಮುಳ್ಳು; ಎಡವಿದ ಗಾಯ; ನಿದ್ದೆಗೇಡು, ಉಪವಾಸ!"

©KTBS Not to be republished



ನಡತೆ ಮತ್ತು ಜ್ಞಾನವು ಹೃದಯದ ಎರಡು ರೆಕ್ಕೆಗಳು – ಬುದ್ಧ

"ಇದೇನು ನಿನ್ನ ಮಾತು ರತ್ನಾ? ನನ್ನ ವೈದ್ಯಕದ ಪ್ರಾವಿಣ್ಯ, ಒಬ್ಬ ತಾಯಿಯ ಕರುಳನ್ನು ಸಂತಯಿಸಿತು. ಒಬ್ಬ ತಂದೆಯ ಕುಲವನ್ನು ಮುಂದುವರಿಸಿತು. ಅದು ಹೋಗಲಿ ಬಿಡು; ಏಕೊ ಏನೋ ಔಷಧಿಗಾಗಿ ಅವರು ಯಾರೂ ಬರಲಿಲ್ಲ; ಇಷ್ಟರಲ್ಲಿಯೆ ಬರಬೇಕಾಗಿತ್ತು...."

ವೈದ್ಯರು ಮಾತನಾಡುತ್ತಿರುವಾಗಲೆ, ನಿನ್ನೆಯ ದಿನ ಕರೆಯಲು ಬಂದ ಬೇಡರಿಬ್ಬರು ತಲೆಯ ಮೇಲೆ ಗಂಟುಗಳನ್ನು ಹೊತ್ತುಕೊಂಡು ಒಳಗೆ ಬಂದರು. ಅವರ ಹಿಂದಿನಿಂದಲೆ ಭೀಮನಾಯಕನು ಒಳಗೆ ಬಂದ. ಬಂದವನೇ ವೈದ್ಯರಿಗೆ ನಮಸ್ಕಾರ ಮಾಡಿ ಕೇಳಿದ; "ದೇವರ ಒಡವೆಗಳನ್ನು ದೇವರಿಗೆ ಒಪ್ಪಿಸಲು ಬಂದಿದ್ದೇನೆ, ನನ್ನನ್ನು ಕ್ಷಮಿಸಿ, ದಯೆಯಿಟ್ಟು ಎಲ್ಲವನ್ನೂ ಒಪ್ಪಿಸಿಕೊಳ್ಳಬೇಕು".

ಆಳುಗಳಿಬ್ಬರೂ ಗಂಟುಗಳನ್ನು ಬಿಚ್ಚಿ ಮುಂದೆ ಇಟ್ಟರು. ವೈದ್ಯರ ಮನೆಯಲ್ಲಿ ಕಳುವಾಗಿ ಹೋದ ಪದಾರ್ಥಗಳೆಲ್ಲಾ ಅವುಗಳಲ್ಲಿ ಇದ್ದವು. ಭೀಮನಾಯಕ ಮತ್ತೆ ನುಡಿದ; "ತಮ್ಮ ಹಾಸಿಗೆ ನನ್ನ ಮಗನ ಮಗ್ಗುಲಲ್ಲಿ ಇದೆ. ಅದೊಂದನ್ನು ಮಾತ್ರ ತಂದಿಲ್ಲ. ಅದು ತಮ್ಮ ಹರಕೆಯಾಗಿ ನನ್ನ ಮಗನಿಗೆಂದೇ ಇರಲಿ."

ಆಗ ಗಂಡಹೆಂಡತಿ ಇಬ್ಬರೂ ಮಾತನಾಡಲೇ ಇಲ್ಲ. ಅರಳಿದ ಹೃದಯದಿಂದ ವೈದ್ಯರು ಹೆಂಡತಿಯನ್ನು ನೋಡುತ್ತಿದ್ದರು. ಹೆಂಡತಿಯು ಬೆರಗುಗಣ್ಣುಗಳಿಂದ ವೈದ್ಯರ ಕಡೆಗೊಮ್ಮೆ, ಭೀಮನಾಯಕನ ಕಡೆಗೊಮ್ಮೆ ನೋಡುತ್ತಿದ್ದಳು, ಧನ್ಯತೆಯ ಮುಗುಳುನಗೆ ಆಕೆಯ ತುಟಿಗಳ ಮೇಲೆ ಲಾಸ್ಯವಾಡುತ್ತಿತ್ತು.

* * * * *

## ಕೃತಿಕಾರರ ಪರಿಚಯ :



**ಬೆಟಗೇರಿ ಕೃಷ್ಣಶರ್ಮ** ಅವರು ಬೆಳಗಾವಿ ಜಿಲ್ಲೆಯ, ಗೋಕಾಕ್ ತಾಲ್ಲೂಕಿನ ಬೆಟಗೇರಿಯವರು. ಇವರ ಕಾವ್ಯನಾಮ 'ಆನಂದಕಂದ'. ಇವರು ೧೯೦೦ ರಲ್ಲಿ ಜನಿಸಿದರು. ಇವರು 'ಜಯಂತಿ', 'ಸ್ವಧರ್ಮ', 'ಜಯ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿದ್ದರು. ಇವರು 'ಸಂಸಾರ ಚಿತ್ರಗಳು', 'ಮಾತನಾಡುವ ಕಲ್ಲು' 'ಕಳ್ಳರ ಗುರು' ಮುಂತಾದ ಕಥಾಸಂಕಲನಗಳನ್ನು, 'ರಾಜಯೋಗಿ', 'ಅಶಾಂತಿ ಪರ್ವ', 'ಮಗಳ ಮದುವೆ' ಮೊದಲಾದ ಕಾದಂಬರಿಗಳನ್ನೂ, 'ಕಾರ ಹುಣ್ಣಿಮೆ', 'ನಲ್ವಾಡುಗಳು', 'ಭಾವಗೀತ' ಮೊದಲಾದ ಕವನ ಸಂಕಲನಗಳನ್ನೂ ರಚಿಸಿದ್ದಾರೆ. ಇವರ 'ಕರ್ನಾಟಕ ಜನಜೀವನ' ಕೃತಿಯು ಕರ್ನಾಟಕದ ಇತಿಹಾಸ ಸಂಸ್ಕೃತಿಗಳನ್ನು ಚಿತ್ರಿಸಿರುವ ವಿಶಿಷ್ಟ ಕೃತಿಯಾಗಿದೆ.

ಇವರಿಗೆ 'ಕವಿ ಭೂಷಣ' ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ 'ಗೌರವ ಡಾಕ್ಟರೇಟ್' ಪದವಿಗಳು ಲಭಿಸಿವೆ. ಇವರು ೧೯೮೨ ರಲ್ಲಿ ನಿಧನ ಹೊಂದಿದರು.

©KTBS Not to be republished



ಆಸೆ ಎಂಬ ಹಾವು ಯಾರೂ ಕೆಣಕದಿದ್ದರೂ ಎಲ್ಲರನ್ನೂ ಕಡಿಯುತ್ತದೆ.

## ಅಭ್ಯಾಸ ಪ್ರಶ್ನೆಗಳು

೧. ವೈದ್ಯರು ತನ್ನ ವೃತ್ತಿಯ ಕುರಿತು ಹೆಂಡತಿ ರತ್ನಳಿಗೆ ಏನು ಹೇಳಿದರು?
೨. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?
೩. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?
೪. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು?
೫. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?
೬. ವೈದ್ಯರು, ತಮ್ಮ ಸೇವೆಯಿಂದ ಯಾವ ಪ್ರತಿಫಲಗಳು ಲಭಿಸಿದವು ಎಂದು ತನ್ನ ಹೆಂಡತಿಗೆ ಹೇಳಿದರು?
೭. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ಏನೆಂದು ಹೇಳಿದನು?
೮. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ?
೯. ಕಳ್ಳರ ಗುರುವಿನ ಮನಃಪರಿವರ್ತನೆ ಹೇಗಾಯಿತು?
೧೦. 'ಕಳ್ಳರ ಗುರು' ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರಗಳೇನು?

©KTBS Not to be republished

# ೨. ಹೊಂಗೆ ಬೇವುಗಳ ಹಾಡು

– ಎಚ್. ಎಲ್. ಪುಷ್ಪ

ಬದುಕ ಬದುವ ಬೇಲಿಯಲ್ಲಿ
ಹೊಂಗೆ ಮರದ ಜೋಲಿಯಲ್ಲಿ
ಅರಳಿದೆ ಹೂವು, ಮಲಗಿದೆ ಮಲ್ಲಿಗೆಯಂತ ರೂಪು
ತಾಯಿಯಂತ ನೆರಳಲು, ಕರುಳಿನಂತ ಮಡಿಲು

ನೆತ್ತಿ ಮೇಲೆ ಸೂರು, ಮೇಲೆ ಮೇಲೆ ರವಿಯ ಕಣ್ಣು
ತೆಂಗು, ಹೊಂಗೆ, ಹಿಪ್ಪೆ, ಬೇವು ಜೀವಜಾಲ ನೇದಿವೆ
ಬದುಕ ಬಂಡಿ ಉರುಳತಲಿದೆ
ತೈಲವಿದೆ, ಬತ್ತಿಯಿದೆ ಬದುಕು ಬಂಗಾರವಿದೆ
ಅರಳಿದ ಕೈಯ ಕಮಲದಲ್ಲಿ ನಾಳಿನ ಚಿನ್ನದಂಥ ಬೆಳಕಿದೆ

ಹೊಳೆಯ ದಂಡೆಯ ಸಾಲಿನಲ್ಲಿ
ರಾಜ್ಯಹುಟ್ಟಿ, ರಾಜ್ಯವುರುಳಿ, ಸಾಗಿ ಸಾಗಿ
ಶತಶತಮಾನಗಳ ನೇಗಿಲಯೋಗಿ ಸಾಗಿ ಸಾಗಿ
ಅದೇ ಸಂತೆ, ಅದೇ ಜಾತ್ರೆ, ಗೊಬ್ಬರದ ಹಾಡು ಹೊಮ್ಮಿದೆ

ನೋಡಿರಣ್ಣ ನೋಡಿರೋ ಈ ಲೋಕವ
ಬಣ್ಣ ಬಣ್ಣ ಚಿಟ್ಟೆ ಹಾರಿ ಭೃಂಗದ ಸಂಗೀತ ಕೇಳಿ
ಕೆಳಗೆ ಹೊಂಗೆ, ಜೀವ ಹೂವ ಹಾಸಿಗೆ
ಗಮ ಗಮಿಸೋ ಗಮಲಿನಲ್ಲಿ
ಇಲ್ಲೇ ಎಲ್ಲೋ ಅಡಗಿ ನಾಳೆಯೆಂಬ ಕೂಸಿದೆ.

©KTBS
Not to be republished



ಆತ್ಮವಿಶ್ವಾಸ, ನಿಶ್ಚಿತ ಗುರಿ, ಸಂಯಮವು ಇವು ಯಶಸ್ಸಿನ ಮೂರು ಅಂಶಗಳು.

ಅಲ್ಲಿ ಅದೋ ನಗರವಣ್ಣ ಎಲ್ಲಾ ತಿಂದು ತೇಗಿದೆ
ಬೆನ್ನ ಹಿಂದೆ ಉಳಿದುದೇನು
ಬಗೆಬಗೆಯ ಕಾರೇನು, ಪಟಪಟ ಮೋಟಾರೇನು
ಅಲ್ಲಿ ಮೇಲೆ ಲೋಹದ ಹಕ್ಕಿಯ ಹಾರಾಟವೇನು
ಜೀವದ ಇಂಧನ ತೀರುತಲಿದೆ
ಬದುಕು ನಾಳೆ ಎಂತೋ ಏನೋ
ಯಾಕೋ ಅಳಲು ಕಾಡಿದೆ
ಹಾರೋ ಹಕ್ಕಿ ಹಸಿರು ತೀರುತಲಿದೆ
ಯಾಕೋ ಏನೋ, ಯಾಕೋ ನಾಳಿನ ತೈಲ ಕಾಡಿದೆ.

ತೀರಿದರೂ ಜೀವ ತೈಲ, ಬೇಡವಣ್ಣ ಅಳಲು
ಇಲ್ಲೇ ಇಲ್ಲೇ ಇಲ್ಲೇ ಇದೆ
ಹೊಂಗೆ ಸಿಪ್ಪೆ ಒಡಲಲಿ ತೈಲ ಜಿನುಗಿದೆ
ಒಡಲಲ್ಲೇ ಅಡಗಿ ಭ್ರೂಣವಾಗಿದೆ
ನವಮಾಸ ತುಂಬಲಿ
ಎಲ್ಲ ಮರದ ಜೀವತೈಲ ತೆವಳಿ ಬರಲಿ
ನಾಳಿನ ಲೋಕದ ತೈಲಧಾರೆ ಹರಿದು ಹರಿದು ಸೇರಲಿ

ತೆಂಗು ತಾರೆಗಳ ನಾಡಿನಲ್ಲಿ
ಬೆವರ ಹನಿಯ ಸಾಲೆಯಲ್ಲಿ ಜೀವಾಮೃತವಡಗಿದೆ
ಜೀವ ಹಿಂಡಿ, ಒಡಲ ಹಿಂಡಿ
ತೈಲಧಾರೆ ಹೊಮ್ಮಿ ಬರಲಿ
ಹೊಂಗೆ, ಹಿಪ್ಪೆ, ಜೀವ ಮೇಳ ನಡೆಯಲಿ
ನಾಳೆಯೆಂಬ ಚಪ್ಪರದ ಕೆಳಗೆ
ಮನುಕುಲದ ಮೊಳಕೆ ಒಡೆಯಲಿ, ಭವ್ಯ ಬದುಕು ಅರಳಲಿ.

* * * *





©KTBS Not to be republished

## ಕೃತಿಕಾರರ ಪರಿಚಯ :



**ಡಾ. ಎಚ್. ಎಲ್. ಪುಷ್ಪ** ಅವರು ಹಾಸನ ಜಿಲ್ಲೆಯ ಹೊಳೆನರಸೀಪುರದವರು. ಇವರು ೧೯೬೧ ರಲ್ಲಿ ಜನಿಸಿದರು. ಕನ್ನಡದಲ್ಲಿ ಎಂ.ಎ. ಹಾಗೂ ಪಿಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ 'ಅಮೃತಮತಿಯ ಸ್ವಗತ', 'ಗಾಜುಗೋಳ' 'ಕನ್ನಡ ನಾಟಕಗಳಲ್ಲಿ ಮೈಮನಸ್ಸುಗಳ ಸಂಬಂಧ' ಇತ್ಯಾದಿ.

ಇವರಿಗೆ ಉದಯ ಭಾರತಿ ರಾಷ್ಟ್ರೀಯ ಪುರಸ್ಕಾರ, ಕಡೆಂಗೋಡ್ಲು ಶಂಕರಭಟ್ಟ ಪ್ರಶಸ್ತಿ, ಪುತಿನ ಕಾವ್ಯ ಪುರಸ್ಕಾರಗಳು ಲಭಿಸಿವೆ. ಪ್ರಸ್ತುತ ಕವನವನ್ನು 'ಜೀವ ಸರಪಳಿಯ ಗೂಡು' ಸಂಗ್ರಹ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಅಭ್ಯಾಸ ಪ್ರಶ್ನೆಗಳು

೧. ಬದುಕ ಬದುವ ಬೇಲಿಯಲ್ಲಿ ಏನೇನು ಇದೆ?

೨. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?

೩. ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ?

೪. ನಾಗರೀಕತೆಯ ಬೆಳವಣಿಗೆಯ ಬಗ್ಗೆ ಕವಯಿತ್ರಿಗೆ ಯಾವ ಅಳುಕು ಇದೆ?

೫. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ?

©KTBS Not to be republished